ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ನಳಿನ್ ಕಟೀಲ್ ಗಣಿತ

1 ಡಾಲರ್ = 15 ರೂಪಾಯಿ
1 ರೂಪಾಯಿ = 15 ಡಾಲರ್

ಸಂಪುಟ 11 | ಸಂಚಿಕೆ 05 | ಜನವರಿ 23–29, 2017 | ಪುಟ 16 | ರೂ.10/-


Web : www.janashakthi.co.in e-mail : janashakthi2007@gmail.com



ಕರ್ನಾಟಕದಲ್ಲಿ ಸಂಚಲನ ಮೂಡಿಸಿದ

ದುಡಿವ ಜನರ ಮಾಣಿಕ್ಯ

ಜನವರಿ 31 : ಕಾರ್ಮಿಕರ ಅನಿರ್ದಿಷ್ಟ ಹೋರಾಟ



ಗಾಂಧಿಯಾಗಿ ಮೋದಿ : ಕಾರಟ್

ಗಣರಾಜ್ಯ ಉಳಿಸಿ ಜನರಾಜ್ಯ ಬೆಳೆಸಿ

ಎಡವೂ ಅಲ್ಲ ಬಲವೂ ಅಲ್ಲ : ಚೆನ್ನಿ

ಅನಾಣ್ಯೀಕರಣದ ನಿಜ ಉದ್ದೇಶಗಳನ್ನು ಬಯಲಿಗೆಳೆಯಲು ಪ್ರಚಾರಾಂದೋಲನ

ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧಾರ

ನವ-ಉದಾರವಾದಿ ಆರ್ಥಿಕ ಸುಧಾರಣೆಗಳಿಗೆ ಬದ್ಧವಾಗಿರುವ ಈ ಬಿಜೆಪಿ ಸರಕಾರ ಅದರ ಭಾಗವಾಗಿ ನಡೆಸಿರುವ ಅನಾಣ್ಯೀಕರಣದ ನಿಜ ಉದ್ದೇಶಗಳನ್ನು ಬಯಲಿಗೆಳೆಯಲು ಜನವರಿ ತಿಂಗಳ ಕೊನೆಯ ಭಾಗದಲ್ಲಿ ಒಂದು ಸ್ವತಂತ್ರ ಪ್ರಚಾರಾಂದೋಲನ ನಡೆಸಲು ಸಿಪಿಐ(ಎಂ) ನಿರ್ಧರಿಸಿದೆ. ಜನವರಿ 6ರಿಂದ 8ರ ವರೆಗೆ ತಿರುವನಂತಪುರದಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಈ ನಿರ್ಧಾರವನ್ನು ಮಾಡಿದೆ.

ಸಿಪಿಐ(ಎಂ)ನೊಂದಿಗೆ ಕೈಜೋಡಿಸುವ ಎಲ್ಲ ಸಾಮೂಹಿಕ ಸಂಘಟನೆಗಳು ನಿರ್ದಿಷ್ಟ ಜನಸಮೂಹಗಳ, ಅಂದರೆ ಅಸಂಘಟಿತರು, ದಿನಗೂಲಿ ಕಾರ್ಮಿಕರು, ಕೃಷಿ ಕೂಲಿಕಾರರು, ರೈತರು, ಮಹಿಳೆಯರು, ಯುವಜನರು ಮುಂತಾದವರ ಮೇಲೆ ಇದರಿಂದಾಗಿರುವ ದುಷ್ಪರಿಣಾಮಗಳು, ಸಂಕಟಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳನ್ನು ನಡೆಸುತ್ತವೆ ಹಾಗೂ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಜಂಟಿಯಾಗಿ ಪ್ರತಿಭಟನೆಗಳನ್ನು ನಡೆಸುತ್ತವೆ ಎಂದೂ ಸಿಪಿಐ(ಎಂ) ಕೇಂದ್ರಸಮಿತಿಯ ಸಭೆಯ ನಂತರ ಪ್ರಕಟಿಸಿರುವ ಹೇಳಿಕೆಯಲ್ಲಿ ತಿಳಿಸಿದೆ. ಇವೆಲ್ಲ ಹತ್ತು ಬೇಡಿಕೆಗಳ ಮೇಲೆ ನಡೆಯುತ್ತವೆ(ಬಾಕ್ಸ್ ನೋಡಿ)

ಬ್ಯಾಂಕುಗಳಿಂದ/ಎಟಿಎಂ ಮೂಲಕ ತಮ್ಮ ಹಣವನ್ನು ತೆಗೆಯಲು ಜನಗಳ ಮೇಲೆ ಹಾಕಿರುವ ಮಿತಿಗಳನ್ನೆಲ್ಲ ತಕ್ಷಣ ತೆಗೆಯಬೇಕು ಮತ್ತು ಡಿಜಿಟಲ್ ವ್ಯವಹಾರಗಳನ್ನೇ ನಡೆಸುವಂತೆ ಜನಗಳಿಗೆ ಜುಲುಮೆ ಮಾಡಬಾರದು ಎಂಬ ಬೇಡಿಕೆಗಳ ಮೇಲೆ ಜಂಟಿ ಪ್ರತಿಭಟನೆಗಳಲ್ಲಿ ಸಿಪಿಐ(ಎಂ) ಎಲ್ಲ ಪಕ್ಷಗಳೊಂದಿಗೆ ಆಂದೋಲನಗಳೊಂದಿಗೆ ಸಹಕರಿಸುತ್ತದೆ ಎಂದೂ ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಯಾವ ಉದ್ದೇಶವನ್ನೂ ಈಡೇರಿಸದ ಅನಾಣ್ಯೀಕರಣದ ಕ್ರಮ

ಪ್ರಧಾನ ಮಂತ್ರಿಗಳು ನವಂಬರ್ 8ರಂದು ಪ್ರಕಟಿಸಿದ 1000 ಮತ್ತು 500 ರೂಪಾಯಿ ನೋಟುಗಳ ಅನಾಣ್ಯೀಕರಣ ನಮ್ಮ ಆರ್ಥಿಕ ವ್ಯವಸ್ಥೆಗೆ ಅಪಾರ ನಷ್ಟ ಉಂಟುಮಾಡಿದೆ, ಕೋಟ್ಯಂತರ ಜನಗಳ ಜೀವನಾಧಾರಕ್ಕೆ ಕಲ್ಲು ಹಾಕಿ ಸಂಕಟಪಡುವಂತೆ ಮಾಡಿದೆ. ಐವತ್ತು ದಿನಗಳ ಅವಕಾಶ ಕೋರಿದ ಪ್ರಧಾನ ಮಂತ್ರಿಗಳು ಆ ಮೇಲೆ ಪರಿಸ್ಥಿತಿ ಸಾಮಾನ್ಯಗೊಳ್ಳುವುದೆಂದು ಭರವಸೆ ನೀಡಿದರು. ಆದರೆ ಪರಿಸ್ಥಿತಿ ಸಾಮಾನ್ಯಗೊಂಡಿಲ್ಲ, ಮಾತ್ರವಲ್ಲ, ಜನಗಳ ಸಂಕಟಗಳು ಮುಂದುವರೆಯುತ್ತಲೇ ಇವೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ. ಜನಗಳು ಬ್ಯಾಂಕುಗಳಲ್ಲಿ ಇರಿಸಿರುವ ತಮ್ಮದೇ ಹಣವನ್ನು ತೆಗೆಯಲು ಹಾಕಿರುವ ಮಿತಿಗಳು ಮುಂದುವರೆಯುತ್ತಲೇ ಇವೆ.

ಪ್ರಧಾನ ಮಂತ್ರಿಗಳು ಈ ಕ್ರಮ ಕೈಗೊಳ್ಳಲು ಪಟ್ಟಿ ಮಾಡಿದ ನಾಲ್ಕು ಉದ್ದೇಶಗಳಲ್ಲಿ, ಅಂ-ದರೆ ಕಪ್ಪು ಹಣದ ವಿರುದ್ಧ, ಭ್ರಷ್ಟಾಚಾರದ ವಿರುದ್ಧ, ಖೋಟಾ ನೋಟುಗಳ ವಿರುದ್ಧ ಮತ್ತು ಭಯೋತ್ಪಾದನೆಗೆ ಹಣ ನೀಡಿಕೆಯ ವಿರುದ್ಧ ಹೋರಾಟಗಳು-ಯಾವುದೂ ಈಡೇರಿಲ್ಲ. ಸ್ವತಃ ಪ್ರಧಾನ ಮಂತ್ರಿಗಳೇ ಕಪ್ಪು ಹಣದ 90%ವನ್ನು ವಿದೇಶಿ ತೆರಿಗೆಮುಕ್ತಧಾಮಗಳಲ್ಲಿ ಇಡಲಾಗಿದೆ ಎಂದು ಸಾರ್ವಜನಿಕವಾಗಿ ಹೇಳಿದ್ದರು. ಆದರೆ ಇದುವರೆಗೂ ಅದರಲ್ಲಿ ಒಂದು ರೂಪಾಯಿಯನ್ನೂ ಮುಟ್ಟಿಲ್ಲ, ಅವುಗಳನ್ನು ವಸೂಲಿ ಮಾಡುವ ಪ್ರಯತ್ನವನ್ನೂ ಮಾಡಿಲ್ಲ.

ಕಪ್ಪು ಹಣ ಬಿಳಿಯಾಗಿದೆ ಖೋಟಾ ನೋಟು ಸಾಚಾ ಆಗಿದೆ?

ಈಗ ಅನಾಣ್ಯೀಕರಣ ಮಾಡಿರುವ ಸುಮಾರಾಗಿ ಎಲ್ಲ ಹಣವೂ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿರುವುದರಿಂದ ನಗದು ರೂಪದಲ್ಲಿದ್ದ ಕಪ್ಪು ಹಣವೂ ಈಗ ಬಿಳಿಯಾಗಿ ಪರಿವರ್ತನೆಗೊಂಡು ಬ್ಯಾಂಕುಗಳಲ್ಲಿ ಇದೆ. ಬ್ಯಾಂಕುಗಳಲ್ಲಿ ಠೇವಣಿಯಾದ ನೋಟುಗಳ ಒಟ್ಟು ಮೊತ್ತ ಎಷ್ಟು ಎಂಬುದನ್ನು ಇನ್ನೂ ಬಹಿರಂಗ ಪಡಿಸಿಲ್ಲ. ಅದು ಹಿಂತೆಗೆದು-ಕೊಂಡ ನೋಟುಗಳ ಮೊತ್ತಕ್ಕಿಂತಲೂ ಹೆಚ್ಚಿದ್ದರೆ, ಚಲಾವಣೆಯಲ್ಲಿದ್ದ ಖೋಟಾ ನೋಟುಗಳೂ ಸಾಚಾ ಆಗಿ ಬಿಟ್ಟವೆ ಎಂದರ್ಥವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಹೊಸ ನೋಟುಗಳನ್ನು ವಶಪಡಿಸಿಕೊಂಡಿರುವುದು ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ಇನ್ನೂ ಇದೆ ಎಂಬುದನ್ನು ಸೂಚಿಸುತ್ತದೆ. **ಈ ಕ್ರಮ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವುದು ಅಂತಿರಲಿ, ಅದು ಹೊಸ ಮತ್ತು ಇನ್ನೂ ಮೇಲ್ಮಟ್ಟದ ಭ್ರಷ್ಟಾಚಾರದ ಸ್ವರೂಪಗಳನ್ನು ಸೃಷ್ಟಿಸಿದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.**

ಇನ್ನು, ಭಯೋತ್ಪಾದನೆಗೆ ಹಣದ ಪೂರೈಕೆಯನ್ನು ತಡೆಯುತ್ತದೆ ಎಂಬ ಬಗ್ಗೆ ಪರಿಶೀಲಿಸಿದರೆ, ಇದು ಯಾವ ಪರಿಣಾಮವನ್ನೂ ಬೀರಿಲ್ಲ ಎಂಬುದನ್ನು ಸೆಪ್ಟಂಬರ್ 30ರ 'ಮಿಂಚಿನ ಪ್ರಹಾರ'ದ ನಂತರ 33 ಭದ್ರತಾ ಸಿಬ್ಬಂದಿ ಭಯೋತ್ಪಾದಕ ದಾಳಿಗಳಲ್ಲಿ ಪ್ರಾಣ ಕಳಕೊಂಡಿದ್ದಾರೆ ಎಂಬ ಸಂಗತಿಯೇ ಹೇಳುತ್ತದೆ. ಇದರಿಂದಾಗಿ 2016ರಲ್ಲಿ ಭದ್ರತಾ ಸಿಬ್ಬಂದಿಯ ಸಾವಿನ ಪ್ರಮಾಣ 2015ರ ದುಪ್ಪಟ್ಟು ಎಂಬ ಸಂಗತಿಯತ್ತವೂ ಸಿಪಿಐ(ಎಂ) ಗಮನ ಸೆಳೆದಿದೆ.

ಈ ಅನಾಣ್ಯೀಕರಣ ಕೋಟ್ಯಂತರ ಭಾರತೀಯರ ಬದುಕನ್ನು ಛಿಂದಿ ಮಾಡಿದೆ. ಇದು ದೇಶದಲ್ಲಿನ ಆರ್ಥಿಕ ಅಸಮಾನತೆಗಳ ಮೇಲೂ ಪರಿಣಾಮ ಬೀರುವುದು ಖಂಡಿತ. ಈಗಾಗಲೇ ಈ ಬಿಜೆಪಿ ಸರಕಾರ ಅಧಿಕಾರ ವಹಿಸಿಕೊಂಡ ಎರಡು ವರ್ಷಗಳಲ್ಲೇ ಅದು ತೀವ್ರವಾಗಿ ಏರಿದೆ. 2014ರಲ್ಲಿ ಭಾರತೀಯ ಜನಸಂಖ್ಯೆಯ 1 ಶೇಕಡಾದಷ್ಟು ಸೂಪರ್ ಶ್ರೀಮಂತರು ದೇಶದ ಜಿಡಿಪಿಯ 49%ದಷ್ಟು ಆಸ್ತಿಗಳನ್ನು ಹೊಂದಿದ್ದರು. 2016ರ ವೇಳೆಗೆ ಪ್ರಧಾನ ಮಂತ್ರಿ ಮೋದಿಯವರ ನವ-ಉದಾರವಾದಿ ಧೋರಣೆಗಳಿಂದಾಗಿ ಇದು 58.4ಶೇ.ಕ್ಕೆ ಏರಿದೆ. ಈಗ ಅನಾಣ್ಯೀಕರಣದ ಪ್ರಭಾವದಿಂದಾಗಿ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸುವ ಮತ್ತು ಬಡವರನ್ನು ಮತ್ತಷ್ಟು ದಾರಿದ್ರ್ಯಕ್ಕೆ ತಳ್ಳುವ ಕ್ರಿಯೆ ಇನ್ನಷ್ಟು ತೀವ್ರಗೊಳ್ಳುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿದೆ.

ಘೋಷಿತ ಉದ್ದೇಶಗಳು ಯಾವುದೂ ನೆರವೇರದೆ, ನಗದು ಆರ್ಥಿಕವನ್ನು ಒಂದು ಡಿಜಿಟಲ್ ಆರ್ಥಿಕವಾಗಿ ಪಲ್ಲಟಗೊಳಿಸಲು ಹಾಕುತ್ತಿರುವ ಒತ್ತಿನಿಂದ ಈ ಅನಾಣ್ಯೀಕರಣದ ನಿಜ ಉದ್ದೇಶ ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಡಿಜಿಟಲ್ ಪಾವತಿಗಳತ್ತ ಪಲ್ಲಟದ ಮಾತು ಹಾಸ್ಯಾಸ್ಪದ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ವಿಶ್ಲೇಷಿಸಿದೆ. ಏಕೆಂದರೆ ಗ್ರಾಮೀಣ ಭಾರತದ 13% ಮಂದಿಗೆ, ಅಂದರೆ 83.4 ಕೋಟಿ ಜನರಲ್ಲಿ 10.8 ಕೋಟಿ ಜನಗಳಿಗೆ ಮಾತ್ರ ಇಂಟರ್ನೆಟ್ ಸೌಲಭ್ಯ ಲಭ್ಯವಿದೆ. ಕೇವಲ 26%ಮಂದಿಗಷ್ಟೇ ಸ್ಮಾರ್ಟ್‌ಫೋನ್‌ಗಳು ಲಭ್ಯ ಇವೆ. ನಗದು ವ್ಯವಹಾರಗಳ ಮೇಲೆಯೇ ಬಹಳಷ್ಟು ಅವಲಂಬಿಸಿರುವುದರಿಂದಾಗಿ ಹಲವಾರು ವಲಯಗಳಿಗೆ ತಟ್ಟಿರುವ ಹಾವಳಿ ಅಪಾರ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಗಮನಿಸಿದೆ.

ಅದೇ ವೇಳೆಯಲ್ಲಿ, ಡಿಜಿಟಲ್ ವ್ಯವಹಾರಗಳತ್ತ ಚಲಿಸುವುದರ ಮೇಲೆ ಹಾಕುತ್ತಿರುವ ಒತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಕಾರ್ಪೊರೇಟ್‌ಗಳಿಗೆ ಗರಿಷ್ಟ ಲಾಭಗಳಿಕೆಗೆ ನೀಡಿರುವ ಬಕ್ಷೀಷು ಎಂದು ಸಿಪಿಐ(ಎಂ) ವರ್ಣಿಸಿದೆ. ಪ್ರತಿಯೊಂದು ಡಿಜಿಟಲ್ ವ್ಯವಹಾರದಲ್ಲಿ ವ್ಯವಹಾರದ ವೆಚ್ಚ ಎಂಬಿದಿದೆ, ಇದು ಬಳಕೆದಾರರ ಮೇಲೆ ಹೆಚ್ಚಿನ ಹೊರೆ ಹಾಕಿದರೆ, ಕಾರ್ಪೊರೇಟ್‌ಗಳಿಗೆ ಲಾಭದ ಒಂದು ಮೂಲವಾಗಿದೆ. ಅಂದರೆ, ಈ ಸರಕಾರ ನವ-ಉದಾರವಾದಕ್ಕೆ ಭಾರತದ ಅಡಿಯಾಳುತನದ ಭಾಗವಾಗಿ ಈ ಅನಾಣ್ಯೀಕರಣದ ಕಸರತ್ತನ್ನು ನಡೆಸಿದೆ ಎಂಬುದು ಸ್ಪಷ್ಟ.

ಈ ಹಿನ್ನೆಲೆಯಲ್ಲಿ 10 ಬೇಡಿಕೆಗಳ ಮೇಲೆ (ಬಾಕ್ಸ್ ನೋಡಿ) ಜನಗಳನ್ನು ಅಣಿನೆರೆಸಲು ಸಿಪಿಐ(ಎಂ) ನಿರ್ಧರಿಸಿದೆ:

ರಾಜಕೀಯ ಭ್ರಷ್ಟಾಚಾರ – ಪ್ರಧಾನ ಮಂತ್ರಿಗಳಿಗೆ ಸವಾಲು

ಎಲ್ಲ ರಾಜಕೀಯ ಪಕ್ಷಗಳು ತಾವು ಪಡೆಯುವ ಹಣದ ಬಗ್ಗೆ ಸ್ವಚ್ಛವಾಗಿರಬೇಕು ಮತ್ತು ಪಾರದರ್ಶಕತೆ ಇರಬೇಕು ಎಂದು ಪ್ರಧಾನ ಮಂತ್ರಿಗಳು ಹೇಳಿದ್ದಾರೆ. **ಪ್ರಧಾನ ಮಂತ್ರಿಗಳೇ ಮೊದಲು ದೇಶದ ಎಲ್ಲೆಡೆಗಳಲ್ಲಿ ಅವರ ರ್‍ಯಾಲಿಗಳಿಗೆ ಬಿಜೆಪಿ ಎಲ್ಲಿಂದ ಹಣ ತರುತ್ತದೆ ಮತ್ತು ಪ್ರತಿ ರ್‍ಯಾಲಿಗೆ ಮಾಡಿದ ಖರ್ಚು ಎಷ್ಟು ಎಂದು ಸಾರ್ವಜನಿಕವಾಗಿ ತಿಳಿಸಲಿ ಎಂದು ಸಿಪಿಐ(ಎಂ) ಸವಾಲು ಹಾಕಿದೆ.** 2014ರ ಚುನಾವಣಾ ಪ್ರಚಾರಕ್ಕೆ ಪ್ರಧಾನ ಮಂತ್ರಿ ಮೋದಿ ಮಾಡಿರುವ ಖರ್ಚೆಷ್ಟು ಎಂದು ಇದುವರೆಗೂ ದೇಶಕ್ಕೆ ತಿಳಿದಿಲ್ಲ. **ಪ್ರಧಾನ ಮಂತ್ರಿಗಳು ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್‌ಗಳು ಹಣ ನೀಡುವುದನ್ನು ನಿಷೇಧಿಸಬೇಕು ಎಂಬ ಸಿಪಿಐ(ಎಂ) ಸೂಚನೆಯನ್ನು ಸ್ವೀಕರಿಸುತ್ತಾರೆಯೇ? ಚುನಾವಣೆಗಳ ಸಮಯದಲ್ಲಿ ರಾಜಕೀಯ ಪಕ್ಷಗಳು ಮಾಡುವ ಖರ್ಚುಗಳನ್ನು ಅಭ್ಯರ್ಥಿಗಳ ಖರ್ಚಿನ ಮೇಲೆ ಚುನಾವಣಾ ಆಯೋಗ ವಿಧಿಸಿರುವ ಮಿತಿಗಳಿಗೆ ಸೇರಿಸಬೇಕು ಎಂಬುದಕ್ಕೆ ಒಪ್ಪುತ್ತಾರೆಯೇ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪ್ರಶ್ನಿಸಿದೆ.**

ಲೋಕಸಭೆ ಮತ್ತು ವಿಧಾನ ಸಭೆಗೆ ಒಟ್ಟಿಗೇ ಚುನಾವಣೆಗಳು: ಸಂಪೂರ್ಣ ಪ್ರಜಾಪ್ರಭುತ್ವ-ವಿರೋಧಿ ಪ್ರಸ್ತಾವ

ಲೋಕಸಭೆ ಮತ್ತು ವಿಧಾನ ಸಭೆಗೆ ಏಕಕಾಲದಲ್ಲಿ ಚುನಾವಣೆಗಳು ನಡೆಯಬೇಕು ಎಂಬ ಪ್ರಧಾನ ಮಂತ್ರಿಗಳ ಪ್ರಸ್ತಾವ ಸಂಪೂರ್ಣವಾಗಿ ಪ್ರಜಾಪ್ರಭುತ್ವ-ವಿರೋಧಿ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ. ಸ್ವತಂತ್ರ ಭಾರತದ ಚುನಾವಣಾ ಇತಿಹಾಸ 1952 ರಲ್ಲಿ ಏಕಕಾಲದಲ್ಲಿ ಚುನಾವಣೆಗಳೊಂದಿಗೇ ಆರಂಭವಾಯಿತು. ಆದರೆ ಇದನ್ನು ಕೇಂದ್ರದಲ್ಲಿ ಆಳಿದ ಪಕ್ಷಗಳೇ 356ನೇ ಕಲಮಿನ ದುರುಪಯೋಗ ಮತ್ತು ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ರಾಜ್ಯ ಸರಕಾರಗಳನ್ನು ವಜಾ ಮಾಡುವ ಮೂಲಕ ಛಿದ್ರಗೊಳಿಸಿದವು. ಅಷ್ಟೇ ಅಲ್ಲ, ಒಂದು ಪ್ರಜಾಪ್ರಭುತ್ವದಲ್ಲಿ ಸಮ್ಮಿಶ್ರ ಸರಕಾರವೊಂದು ಕುಸಿಯಬಹುದು, ಆಗ ಜನತೆಯ ಬಳಿಗೆ ಮತ್ತೆ ಹೋಗುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಎಂದರೆ ಪ್ರಾಥಮಿಕ ಪ್ರಜಾಪ್ರಭುತ್ವ ಹಕ್ಕುಗಳ ನಿರಾಕರಣೆಯಾಗುತ್ತದೆ, ಮತ್ತು ನಮ್ಮ ಸಂವಿಧಾನದ ಒಕ್ಕೂಟ ರಚನೆಯ ಉಲ್ಲಂಘನೆಯಾಗುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಖಡಾಖಂಡಿತವಾಗಿ ಹೇಳಿದೆ.

ಮುಂಬರುವ ವಿಧಾನಸಭಾ ಚುನಾವಣೆಗಳು

ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಅಂಗೀಕರಿಸಬೇಕಾದ ಕಾರ್ಯತಂತ್ರದ ಬಗ್ಗೆ ಕೇಂದ್ರ ಸಮಿತಿ ಚರ್ಚಿಸಿತು. ಸಿಪಿಐ(ಎಂ) ಇತರ ಎಡಪಕ್ಷಗಳೊಂದಿಗೆ ಈ ಚುನಾವಣೆಗಳಲ್ಲಿ ಸ್ಪರ್ಧಿಸಿ ಜನಗಳ ಮೇಲೆ ಪ್ರಸಕ್ತ ನವ-ಉದಾರವಾದಿ ಆರ್ಥಿಕ ದಾಳಿಗಳು ಮತ್ತು ಕೋಮುವಾದಿ ಧ್ರುವೀಕರಣದ ಅಪಾಯಗಳ ವಿರುದ್ಧ ಎಡ ಪರ್ಯಾಯ ಧೋರಣೆಗಳನ್ನು ಸ್ವತಂತ್ರವಾಗಿ ಪ್ರಸ್ತುತ ಪಡಿಸಬೇಕು ಎಂದು ನಿರ್ಧರಿಸಿದೆ.

ಕೇರಳ ಕುರಿತ ಪಿಬಿ ಆಯೋಗ

ಕೇರಳ ಕುರಿತಂತೆ ರಚಿಸಿದ ಪೊಲಿಟ್‌ಬ್ಯುರೊ ಆಯೋಗದ ವರದಿಯನ್ನು ಕೇಂದ್ರ ಸಮಿತಿ ಮಂಜೂರು ಮಾಡಿತು. ಅದು ವರದಿಯಲ್ಲಿ ಗುರುತಿಸಿದ ಪಕ್ಷದ ನೀತಿ-ನಿಯಮಗಳ ಉಲ್ಲಂಘನೆಗಳ ಬಗ್ಗೆ ಕಾಮ್ರೇಡ್ ವಿ ಎಸ್ ಅಚ್ಯುತಾನಂದನ್ ಅವರಿಗೆ ಎಚ್ಚರಿಕೆ ನೀಡಿತು. ಮತ್ತು ಪಕ್ಷದ ಸಂಘಟನಾ ನಿಯಮಾವಳಿ ಹಾಗೂ ಶಿಸ್ತನ್ನು ಪಾಲಿಸಬೇಕು ಎಂದು ಅವರಿಗೆ ಹೇಳಿತು.

ನಾಲ್ಕು ನಿರ್ಣಯಗಳು

ಕೇಂದ್ರ ಸಮಿತಿಯ ಸಭೆ ನಾಲ್ಕು ನಿರ್ಣಯಗಳನ್ನು ಅಂಗೀಕರಿಸಿತು.

1. ದಕ್ಷಿಣ ಭಾರತದ ಐದೂ ರಾಜ್ಯಗಳು ಎದುರಿಸುತ್ತಿರುವ ತೀವ್ರ ಬರದ ಪರಿಸ್ಥಿತಿಯನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯಸರಕಾರಗಳನ್ನು ಆಗ್ರಹಿಸಿ
2. 2013ರ ಭೂಸ್ವಾಧೀನ ಕಾಯ್ದೆಯ ಪ್ರಯೋಜನಕಾರಿ ಅಂಶಗಳನ್ನು ಬುಡಮೇಲು ಮಾಡುವ ಕ್ರಮಗಳ ವಿರುದ್ಧ
3. ಈಗಾಗಲೇ ಸಾರ್ವತ್ರಿಕ ಪಡಿತರ ಹೊಂದಿರುವ ಕೇರಳದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಜಾರಿಯ ಬಗ್ಗೆ
4. ರೋಹಿತ್ ವೇಮುಲ ಸಾಂಸ್ಥಿಕ ಕೊಲೆಯ ಮೊದಲ ವಾರ್ಷಿಕ ಆಚರಣೆಯನ್ನು ಬೆಂಬಲಿಸುತ್ತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿಪಕ್ಷಪಾತವನ್ನು ನಿವಾರಿಸಲು 'ರೋಹಿತ್ ಕಾಯ್ದೆ' ತರಬೇಕೆಂಬ ಬೇಡಿಕೆಯನ್ನು ಬೆಂಬಲಿಸಿ.

ಹತ್ತು ಬೇಡಿಕೆಗಳು


1. ಡಿಸೆಂಬರ್ 30ರ ಗಡುವು ಮುಗಿದಿದೆಯಾದ್ದರಿಂದ ಜನಗಳು ತಾವು ಕಷ್ಟಪಟ್ಟು ಸಂಪಾದಿಸಿ ಬ್ಯಾಂಕುಗಳಲ್ಲಿಟ್ಟಿರುವ ಹಣವನ್ನು ಬೇಕಾದಾಗ ಪಡೆಯಲು ಇರುವುದರ ಮೇಲೆ ಹಾಕಿರುವ ಎಲ್ಲ ಮಿತಿಗಳನ್ನೂ ತಕ್ಷಣವೇ ತೆಗೆಯಬೇಕು.
2. ಎಂದಿನ ಕೃಷಿ ಚಟುವಟಿಕೆಗಳು ಅಸ್ತವ್ಯಸ್ತ ಗೊಂಡಿದ್ದರಿಂದಾಗಿ ಸಂಕಟಗಳಿಗೆ ಒಳಗಾಗಿರುವ ರೈತರಿಗೆ ತಕ್ಷಣವೇ ಸಾಲ ಮನ್ನಾ.
3. ಗ್ರಾಮೀಣ ಉದ್ಯೋಗವನ್ನು ಹೆಚ್ಚಿಸಲು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅರ್ಜಿ ಹಾಕಿಕೊಂಡವರಿಗೆಲ್ಲ ಉದ್ಯೋಗ ಒದಗಿಸಲು ಈ ಯೋಜನೆಗೆ ಹಣನೀಡಿಕೆಯನ್ನು ದ್ವಿಗುಣಗೊಳಿಸಬೇಕು
4. ಹಿಂಗೆದುಕೊಂಡ ನೋಟುಗಳ ವಿನಿಮಯಕ್ಕಾಗಿ ಅಥವ ತಮ್ಮದೇ ಹಣವನ್ನು ಪಡೆಯಲು ಸಾಲಿನಲ್ಲಿ ನಿಂತಿದ್ದಾಗ ಪ್ರಾಣ ಕಳಕೊಂಡವರ ಕುಟುಂಬಗಳಿಗೆ ತಕ್ಷಣವೇ ಪರಿಹಾರ ಒದಗಿಸಬೇಕು.
5. ತಮ್ಮ ಉದ್ಯೋಗಗಳನ್ನು, ಜೀವನಾಧಾರವನ್ನು ಕಳಕೊಂಡವರಿಗೆಲ್ಲರಿಗೂ, ನಿರ್ದಿಷ್ಟವಾಗಿ, ಕೃಷಿ ಕೂಲಿಕಾರರು ಮತ್ತು ದಿನಗೂಲಿ ಮಾಡುವವರಿಗೆ ಪರಿಹಾರ ನೀಡಬೇಕು.
6. ತಮ್ಮ ಆರ್ಥಿಕ ಚಟುವಟಿಕೆಗಳನ್ನು ಮುಖ್ಯವಾಗಿ ನಗದು ವ್ಯವಹಾರಗಳಲ್ಲೇ ನಡೆಸುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ತೆರಿಗೆ ರಿಯಾಯ್ತಿ ಒದಗಿಸಬೇಕು.
7. ಸಹಕಾರಿ ಬ್ಯಾಂಕುಗಳಲ್ಲಿ ಠೇವಣಿಗಳು ಮತ್ತು ನಿಕಾಲೆಗಳ ಮೇಲೆ ಹಾಕಿರುವ ಮಿತಿಗಳನ್ನೆಲ್ಲ ತೆಗೆಯಬೇಕು.
8. ರಾಜ್ಯಗಳಿಗೆ ಆಗುತ್ತಿರುವ ರೆವಿನ್ಯೂ ನಷ್ಟವನ್ನು ಕೇಂದ್ರ ಸರಕಾರ ಭರ್ತಿ ಮಾಡಬೇಕು.
9. ಜನಗಳಿಗೆ ಡಿಜಿಟಲ್ ವ್ಯವಹಾರಗಳನ್ನು ನಡೆಸಬೇಕು ಎಂದು ಬಲವಂತ, ಜುಲುಮೆ ಮಾಡಬಾರದು.
10. ಎಲ್ಲ ರೇಶನ್ ಕಾರ್ಡ್‌ದಾರರಿಗೆ ಪೂರೈಕೆಗಳು ಲಭ್ಯವಾಗಬೇಕು. ಆಧಾರ್ ಕಾರ್ಡನ್ನು ಕಡ್ಡಾಯ ಮಾಡುವ ಶರತ್ತಿನಿಂದಾಗಿ ಬಹಳಷ್ಟು ಜನಗಳಿಗೆ ರೇಶನ್‌ಗಳನ್ನು ನಿರಾಕರಿಸಲಾಗುತ್ತಿದೆ. ಇದನ್ನು ಹಿಂತೆಗೆದುಕೊಳ್ಳಬೇಕು.

ಗಣರಾಜ್ಯ ಉಳಿಸಿ, ಜನರಾಜ್ಯ ಬೆಳೆಸಿ

ಜಿ.ವಿ.ಶ್ರೀರಾಮರೆಡ್ಡಿ

ಭಾರತ ಪ್ರಜಾಸತ್ತಾತ್ಮಕ ಸಂವಿಧಾನವೊಂದನ್ನು ಅಂಗೀಕರಿಸಿ ಆ ಸಂವಿಧಾನದ ಮೇಲೆ ಆಧಾರಿತವಾದ ಗಣರಾಜ್ಯ ಎಂದು ಘೋಷಿಸಿ 66 ವರ್ಷಗಳು ಕಳೆದಿವೆ. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ನಾಯಕತ್ವದಲ್ಲಿ ರಚಿಸಿದ ಸಂವಿಧಾನ ದೇಶದ ಎಲ್ಲಾ ಜನವಿಭಾಗಗಳು ಭಾಗವಹಿಸಿದ ಸ್ವಾತಂತ್ರ್ಯ ಹೋರಾಟದ ಹಲವು ಆಶಯಗಳನ್ನು ಒಳಗೊಂಡಿದೆ. ಆದರೆ ಈ ಸಂವಿಧಾನ ರೂಪಿಸಿ ಬೆಳೆಸಿದ ಹಲವು ಪ್ರಜಾಸತ್ತಾತ್ಮಕ ಸಂಸ್ಥೆಗಳು, ಆಚರಣೆಗಳು, ಸಂಪ್ರದಾಯಗಳ ಮೇಲೆ, ಇತ್ತೀಚಿನ ವರ್ಷಗಳಲ್ಲಿ 1990ರ ದಶಕದಲ್ಲಿ ಆರಂಭವಾದ ಆಳುವ ವರ್ಗಗಳ ನವ–ಉದಾರವಾದಿ ಧೋರಣೆಗಳ ಮತ್ತು ರಾಜಕೀಯದ ತೀವ್ರ ಕೋಮುವಾದೀಕರಣವಾದ ಹಿನ್ನೆಲೆಯಲ್ಲಿ ತೀವ್ರ ದಾಳಿಗಳು ನಡೆಯುತ್ತಿವೆ. ಮೋದಿ ನಾಯಕತ್ವದ ಬಿಜೆಪಿ ಸರಕಾರದ ಕಳೆದ ಎರಡುವರೆ ವರ್ಷಗಳ ಆಳ್ವಿಕೆಯಲ್ಲಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ಗಣರಾಜ್ಯ ವ್ಯವಸ್ಥೆಯ ಮೇಲೆ ಈ ದಾಳಿಗಳು ತೀವ್ರವಾಗಿವೆ.

ಗೋರಕ್ಷಣೆ, ಭಯೋತ್ಪಾದನೆ ಮತ್ತು ಇತರ ಹಲವು ನೆಪಗಳನ್ನು ಮುಂದುಮಾಡಿ ಮುಸ್ಲಿಮ್ ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲಾಗುತ್ತಿದೆ. ಪ್ರತಿಯೊಂದು ಚುನಾವಣೆಯ ಮೊದಲು ಇಂತಹ ಪ್ರಕರಣಗಳ ಸಂಖ್ಯೆ ಮತ್ತು ಭೀಕರತೆ ತಾರಕಕ್ಕೆ ಏರುತ್ತದೆ. ಉತ್ತರ ಪ್ರದೇಶದ ದಾದ್ರಿಯ ಮಹಮ್ಮದ್ ಅಖ್ಲಾಖ್ ಅವರ ಕೊಲೆ ಇಂತಹ ಪ್ರಕರಣಗಳ ಪ್ರತೀಕವಾಗಿ ಬಿಟ್ಟಿದೆ. ಸುಮಾರು ಒಂದುವರೆ ವರ್ಷದ ನಂತರವೂ ಕೊಲೆಗಾರರಿಗೆ ಮತ್ತು ಅವರ ಹಿಂದಿರುವ ಸಂಘ ಪರಿವಾರದ ವ್ಯಕ್ತಿಗಳಿಗೆ ಶಿಕ್ಷೆ ಆಗಿಲ್ಲ ಮಾತ್ರವಲ್ಲ, ಅಖ್ಲಾಖ್ ಕುಟುಂಬದ ಮೇಲೆನೇ ಕೇಸು ದಾಖಲಿಸಲಾಗಿದೆ. ಕರಾವಳಿ ಕರ್ನಾಟಕದಲ್ಲಂತೂ ಮುಸ್ಲಿಮ್ ಅಲ್ಪಸಂಖ್ಯಾತರನ್ನು ತಮ್ಮ ಪ್ರಾಣ ರಕ್ಷಿಸಲೂ ಹಕ್ಕು ಇಲ್ಲದಿರುವ ಎರಡನೇ ದರ್ಜೆಯ ಪ್ರಜೆಯ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರೆ. ಇತ್ತೀಚಿನ ಹೊಸಪೇಟೆ ಮತ್ತು ಗಂಗಾವತಿ ಕೋಮು ದಾಳಿಯ ಪ್ರಕರಣಗಳು ತೋರಿಸಿದಂತೆ ಇದು ಕರ್ನಾಟಕದ ಇತರ ಪ್ರದೇಶಗಳಿಗೂ ಹಬ್ಬುತ್ತಿದೆ.



ಕೃಪೆ: ಪಿ. ಮಹಮ್ಮದ್, ವಿಜಯ ಕರ್ನಾಟಕ

ದಲಿತರ ಮೇಲೂ ದಾಳಿಗಳು ಏರುತ್ತಿವೆ. ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿ ಅದನ್ನು ಸಾಧಿಸುತ್ತಿರುವ ದಲಿತರ ಮೇಲೆ ವ್ಯವಸ್ಥಿತ ದಾಳಿಗಳು ಆಗುತ್ತಿವೆ. ವಿದ್ಯಾರ್ಥಿ ನಾಯಕ ರೋಹಿತ್ ವೇಮುಲಾನನ್ನು ಆತ್ಮಹತ್ಯೆಗೆ ತಳ್ಳಿದ ಮತ್ತು ಇನ್ನೂ ತಮ್ಮ ತಪ್ಪು ಒಪ್ಪಿಕೊಳ್ಳದೆ ಹಠ ಸಾಧಿಸುತ್ತಿರುವ ಹೈದರಾಬಾದ್ ಕೇಂದ್ರೀಯ ವಿ.ವಿ.ದ ಆಡಳಿತದ ಧೋರಣೆ, ಹಾಗೂ ಗುಜರಾತಿನ ಊನಾದಲ್ಲಿ ದಲಿತರನ್ನು ಸಾರ್ವಜನಿಕ ಥಳಿಸಿದ ಪ್ರಕರಣಗಳು ದಲಿತರ ಮೇಲೆ ದಾಳಿಯ ಪ್ರತೀಕಗಳು. ದಲಿತರ ಮೀಸಲಾತಿ ವ್ಯವಸ್ಥೆ ದುರ್ಬಲಗೊಳಿಸಲು ಅಥವಾ ತೆಗೆಯಲು (ಜಾಟ್, ಪಟೇಲ್, ಮರಾಠಾ ಮುಂತಾದ) ಪ್ರಬಲ ಜಾತಿಗಳ ಅತೃಪ್ತಿ ಮತ್ತು ಮೀಸಲಾತಿಗಾಗಿ ಹೋರಾಟವನ್ನು ಬಳಸಿಕೊಳ್ಳಲಾಗುತ್ತಿದೆ. ವೇಮುಲಾನನ್ನು ಆತ್ಮಹತ್ಯೆಯ ಮೊದಲ ವಾರ್ಷಿಕಕ್ಕೆ ಆತನ ಸ್ತೂಪದ ಭೇಟಿ ಮಾಡಲು ಆತನ ತಾಯಿ, ಕುಟುಂಬದವರೂ ಸ್ನೇಹಿತರೂ ಹೋದರೆ ಅವರನ್ನು ಬಂಧಿಸಲಾಯಿತು. ಇದನ್ನು ವರದಿ ಮಾಡಲು ಹೋದ ಪತ್ರಕರ್ತನನ್ನೂ ಬಂಧಿಸಲಾಯಿತು. ಅಹಿಂದ ಸರಕಾರ ಎಂದು ಹೇಳಲಾಗುವ ಕರ್ನಾಟಕದಲ್ಲೂ ದಲಿತರ ಮೇಲೆ ದಾಳಿಗಳು ಅವ್ಯಾಹತವಾಗಿ ಮುಂದುವರೆಯುತ್ತಿವೆ.

ಕಮ್ಯುನಿಸ್ಟರ ಮೇಲೂ ತೀವ್ರ ಹಿಂಸಾತ್ಮಕ ದಾಳಿಗಳು ತೀವ್ರವಾಗುತ್ತಿವೆ. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರ ಮೇಲೆ ತೀವ್ರ ದಾಳಿಗಳು ನಡೆಯುತ್ತಿವೆ. ಮೇ 2011ರಿಂದ ಜುಲೈ 2016ವರೆಗಿನ ಅವಧಿಯಲ್ಲಿ 183 ಎಡರಂಗದ ಕಾರ್ಯಕರ್ತರ ಕೊಲೆ ಮಾಡಲಾಗಿದೆ. ಕೇರಳದಲ್ಲಿ ಎಲ್.ಡಿ.ಎಫ್. ಅಧಿಕಾರಕ್ಕೆ ಬಂದಾಗಿನಿಂದ ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಲಾಗದೆ ಹತಾಶವಾದ ಸಂಘಪರಿವಾರ ಪುನಃ ಕೊಲೆಯ ರಾಜಕೀಯ ಆರಂಭಿಸಿದೆ. ಸಾಲದು ಎಂಬಂತೆ ತಮ್ಮ ಮೇಲೆ ದಾಳಿ ಎಂದು ಬೊಬ್ಬಿಟ್ಟ ಸಂಘಪರಿವಾರದ ನಾಯಕರ "ರಕ್ಷಣೆಗೆ" ರಾಜ್ಯ ಸರಕಾರಕ್ಕೆ ಗೊತ್ತಿಲ್ಲದೆ ಕೇಂದ್ರೀಯ ಅರೆಸೈನಿಕ ಪಡೆ ಕಳಿಸುವ ಸಂವಿಧಾನ–ವಿರೋಧಿ ಕ್ರಮ ಕೈಗೊಂಡಿದೆ. ಕರ್ನಾಟಕದಲ್ಲೂ ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿಯ ಮೇಲೆ ದಾಳಿ ಪ್ರಯತ್ನ ನಡೆಸಲಾಯಿತು. ದಕ್ಷಿಣ ಕನ್ನಡದ ಸಂಸದ ಕೆಲವು ದಿನಗಳ ಹಿಂದೆ "ಕರ್ನಾಟಕದಲ್ಲೂ ಕಮ್ಯುನಿಸ್ಟರಿಗೆ ಬಾರಿಸುತ್ತೇವೆ" ಎಂದು ಘೋಷಿಸಿದ್ದಾರೆ.

ಸರಕಾರದ ನೀತಿಗಳನ್ನು ಕಣ್ಣುಮುಚ್ಚಿ ಒಪ್ಪದ ಬಹುಪರಾಕು ಹೇಳದ ಬುದ್ಧಿಜೀವಿಗಳ ಮೇಲೆ ಕಳೆದ ಎರಡುವರೆ ವರ್ಷಗಳಲ್ಲಿ ತೀವ್ರ ದಾಳಿಗಳು ಆರಂಭವಾಗಿವೆ. ಡಾ. ದಾಬೋಲ್ಕರ್, ಕಾ. ಗೋವಿಂದ ಪನ್ಸಾರೆ ಮತ್ತು ಡಾ. ಕಲಬುರ್ಗಿ ಅವರುಗಳು 'ಸರಣಿ ಕೊಲೆ' ಇಂತಹ ದಾಳಿಗಳ ಪರಾಕಾಷ್ಠೆ. ಚೆನ್ನೈ ಐಐಟಿ, ಎಫ್.ಟಿ.ಐ.ಐ., ಜೆ.ಎನ್.ಯು., ಹೈದಾರಾಬಾದ್ ಕೇಂದ್ರೀಯ ವಿ.ವಿ.ಗಳ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಪ್ರಾಥಮಿಕ ಅಭಿವ್ಯಕ್ತಿ ಸ್ವಾತಂತ್ರ್ಯಗಳ ಮೇಲೆ ಹಲ್ಲೆ; ಐ.ಸಿ.ಎಚ್.ಆರ್. ಮುಂತಾದ ಅಕಾಡೆಮಿಕ್ ಸಂಸ್ಥೆಗಳಿಂದ ಸ್ವತಂತ್ರ ವಿಚಾರಗಳ ಪರಿಣತರನ್ನು ಕೈಬಿಟ್ಟಿರುವುದು; ಎಫ್.ಟಿ.ಐ.ಐ, ಸೆನ್ಸಾರ್ ಬೋರ್ಡಿಗೆ ಆಳುವ ಪಕ್ಷಗಳ ಭಟ್ಟಂಗಿಗಳನ್ನು ನೇಮಿಸಿರುವುದು; ಹಲವು ಐಐಟಿಗಳಲ್ಲಿ ಅನಗತ್ಯ ಹಸ್ತಕ್ಷೇಪಗಳ ಮೂಲಕ ಡೈರೆಕ್ಟರುಗಳು ರಾಜೀನಾಮೆ ಕೊಡುವ ಸನ್ನಿವೇಶ ಸೃಷ್ಟಿಸಿರುವುದು – ಇತ್ಯಾದಿ ಕೆಲವು ಪ್ರಸಿದ್ಧ ಉದಾಹರಣೆಗಳು.

ಮುಸ್ಲಿಮರು, ದಲಿತರು, ಕಮ್ಯುನಿಸ್ಟರು, ಬುದ್ಧಿಜೀವಿಗಳ ಮೇಲೆ ದಾಳಿ ಪ್ರಜಾಸತ್ತೆಯ ಮೇಲೆ ಸಂವಿಧಾನಾತ್ಮಕ ಗಣರಾಜ್ಯದ ಮೇಲೆ ತೀವ್ರ ದಾಳಿಯ ಲಕ್ಷಣಗಳು. ಇತ್ತೀಚಿನ 500/1000 ರೂ. ನೋಟು ನಿಷೇಧ ಪ್ರಜಾಸತ್ತೆಯ ಮೇಲೆ ಇನ್ನೊಂದು ಬಲವಾದ ದಾಳಿ. ಭ್ರಷ್ಟಾಚಾರ/ಕಪ್ಪು ಹಣದ ನಿಗ್ರಹದ ಬಗ್ಗೆ ಚುನಾವಣಾ ಭರವಸೆಗಳ ವೈಫಲ್ಯಗಳನ್ನು ಮುಚ್ಚಿಕೊಳ್ಳಲು, ನವ–ಉದಾರವಾದಿ ನಗದು–ರಹಿತ ವ್ಯವಸ್ಥೆಯನ್ನು ಜನತೆಯ ಮೇಲೆ ಹೇರಲು ಇದನ್ನು ಮಾಡಲಾಗಿದೆ. ಈ ಕ್ರಮ ಕೈಗೊಳ್ಳುವಲ್ಲಿ ಜನತೆಯ ತಾವು ದುಡಿದು ಸಂಪಾದಿಸಿದ (ಬ್ಯಾಂಕಿನಲ್ಲಿರುವ ಅಥವಾ ತಮ್ಮ ಹತ್ತಿರ ಇರುವ) ಹಣವನ್ನು ಪಡೆಯುವ, ಖರ್ಚು ಮಾಡುವ ಪ್ರಾಥಮಿಕ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಇದನ್ನು ಜಾರಿ ಮಾಡಲು ರಿಸರ್ವ್ ಮತ್ತು ಇತರ ಬ್ಯಾಂಕುಗಳ ಸಾಂಸ್ಥಿಕ ಸ್ವಾಯತ್ತತೆಯ ಮೇಲೆ ದಾಳಿ ಮಾಡಲಾಗುತ್ತಿದೆ. ನೋಟು ನಿಷೇಧದ ಮೂಲ ಉದ್ದೇಶಗಳಾದ – ಕಪ್ಪುಹಣ, ಭ್ರಷ್ಟಾಚಾರ, ಖೋಟಾ ನೋಟು, ಭಯೋತ್ಪಾದನೆಗೆ ಆರ್ಥಿಕ ಕುಮ್ಮಕ್ಕು – ಈಡೇರಿಲ್ಲ. ಮಾತ್ರವಲ್ಲ, ಆರ್ಥಿಕದ ಮೇಲೆ ಜನರ ಬದುಕಿನ ಮೇಲೆ ನೋಟು ನಿಷೇಧದ ದುಷ್ಪರಿಣಾಮಗಳ ಬಗ್ಗೆ ಹಲವು (ಜಿಡಿಪಿ ಶೇ. 1ರಷ್ಟು ಕಡಿತವಾಗುತ್ತದೆ ಎಂದು ಹೇಳಿದ ಐ.ಎಂ.ಎಫ್. ಸೇರಿದಂತೆ) ಸ್ವತಂತ್ರ ಸಂಸ್ಥೆಗಳ ಅಧ್ಯಯನ–ವರದಿಗಳ ನಂತರವೂ, ಜನತೆಯ ಮೇಲೆ ಹೇರಲಾದ ಪ್ರಾಥಮಿಕ ಆರ್ಥಿಕ ಹಕ್ಕುಗಳ ಮೇಲಿನ ನಿರ್ಬಂಧಗಳನ್ನು ತೆರವುಗೊಳಿಸಲು ತಯಾರಾಗದಿರುವುದು ಸಹ ಸಂವಿಧಾನಾತ್ಮಕ ಗಣರಾಜ್ಯದ ಮೇಲೆ ತೀವ್ರ ದಾಳಿಯ ಲಕ್ಷಣ.

ಸಂವಿಧಾನದ ಮೂಲ ಆಶಯಗಳಾದ ಜಾತ್ಯತೀತವಾದ, ಸಮಾನತೆ, ಸಾಮಾಜಿಕ ನ್ಯಾಯಗಳ ಮೇಲೆ ದಾಳಿಗಳು ನಡೆಯುತ್ತಿವೆ. ನೋಟು ನಿಷೇಧ ಸೇರಿದಂತೆ ಹಲವು ಪ್ರಮುಖ ನಿರ್ಧಾರಗಳನ್ನು ಪಾರ್ಲಿಮೆಂಟಿನ ಹೊರಗೆ ಘೋಷಿಸುವ, ಸುಗ್ರೀವಾಜ್ಞೆಗಳ ಮೂಲಕ ಪಾರ್ಲಿಮೆಂಟಿನ ಪರಮಾಧಿಕಾರದ ಮೇಲೆ ದಾಳಿ ನಡೆಸುವ ಪ್ರಯತ್ನ ನಡೆದಿದೆ. ರಾಜ್ಯಸಭಾ ರದ್ದತಿ, ಕೇಂದ್ರ–ರಾಜ್ಯಗಳಲ್ಲಿ ಕಡ್ಡಾಯವಾಗಿ ಒಟ್ಟಿಗೆ ಚುನಾವಣೆ ಮುಂತಾದ ಕ್ರಮಗಳ ಮೂಲಕ ಪಾರ್ಲಿಮೆಂಟ್ ವ್ಯವಸ್ಥೆಯನ್ನು ದುರ್ಬಲಗೊಳಿಸಿ ನಾಶ ಮಾಡುವ ಪ್ರಯತ್ನ ಮಾಡಲಾಗುತ್ತಿದೆ. ಹಣ, ಹಿಂಸಾಚಾರ ಮತ್ತು ಮಾಧ್ಯಮಗಳ ಬಲದ ಮೂಲಕ, ಚುನಾವಣೆಗಳಲ್ಲಿ ಪೂರ್ಣವಾಗಿ ಪ್ರಮುಖ ಪಕ್ಷಗಳು ಮತ್ತು ಶ್ರೀಮಂತರ ಕೈಮೇಲಾಗಿದ್ದು ಪಾರ್ಲಿಮೆಂಟಿನಲ್ಲಿ ಜನತೆಯ ಪ್ರಾತಿನಿಧ್ಯದ ಮೂಲತತ್ವಕ್ಕೆ ಭಂಗ ಬಂದಿದೆ. ಸಂವಿಧಾನದ ಆಶಯಗಳನ್ನು ಆಚರಣೆಗೆ ತರುವ ಪ್ರಮುಖ ಸಾಂವಿಧಾನಿಕ ಸಂಸ್ಥೆಗಳನ್ನು ಶಿಥಿಲಗೊಳಿಸಿ ಹಾಳುಗೆಡವಲಾಗುತ್ತಿದೆ. 'ವಿಧೇಯ' ನ್ಯಾಯಾಧೀಶರನ್ನು ನೇಮಿಸುವ ಪ್ರಯತ್ನಗಳ ಮೂಲಕ ನ್ಯಾಯಾಂಗದ ಸ್ವತಂತ್ರ ಪಾತ್ರಕ್ಕೆ ಧಕ್ಕೆ ತರಲಾಗುತ್ತಿದೆ. ಒಕ್ಕೂಟತತ್ವವನ್ನು ದುರ್ಬಲಗೊಳಿಸಿ ನವ–ಉದಾರವಾದಿ ವಿದೇಶಿ ಬಂಡವಾಳದ ಪರ ಮತ್ತು ಕೋಮುವಾದಿ ನೀತಿಗಳನ್ನು ಹೇರಲು ರಾಜ್ಯಗಳ ಅಧಿಕಾರಗಳ ಮೇಲೆ ಸತತವಾಗಿ ದಾಳಿಗಳು ನಡೆಯುತ್ತಿವೆ. ಯೋಜನಾ ಆಯೋಗದ ರದ್ದು ಮತ್ತು ಯೋಜನಾ ಪ್ರಕ್ರಿಯೆಗೆ ತಿಲಾಂಜಲಿ ನೀಡುವ ಮೂಲಕ, ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಸಮಾಲೋಚನೆಗೆ ವೇದಿಕೆಯಾಗಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಭಾವೈಕ್ಯತೆ ಮಂಡಳಿಗಳ ಸಭೆಯನ್ನು ಕರೆಯದೆ ಒಕ್ಕೂಟತತ್ವಕ್ಕೆ ತಿಲಾಂಜಲಿ ನೀಡಲಾಗುತ್ತಿದೆ.

ಪ್ರಜಾಸತ್ತೆಯ ಮೇಲೆ ಮತ್ತು ಸಂವಿಧಾನಾತ್ಮಕ ಗಣರಾಜ್ಯದ ಮೇಲೆ ದಾಳಿಗಳು ಹೆಚ್ಚಲಿದ್ದು 66 ವರ್ಷಗಳ ನಮ್ಮ ಗಣರಾಜ್ಯ ವ್ಯವಸ್ಥೆ ತೀವ್ರ ಅಪಾಯದಲ್ಲಿದೆ. ಆದ್ದರಿಂದ ಈ ಗಣರಾಜ್ಯದ ದಿನ ಗಣರಾಜ್ಯ ಉಳಿಸಲು ಹೋರಾಟ ಮಾಡುವ ಪಣ ತೊಡುವುದು ಅಗತ್ಯವಾಗಿದೆ. ಗಣ–ರಾಜ್ಯ ಉಳಿಸುವುದು ಎಂದರೆ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ವ್ಯವಸ್ಥೆ ಜನತೆಗೆ ಕೊಡುವ ಹಕ್ಕುಗಳ ಮೇಲೆ ದಾಳಿಗಳ ವಿರುದ್ಧ ಪ್ರತಿರೋಧ ಒಡ್ಡುವುದು, ಹೋರಾಟ ನಡೆಸುವುದು.

ನಮ್ಮ ಸ್ವಾತಂತ್ರ್ಯ ಹೋರಾಟದ ಎಲ್ಲಾ ಮತ್ತು ಸಂವಿಧಾನದ ಆಶಯಗಳೂ ನಿಜವಾಗಿಯೂ ಪೂರ್ಣವಾಗಿಯೂ ಇನ್ನೂ ಈಡೇರಿಲ್ಲ. ಎಲ್ಲಾ ನಾಗರಿಕರಿಗೆ ಆಹಾರ, ಮನೆ, ಆರೋಗ್ಯ, ಶಿಕ್ಷಣದ ಕನಿಷ್ಠ ಹಕ್ಕುಗಳನ್ನು ಪೂರೈಸಲು ಇನ್ನೂವರೆಗೂ ಸಾಧ್ಯವಾಗಿಲ್ಲ. ಘನತೆಯ ಸಮೃದ್ಧ ಬದುಕಿನ ಮಾತು ದೂರ ಉಳಿಯಿತು. ಈ ನಿಟ್ಟಿನಲ್ಲಿ ಮೊದಲ ಕೆಲವು ದಶಕಗಳಲ್ಲಿ ಸಾಧಿಸಿದ ಅಲ್ಪ ಪ್ರಗತಿಯೂ ನವ–ಉದಾರವಾದಿ ನೀತಿಗಳ ದಾಳಿಗಳಿಂದ ಸ್ಥಗಿತಗೊಂಡು ಹಿನ್ನಡೆಯಾಗುತ್ತಿದೆ. ಮುಸ್ಲಿಮರು, ದಲಿತರು, ಆದಿವಾಸಿಗಳು ಮುಂತಾದ ಅಲ್ಪಸಂಖ್ಯಾತರು ಸದಾ ಜೀವಭಯದಲ್ಲಿದ್ದಾರೆ. ಇಂತಹ ಪರಿಸ್ಥಿತಿಗೆ ಕಾರಣ, ನಿಜವಾದ ಅಧಿಕಾರ ಗುತ್ತೇದಾರಿ ಬಂಡವಾಳಶಾಹಿ ನಾಯಕತ್ವದ ಬಂಡವಾಳಶಾಹಿ–ಭೂಮಾಲಕ ವರ್ಗಗಳ ಕೈಯಲ್ಲಿರುವುದು. ಜನತೆಯ ಹಕ್ಕುಗಳನ್ನು ದಮನ ಮಾಡಿರುವುದು. ಈ ಆಳುವ ವರ್ಗಗಳಿಗೂ ದುಡಿಯುವ ಜನರ ನಡುವೆ ಇರುವ ಅಸಮಾನತೆ ತೀವ್ರವಾಗಿ ಏರುತ್ತಿದೆ. ದೇಶದ ಅರ್ಧದಷ್ಟು ಸಂಪತ್ತು ಶೇ. 1 ಅತ್ಯಂತ ಶ್ರೀಮಂತರ ಕೈಯಲ್ಲಿದೆ. ರೈತ–ಕಾರ್ಮಿಕರು ಮತ್ತು ಇತರ ದುಡಿಯುವ ಜನರಿಗೆ ಪ್ರಜಾಸತ್ತೆ ಬರಿಯ ಉಪಚಾರವಾಗಿ ಬಿಟ್ಟಿದೆ. 1990ರ ದಶಕದ ನಂತರದ ಜಾಗತೀಕರಣದ ಅಡಿಯಲ್ಲಿ ಆಳುವ ವರ್ಗಗಳು ಇನ್ನಷ್ಟು ಆಕ್ರಾಮಕವಾಗಿ ದುಡಿಯುವ ಜನರ ಹಿತಾಸಕ್ತಿಗಳನ್ನು ದಮನ ಮಾಡುತ್ತಿವೆ. ತಮ್ಮ ಹಿತಾಸಕ್ತಿಗಳನ್ನು ಇನ್ನಷ್ಟು ಆಕ್ರಾಮಕವಾಗಿ ಎತ್ತಿ ಹಿಡಿಯುತ್ತಿವೆ.

ಸ್ವಾತಂತ್ರ್ಯ ಹೋರಾಟದ ಆಶಯಗಳನ್ನು ಪೂರೈಸಲು ಪ್ರಜಾಸತ್ತೆಯನ್ನು ಇನ್ನಷ್ಟು ವಿಸ್ತರಿಸಬೇಕಾಗಿದೆ. ಈಗಿನ ಗಣರಾಜ್ಯ ವ್ಯವಸ್ಥೆಯನ್ನು ನಿಜವಾದ ಜನರ ರಾಜ್ಯ – 'ಜನರಾಜ್ಯ'– ಆಗಿಸುವತ್ತ ಮುನ್ನಡೆಸಬೇಕಾಗಿದೆ. ಇದಕ್ಕಾಗಿ ಅಸಮಾನತೆಯನ್ನು ತೊಡೆದು ಹಾಕುವ ಎಲ್ಲಾ ನಾಗರಿಕರ ಕನಿಷ್ಠ ಅವಶ್ಯಕತೆಗಳನ್ನು ಹಕ್ಕುಗಳನ್ನು ಪೂರೈಸುವ, ಉತ್ಪಾದನಾ ಸಾಮಗ್ರಿಗಳ ಒಡೆತನವನ್ನು ದುಡಿಯುವ ಜನರಿಗೆ ಕೊಡುವ ತೀವ್ರ ಆರ್ಥಿಕ–ರಾಜಕೀಯ–ಸಾಮಾಜಿಕ ಬದಲಾವಣೆಗಳನ್ನು ತರಲು ಹೋರಾಟ ನಡೆಸಬೇಕಾಗಿದೆ. ಇದಕ್ಕೆ ಪ್ರಭುತ್ವದ ಮೇಲೆ ಗುತ್ತೇದಾರಿ ಬಂಡವಾಳಶಾಹಿ ನಾಯಕತ್ವದಲ್ಲಿರುವ ಬಂಡವಾಳಶಾಹಿ–ಭೂಮಾಲಕ ವರ್ಗಗಳ ಹಿಡಿತಕ್ಕೆ ನಿರ್ಣಾಯಕ ಪೆಟ್ಟು ಕೊಡಬೇಕಾಗಿದೆ. ಪ್ರಜಾಪ್ರಭುತ್ವದ ಹೆಸರಲ್ಲಿ ನಡೆಯುತ್ತಿರುವ ಅವುಗಳ ಸರ್ವಾಧಿಕಾರ ಕೊನೆಗೊಳಿಸಬೇಕಾಗಿದೆ. ಇದಕ್ಕಾಗಿ ಆಳುವ ವರ್ಗಗಳ ವಿರುದ್ಧ, ಕಾರ್ಮಿಕ ವರ್ಗದ ನೇತೃತ್ವದಲ್ಲಿ – ರೈತರು, ಕೃಷಿ ಕೂಲಿಕಾರರರು, ಎಲ್ಲಾ ದುಡಿಯುವ ಜನರು, ದಲಿತರು, ಆದಿವಾಸಿಗಳು, ಮುಸ್ಲಿಂ ಮುಂತಾದ ಅಲ್ಪಸಂಖ್ಯಾತರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಮಧ್ಯಮ ವರ್ಗದವರು, ಸಣ್ಣ–ಮಧ್ಯಮ ಉದ್ಯಮಿಗಳು ವ್ಯಾಪಾರಿಗಳು – ಇವರೆಲ್ಲರ ಹಿತಾಸಕ್ತಿಗಳ ರಕ್ಷಣೆಗೆ ಬದುಕು ಉತ್ತಮ ಪಡಿಸಲು ಹೋರಾಡುವ ವಿಶಾಲ ರಂಗವೊಂದನ್ನು ಕಟ್ಟಬೇಕಾಗಿದೆ. ಇದಕ್ಕಾಗಿ ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಣಿ ನೆರೆಸಬೇಕಾಗಿದೆ.

ಈ ನಿಟ್ಟಿನಲ್ಲಿ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಗಣರಾಜ್ಯದ ದಿನದಂದು ಇಡೀ ದಿನ ಎಲ್ಲಾ ಜನರನ್ನು ಒಳಗೊಳ್ಳುವ ಅವರ ಗಮನ ಸೆಳೆಯುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋಣ!

ಈ ಬಾರಿಯ ಗಣರಾಜ್ಯ ದಿನದಂದು ಈಗಿನ ಗಣರಾಜ್ಯವನ್ನು ಉಳಿಸಿಕೊಂಡು ದುಡಿಯುವ ಜನತೆಯ ಆಶೋತ್ತರಗಳನ್ನು ಈಡೇರಿಸುವ ಜನರಾಜ್ಯವಾಗಿ ಬೆಳೆಸುವ ಪಣ ತೊಡೋಣ! ಈ ಬಗ್ಗೆ ದುಡಿಯುವ ಜನರ ಮಧ್ಯೆ ವ್ಯಾಪಕ ಪ್ರಚಾರ–ಪ್ರಕ್ಷೋಭೆ ಕೈಗೊಳ್ಳೋಣ!

"ಗಣರಾಜ್ಯ ಉಳಿಸಿ, ಜನರಾಜ್ಯ ಬೆಳೆಸಿ"! ●

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಜನವರಿ 18 ರಂದು ಸಭೆ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಈ ಕೆಳಗಿನ ಚಳುವಳಿಗಳಿಗೆ ಕರೆ ನೀಡಿದೆ:

ಜನವರಿ 26: 'ಗಣರಾಜ್ಯ ಉಳಿಸಿ, ಜನರಾಜ್ಯ ಬೆಳೆಸಿ': ಜಿಲ್ಲಾಧಿಕಾರಿ ಕಚೇರಿ ಮುಂದೆ ಇಡೀ ದಿನದ ಪ್ರತಿಭಟನೆ ಮತ್ತಿತರ ಕಾರ್ಯಕ್ರಮಗಳು

ಫೆಬ್ರುವರಿ 6–13 ನೋಟು ನಿಷೇಧ ಮತ್ತು ಬರದ ಪರಿಣಾಮಗಳ ಬಗ್ಗೆ ಪ್ರಚಾರಾಂದೋಲನ: ಕೇಂದ್ರ ಸಮಿತಿ ಕರೆ ಮೇರೆಗೆ ನೋಟು ನಿಷೇಧದ ಬಗೆಗಿನ 10 ಹಕ್ಕೊತ್ತಾಯಗಳು (ಪುಟ 2 ರಲ್ಲಿ ವಿವರಗಳು) ಮತ್ತು ಬರದ ಬಗ್ಗೆ ಪ್ರಚಾರಾಂದೋಲನ

ಫೆಬ್ರುವರಿ 25 ಮಂಗಳೂರಿನಲ್ಲಿ ಕೋಮುವಾದದ ವಿರುದ್ಧ ಬೃಹತ್ ಸಮಾವೇಶ: ಕೋಮುವಾದದ ವಿರುದ್ಧ ಪ್ರಚಾರಾಂದೋಲನದ ಕೊನೆಯ ಘಟ್ಟವಾಗಿ

ನೋಟು ಅಮಾನ್ಯ: ಕಾರ್ಮಿಕ ವರ್ಗ ಸಂಕಷ್ಟದಲ್ಲಿ–ಸಿಐಟಿಯು ನೇತೃತ್ವದಲ್ಲಿ ಪ್ರತಿಭಟನೆ

ರೂ. 1000, 500 ನೋಟುಗಳ ರದ್ದತಿಯ ಬಳಿಕ ಇಡೀ ದೇಶದಲ್ಲಿ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಂಕಷ್ಟಗಳಿಗೆ ಕಾರಣವಾಗಿರುವ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಜನವರಿ 09ರಂದು ದ.ಕ ಜಿಲ್ಲಾಧಿಕಾರಿಗಳ ಕಛೇರಿಯೆದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.



ಸಿಐಟಿಯು ಕೇಂದ್ರ ಸಮಿತಿ ಕರೆಯ ಮೇರೆಗೆ ಆಯೋಜಿಸಲಾದ ಪ್ರತಿಭಟನೆಯನ್ನು ಉದ್ದೇಶಿಸಿ ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು ಮಾತಾನಾಡಿ 'ಪ್ರಧಾನಿ ನರೇಂದ್ರ ಮೋದಿಯವರು ಅಘೋಷಿತ ತುರ್ತು ಪರಿಸ್ಥಿತಿಯನ್ನು ಜಾರಿಗೆ ತರುವ ಹುನ್ನಾರ ನಡೆಸುತ್ತಿದ್ದಾರೆ ಮಾತ್ರವಲ್ಲದೆ ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲುಗೊಳಿಸಿದ್ದಾರೆ. ಚುನಾವಣೆಗೆ ಮೊದಲು ನೂರು ದಿನಗಳಲ್ಲಿ ಕಪ್ಪುಹಣವನ್ನು ತರುವುದಾಗಿ ಭರವಸೆ ನೀಡಿದ ನರೇಂದ್ರ ಮೋದಿ, ಅಧಿಕಾರಕ್ಕೇರಿದ ಬಳಿಕ ಒಂದು ಸಾವಿರ ದಿನಗಳು ಕಳೆದರೂ ಕಪ್ಪುಹಣದ ಪತ್ತೆಯಿಲ್ಲ. ಬಳಿಕ ವಿದೇಶದಿಂದ ಕಪ್ಪುಹಣವನ್ನು ತರುವುದು ಅಸಾಧ್ಯವೆಂದು ಬಹಿರಂಗವಾಗಿ ಸಾರಿದ ಪ್ರಧಾನಿ, ಕಪ್ಪುಹಣವು ನಮ್ಮ ದೇಶದಲ್ಲೇ ಇದೆ ಎಂದು ಹಸಿಹಸಿ ಸುಳ್ಳು ಹೇಳಿ ನೋಟುಗಳನ್ನು ಅಮಾನ್ಯಗೊಳಿಸಿ ಯಾರ ಕೈಯಲ್ಲಿ 500, 1000 ನೋಟುಗಳಿವೆಯೋ ಅವೆಲ್ಲವೂ ಕಪ್ಪುಹಣವೆಂದು ಘೋಷಿಸಿರುವುದು ಮೂರ್ಖತನದ ಪರಮಾವಧಿಯಾಗಿದೆ ಎಂದರು.

ಸಿಐಟಿಯು ದ.ಕ ಜಿಲ್ಲಾಧ್ಯಕ್ಷರಾದ ಜೆ. ಬಾಲಕೃಷ್ಣ ಶೆಟ್ಟಿ ಮಾತನಾಡಿ 'ನೋಟು ರದ್ದತಿಯ ಬಳಿಕ ದೇಶದ ಕಾರ್ಮಿಕವರ್ಗ ಭಾರೀ ಸಮಸ್ಯೆಗಳನ್ನು ಎದುರಿಸುತ್ತಿದೆ. ದೇಶದಲ್ಲಿ 90%ದಷ್ಟು ಅಸಂಘಟಿತ ಕ್ಷೇತ್ರದ ಕಾರ್ಮಿಕರಿದ್ದು ಕೋಟ್ಯಾಂತರ ಸಂಖ್ಯೆಯ ಕಾರ್ಮಿಕರು ಕೆಲಸಗಳನ್ನು ಕಳೆದುಕೊಂಡಿದ್ದಾರೆ. ಕಷ್ಟಪಟ್ಟು ದುಡಿದರೂ ಸಂಬಳವನ್ನು ಪಡೆಯಲು ಸಾಧ್ಯವಾಗಿಲ್ಲ. ಮಾಧ್ಯಮಗಳನ್ನು ಸಂಪೂರ್ಣವಾಗಿ ತಮ್ಮ ಹತೋಟಿಯಲ್ಲಿಟ್ಟಿರುವ ನರೇಂದ್ರ ಮೋದಿಯವರು ತನ್ನ ಎದುರಾಳಿಗಳನ್ನು ಹಾಗೂ ಜನಸಾಮಾನ್ಯರ ಬದುಕನ್ನು ಮಟ್ಟ ಹಾಕಲು ಹರಸಾಹಸ ಪಡುತ್ತಿದ್ದಾರೆ ಎಂದು ಆರೋಪಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯು ಜಿಲ್ಲಾ ಮುಖಂಡರಾದ ಯು. ಬಿ. ಲೋಕಯ್ಯ, ಯೋಗೀಶ್ ಜಪ್ಪಿನಮೊಗರು, ಸದಾಶಿವದಾಸ್, ಜಯಂತ್ ನಾಯ್ಕ್, ರಾಧಾ ಮೂಡಬಿದ್ರಿ, ಜಯಂತಿ ಬಿ. ಶೆಟ್ಟಿ, ಸಂತೋಷ್ ಶಕ್ತಿನಗರ, ಸಂಜೀವ ಬಂಗೇರ, ಬಾಬು ದೇವಾಡಿಗ, ರೋಹಿಣಿ, ಜನಾರ್ಧನ ಕುತ್ತಾರ್, ವಸಂತಿ, ಜಯಲಕ್ಷ್ಮೀ, ಸಂತೋಷ್ ಆರ್. ಎಸ್, ಸೀತಾರಾಮ್ ಶೆಟ್ಟಿ ಮುಂತಾದವರು ವಹಿಸಿದ್ದರು.

ವರದಿ: ವಾಸುದೇವ ಉಚ್ಚಿಲ

ಬೆಳುವಾಯಿ ಪಂಚಾಯತ್ ಎದುರು ಪ್ರತಿಭಟನೆ

ಪರಿಶಿಷ್ಟ ಜಾತಿ ವರ್ಗಗಳಿಗೆ ಗ್ರಾಮ ಪಂಚಾಯತಿನಲ್ಲಿ ಕಾದಿರಿಸಿದ 25% ಮೀಸಲು ನಿಧಿಯನ್ನು ಸಮರ್ಪಕವಾಗಿ ಬಳಕೆ ಮಾಡಿಲ್ಲ ಹಾಗೂ ಉದ್ಯೋಗಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಟಾನ ಮಾಡಿಲ್ಲ ಎಂಬುದಾಗಿ ಬೆಳುವಾಯಿ ಗ್ರಾಮ ಪಂಚಾಯತಿ ಕಚೇರಿ ಎದುರು ದಲಿತ ಹಕ್ಕುಗಳ ಸಮಿತಿ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಮೂಡಬಿದರೆ ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಗಿರಿಜಾ ಮೂಡಬಿದ್ರೆ, ಶಂಕರ ವಾಲ್ಪಾಡಿ, ಕೃಷ್ಣಪ್ಪ, ರೈತ ಸಂಘದ ಸುಂದರ ಬೆಳುವಾಯಿ, ಸಿಐಟಿಯುನ ರಾಧ, ಸೀತಾರಾಮ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಂಸದರ ಪ್ರಚೋದಕ ಹೇಳಿಕೆಗೆ ಡಿವೈಎಫ್ಐ ಪ್ರತಿಭಟನೆ ಮತ್ತು ದೂರು ಸಲ್ಲಿಕೆ

ಮೂರು ತಿಂಗಳ ಹಿಂದೆ ಉಳ್ಳಾಲ ಪ್ರದೇಶದಲ್ಲಿ ಕೊಲೆಯಾಗಿದ್ದ ಬಿಜೆಪಿ ಕಾರ್ಯಕರ್ತರೊಬ್ಬರ ಪುತ್ರ ಕಾರ್ತಿಕ್‌ರಾಜ್ ಎಂಬಾತನ ಕೊಲೆ ಆರೋಪಿಗಳನ್ನು ಗುರುತಿಸುವಲ್ಲಿ ಪೋಲೀಸ್ ಇಲಾಖೆಯ ವೈಫಲ್ಯವನ್ನು ಖಂಡಿಸುವ ಭರದಲ್ಲಿ ಕೋಣಾಜೆ ಪೋಲೀಸ್ ಠಾಣೆ ಎದುರು ಪ್ರತಿಭಟನಾ ಸಭೆಯಲ್ಲಿ, ಇನ್ನೂ ಪೋಲೀಸರು ಕೊಲೆಗಾರರನ್ನು ಪತ್ತೆ ಹಚ್ಚದಿದ್ದಲ್ಲಿ ಜಿಲ್ಲೆಗೆ ಬೆಂಕಿ ಹಚ್ಚುವುದಾಗಿ ಮಂಗಳೂರು ಸಂಸದ ನಳಿನ್ ಕುಮಾರ್ ಕಟೀಲ್ ಡಿಸೆಂಬರ್ 29 ರಂದು ಹೇಳಿದ್ದರು. ಇದನ್ನು ಖಂಡಿಸಿ ಜನವರಿ 02 ರಂದು ತೊಕ್ಕೊಟಿನಲ್ಲಿ ಪ್ರತಿಭಟನೆ ನಡೆಸುವುದಾಗಿ ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ತಿಳಿಸಿತ್ತು.

ಈ ವಿಚಾರ ಗೊತ್ತಾದೊಡನೆ ತಾನು ಆಕ್ರೋಶದ ಭರದಲ್ಲಿ ಹೇಳಿರುವುದಾಗಿ ಸಂಸದ ನಳಿನ್ ಕುಮಾರ್ ಡಿಸೆಂಬರ್ 31 ರಂದು ಸ್ಪಷ್ಟೀಕರಣ ನೀಡಿದ್ದರೂ, ಅವರ ಮಾತಿನಲ್ಲಿ ಕೋಮು ಪ್ರಚೋದಕ ಭಾವನೆಗಳಿದ್ದೂ, ಜಿಲ್ಲೆಯಲ್ಲಿ ಕೋಮು ಉನ್ಮಾದ ಹುಟ್ಟಿಸುವಂಥದ್ದಾಗಿದೆ ಎಂಬುದಾಗಿ ಜನವರಿ 2 ರಂದು ತೊಕ್ಕೊಟಿನಲ್ಲಿ ಡಿವೈಎಫ್ಐ ಏರ್ಪಡಿಸಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು. ಸಂಸದರ ವಿರುದ್ಧ ರಾಜ್ಯ ಸರಕಾರ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಉಪಾಧ್ಯಕ್ಷ ಮಾತನಾಡಿದರು. ಡಿವೈಎಫ್ಐ ಉಳ್ಳಾಲ ವಲಯ ಮುಖಂಡರಾದ ಜೀವನ್‌ರಾಜ್ ಕುತ್ತಾರ್, ಅಶೋಕ್ ಶೆಟ್ಟಿ, ರಫೀಕ್ ಹರೇಕಳ, ಸಿಪಿಐ(ಎಂ) ಜಿಲ್ಲಾ ಸಮಿತಿಯ ಜಯಂತ ನಾಯ್ಕ್ ಈ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದರು.



ಪ್ ್ರ ಚ್ ೋ ದ್ ನ್ ಕಾ ರಿ ಭಾಷಣ ಮಾಡಿದ ಸಂಸದ ನಳಿನ್ ಕುಮಾರ್ ಕಟೀಲ್ ಅವರ ವಿರುದ್ಧ ಕೊಣಾಜೆ ಪೋಲೀಸ್ ಠಾಣೆಯಲ್ಲಿ ಈ ಮೊದಲೇ ಡಿವೈಎಫ್ಐ ದೂರು ಸಲ್ಲಿಸಿರುತ್ತದೆ.

ಬೀಡಿಗೆ ಬದಲಿ ವ್ಯವಸ್ಥೆ ಕಲ್ಪಿಸಲು ಆಗ್ರಹ

ಜಿಲ್ಲೆಯ ಅಭಿವೃದ್ಧಿಯಲ್ಲಿ ಬೀಡಿ ಉದ್ಯಮ ಮಹತ್ವದ ಪಾತ್ರ ವಹಿಸಿದ್ದು, ತಂಬಾಕು ಉತ್ಪನ್ನಗಳನ್ನು ನಿಯಂತ್ರಿಸುವ ಕಾಯಿದೆಯನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನುಷ್ಟಾನಗೊಳಿಸಲು ಆರಂಭಿಸಿದ್ದರಿಂದ ಸಾವಿರಾರು ಮಂದಿಗೆ ಜೀವನೋಪಾಯ ಕಲ್ಪಿಸಿದ್ದ ಬೀಡಿ ಉದ್ಯಮ ಕುಗ್ಗುತ್ತಾ ಸಾಗಿದ್ದು, ಸಂಪೂರ್ಣ ಇಲ್ಲವಾಗುವ ಹಂತಕ್ಕೆ ಬರುತ್ತಿದೆ. ಬೀಡಿ ಸಂಬಂಧಿತ ವೃತ್ತಿಯಲ್ಲಿ ಅವಲಂಬಿಸಿರುವ ಹಲವಾರು ಮಂದಿಗೆ ಬದಲಿ ಜೀವನಾಧಾರ ವ್ಯವಸ್ಥೆ ಮಾಡಿಕೊಡದೆ, ಬೀಡಿ ನಿಯಂತ್ರಣ ಕಾಯಿದೆ ಜಾರಿಗೊಳಿಸುತ್ತಿರುವುದು ಅಮಾನವೀಯ.

ಬದಲಿ ಉದ್ಯೋಗ ಕಲ್ಪಿಸಿಕೊಡಬೇಕಾದುದು ಸರಕಾರದ ಕರ್ತವ್ಯ. ಗ್ರಾಮ ಪಂಚಾಯತುಗಳು ಬೀಡಿ ಕಾರ್ಮಿಕರನ್ನು ನೋಂದಾಯಿಸಿ ಸರಕಾರಕ್ಕೆ ಬದಲಿ ಉದ್ಯೋಗ ಪ್ರಸ್ತುತ ಕಳುಹಿಸಿಕೊಡಬೇಕೆಂದು ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಆಗ್ರಹಿಸಿದರು.

ಅವರು ದಕ್ಷಿಣ ಕನ್ನಡ ಜಿಲ್ಲೆಯ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಬೆಳ್ಮ ಗ್ರಾಮ ಪಂಚಾಯತ್ ಕಚೇರಿ ಎದುರು ಡಿಸೆಂಬರ್ 31ರಂದು ಬೀಡಿ ಕಾರ್ಮಿಕರ ಹೆಸರು ನೋಂದಾವಣೆ ಕಾರ್ಯಕ್ರಮ ಮತ್ತು ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಬೀಡಿ ಕಾರ್ಮಿಕರಿಗೆ ಬದಲಿ ಉದ್ಯೋಗ ಕಲ್ಪಿಸುವವರೆಗೂ ಕನಿಷ್ಟ ರೂ.3000 ಮಾಸಿಕ ವೇತನವನ್ನು ನೀಡಬೇಕೆಂದೂ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳಲ್ಲಿ ಉದ್ಯೋಗ ಒದಗಿಸಬೇಕೆಂದೂ ಅವರು ಆಗ್ರಹಿಸಿದರು. ಫೆಬ್ರವರಿ ತಿಂಗಳಲ್ಲಿ ಬೀಡಿ ಕಾರ್ಮಿಕರು ಬಲಿಷ್ಠ ಹೋರಾಟ ಮುಂದಾಗುವರೆಂದು ಅವರು ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಕಾರ್ಯದರ್ಶಿ ಜಯಂತ ನಾಯ್ಕ್, ಮತ್ತಿತರ ಯೂನಿಯನ್ನಿನ ಮುಖಂಡರು ಭಾಗವಹಿಸಿದ್ದರು. ಇದೇ ವೇಳೆ ಬೀಡಿ ಕಾರ್ಮಿಕ ಮಹಿಳೆಯರು ನೋಂದಾವಣೆಗಾಗಿ ಸಲ್ಲಿಸಿದ ಅರ್ಜಿಯನ್ನು ಗ್ರಾಮ ಪಂಚಾಯತ್ ಪಿಡಿಒ ಸ್ವೀಕರಿಸಿರುತ್ತಾರೆ.

ಆಸ್ಪತ್ರೆ ಖಾಸಗೀಕರಣ ವಿರೋಧಿಸಿ ಉಡುಪಿಯಲ್ಲಿ ಬೃಹತ್ ಪ್ರತಿಭಟನೆ

ಜಿಲ್ಲಾ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಖಾಸಗೀಕರಣ ವಿರೋಧಿಸಿ ನಾಗರೀಕರ ಒಕ್ಕೂಟ ಉಡುಪಿಯಲ್ಲಿ ಜನವರಿ 6 ರಂದು ಬೃಹತ್ ಪ್ರತಿಭಟನೆ ನಡೆಸಿತು.

ಕಳೆದ ಶತಮಾನದ ಆರಂಭದಲ್ಲಿ ಉಡುಪಿಯ ಸುಪ್ರಸಿದ್ಧ ದಾನಿಗಳಾಗಿದ್ದ ಹಾಜಿ ಅಬ್ದುಲ್ಲಾ ಹಾಜಿ ಕಾಸಿಂ ಸಾಹೇಬರು ಉಡುಪಿ ಪೇಟೆಯ ಮಧ್ಯಭಾಗದಲ್ಲಿ ತುಂಬಾ ಬೆಲೆ ಬಾಳುವ ವಿಸ್ತಾರವಾದ ಜಮೀನನ್ನು ಬಡ ಜನರಿಗೆ ಚಿಕಿತ್ಸೆ ಶುಶ್ರೂಷೆ ಸಲುವಾಗಿ ಸರಕಾರಕ್ಕೆ ದಾನ ಮಾಡಿದ್ದರು. ಅಲ್ಲಿ ಸ್ಥಾಪಿತವಾದ ಸರಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ 80 ವರ್ಷ ದಾಟಿ ಬಡಜನರ ಸೇವೆ ಮಾಡುತ್ತಿದೆ. ಆದರೆ ಈಗಿನ ಕರ್ನಾಟಕ ರಾಜ್ಯ ಸರಕಾರ ಹೈಟೆಕ್ ಆರೋಗ್ಯ ಸೇವೆಯನ್ನು ಖಾಸಗಿ–ಸಾರ್ವಜನಿಕ ಸಹಭಾಗಿತ್ವ (ಪಿಪಿಪಿ) ದ ಹೆಸರಲ್ಲಿ ಒದಗಿಸುವುದಾಗಿ ಹೇಳಿ ಆಸ್ಪತ್ರೆಯ ನಿವೇಶನ ಸಂಕೀರ್ಣವನ್ನು ಉದ್ಯಮಿ ಬಿ.ಆರ್.ಶೆಟ್ಟಿ ಅವರಿಗೆ ಹಸ್ತಾಂತರಿಸಲು ಸಿದ್ಧವಾಗಿದೆ. ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯು ಈಗಾಗಲೇ ಈ ಬಗ್ಗೆ ಪ್ರತಿಭಟನೆಗಳನ್ನು ನಡೆಸಿದೆ. ಸಾರ್ವಜನಿಕವಾಗಿ ಸಂಘ ಸಂಸ್ಥೆಗಳೂ ಸರಕಾರದ ನಿಲುವನ್ನು ಖಂಡಿಸಿವೆ. ಬೇರೆ ಜಿಲ್ಲೆಗಳಿಂದಲೂ ಬಡ ಗರ್ಭಿಣಿ, ಬಾಣಂತಿ ಮಕ್ಕಳನ್ನು ಆಕರ್ಷಿಸಿ ಶುಶ್ರೂಷೆ ನೀಡಿ ಖ್ಯಾತರಾಗಿರುವ ಸರಕಾರೀ ಆಸ್ಪತ್ರೆಯನ್ನು ಸರಕಾರವು ಖಾಸಗಿಯವರಿಗೆ ಒಪ್ಪಿಸುವುದನ್ನು ಖಂಡತುಂಡವಾಗಿ ವಿರೋಧಿಸುತ್ತಿದೆ.

ನಾಗರಿಕ ಒಕ್ಕೂಟದ ಆಕ್ರೋಶಭರಿತ ಪ್ರತಿಭಟನಾ ಮೆರವಣಿಗೆ ಉಡುಪಿ ನಗರದ ಜೋಡುಕಟ್ಟೆಯಿಂದ ಹೊರಟು ಚಿತ್ತರಂಜನ್ ವೃತ್ತದಲ್ಲಿ ಸಮಾವೇಶಗೊಂಡಿತು. ಸಿಐಟಿಯು, ಎಐಟಿಯುಸಿ, ದಸಂಸ ಸದಸ್ಯರು, ಸಾರ್ವಜನಿಕರು ಭಾಗವಹಿಸಿದ್ದರು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಕೆ.ಶಂಕರ್, ಬಾಲಕೃಷ್ಣ ಶೆಟ್ಟಿ ಸಿಐಟಿಯುವನ್ನು ಪ್ರತಿನಿಧಿಸಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಸ್ಕಿಲ್‌ಗೇಮ್, ಮಸಾಜ್ ಪಾರ್ಲರ್ ಮುಚ್ಚಿಸಲು ಪ್ರತಿಭಟನೆ

ಮಂಗಳೂರು ನಗರದಲ್ಲಿ ಸ್ಕಿಲ್‌ಗೇಮ್, ವೀಡಿಯೋ ಗೇಮ್, ಜುಗಾರಿ ಅಡ್ಡೆ, ಮಸಾಜ್ ಪಾರ್ಲರ್‌ಗಳು ಮನೋರಂಜನೆಯ ಹೆಸರಿನಲ್ಲಿ ಪರವಾನಗೆ ಪಡೆದು ಅಕ್ರಮ ಜೂಜುಕಟ್ಟೆ ಹಾಗೂ ಅನೈತಿಕ ಚಟುವಟಿಕೆಗಳ ತಾಣಗಳಾಗಿವೆ ಎಂಬುದಾಗಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಜನವರಿ 16 ರಂದು ನಡೆಸಿದ ಪ್ರತಿಭಟನಾ ಪ್ರದರ್ಶನದಲ್ಲಿ ಆಕ್ರೋಶ ವ್ಯಕ್ತಪಡಿಸಿತು. ಬಡ ಕೂಲಿಕಾರ್ಮಿಕರು ಗಳಿಸಿದ ಹಣವನ್ನು ಈ ಅಡ್ಡೆಗಳು ದೋಚುತ್ತಿವೆ ಎಂಬುದಾಗಿ ಆರೋಪಿಸಿತು. ಅಲ್ಲದೆ ಇವಕ್ಕೆ ಪೋಲೀಸರು ಹಾಗೂ ರಾಜಕೀಯ ಶಕ್ತಿಗಳ ಬೆಂಬಲವಿದೆ ಎಂಬುದಾಗಿಯೂ ಟೀಕಿಸಿತು.

ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ನಡೆದ ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ದಯಾನಂದ ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಬಜಾಲ್, ಉಪಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಪೋಲೀಸರು ಇಂಥ ಚಟುವಟಿಕೆಗಳಿಗೆ ತಡೆ ಹಾಕದಿದ್ದರೆ ಅಂಥ ಪಾರ್ಲರುಗಳ ಮುಂದೆ ಡಿವೈಎಫ್ಐ ಕಾರ್ಯಕ್ರಮ ಹಮ್ಮಿಕೊಳ್ಳಲಿದೆ ಎಂದು ಎಚ್ಚರಿಕೆ ನೀಡಲಾಯಿತು.



'ಸಮಾನ ಕೆಲಸಕ್ಕೆ ಸಮಾನ ವೇತನ' ಜಾರಿಗಾಗಿ ಗುತ್ತಿಗೆ ನೌಕರರ ಪ್ರತಿಭಟನೆ

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಇತ್ತೀಚೆಗೆ ದೇಶದ ಸರ್ವೋಚ್ಚ ನ್ಯಾಯಾಲಯವು ಚಾರಿತ್ರಿಕ ತೀರ್ಪು ನೀಡಿದ್ದು, ಅದನ್ನು ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕೂಡಲೇ ಕಾರ್ಯಪ್ರವೃತ್ತರಾಗಬೇಕೆಂದು ಸಿಐಟಿಯುಗೆ ಸಂಯೋಜಿತಗೊಂಡಿರುವ ನೂರಾರು ಗುತ್ತಿಗೆ ನೌಕರರು ಜನವರಿ 12ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿಯೆದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಕರ್ನಾಟಕ ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿ ಮಾತನಾಡಿ 'ಪಂಜಾಬ್ ರಾಜ್ಯ ಸರಕಾರ ಹಾಗೂ ಇತರರ ವಿರುದ್ಧ ಜಗಜಿತ್‌ಸಿಂಗ್ ಹಾಗೂ ಇತರರು ಹೂಡಿದ್ದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತಾ.26-10-2016ರಂದು ಐತಿಹಾಸಿಕ ತೀರ್ಪನ್ನು ನೀಡಿದ್ದು, ಗುತ್ತಿಗೆ ಕಾರ್ಮಿಕರ ಪಾಲಿಗಂತೂ ತೀರಾ ಸಂತಸದ ವಿಷಯವಾಗಿದೆ. ಆದರೆ ಇದನ್ನು ಜಾರಿಗೊಳಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮೀನಮೇಷ ಎಣಿಸುತ್ತಿರುವುದು ತೀರಾ ಬೇಸರದ ಸಂಗತಿಯಾಗಿದೆ' ಎಂದರು.

ಸಿಐಟಿಯು ದ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನೀಲ್‌ಕುಮಾರ್ ಬಜಾಲ್‌ರವರು ಮಾತನಾಡಿ 'ಕಳೆದ 25 ವರ್ಷಗಳಿಂದ ನಿರಂತರವಾಗಿ ದುಡಿಯುತ್ತಿದ್ದರೂ ಗುತ್ತಿಗೆ ನೌಕರರ ಸಂಕಷ್ಟವನ್ನು ಹೇಳ ತೀರದ್ದಾಗಿದೆ. ಸಂಘಟಿತ ಶಕ್ತಿಯಾಗಿ ಪ್ರಬಲ ಹೋರಾಟ ನಡೆಸಿದ್ದರ ಭಾಗವಾಗಿ ಅಲ್ಪಸ್ವಲ್ಪ ಸವಲತ್ತುಗಳು ದೊರೆಯಲಾರಂಭಿಸಿತು. ಅದನ್ನು ಕೂಡ ಗುತ್ತಿಗೆದಾರರು ನೀಡದೆ ಗುಲಾಮರಂತೆ ದುಡಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ ನಗರದ ಮನಪಾ ಕಚೇರಿ, ಜಿಲ್ಲಾಧಿಕಾರಿ ಕಚೇರಿ, ತಾಲೂಕು ಕಚೇರಿ, ಆಸ್ಪತ್ರೆಗಳು, ಬ್ಯಾಂಕುಗಳು, ಮೆಸ್ಕಾಂ, ಬಿಎಸ್‌ಎನ್‌ಎಲ್, ಮಾಲ್‌ಗಳು ಮುಂತಾದ ಕಡೆಗಳಲ್ಲಿ ದುಡಿಯುವ ಗುತ್ತಿಗೆ ಕಾರ್ಮಿಕರು ಸೆಕ್ಯುರಿಟಿ ಗಾರ್ಡ್‌ಗಳು ಸೇರಿದಂತೆ ಸಾವಿರಾರು ಕಾರ್ಮಿಕರು ತೀರಾ ಸಂಕಷ್ಟದಲ್ಲಿದ್ದು ಮುಂದಿನ ದಿನಗಳಲ್ಲಿ ಪ್ರಬಲ ಚಳುವಳಿಯನ್ನು ಕಟ್ಟಿಬೆಳೆಸುವಂತಾಗಲು ಎಲ್ಲರೂ ಒಂದಾಗಬೇಕಾಗಿರುವುದು ಅನಿವಾರ್ಯವಾಗಿದೆ ಎಂದರು.

ಹೋರಾಟದ ನೇತೃತ್ವವನ್ನು ಸಿಐಟಿಯು ಜಿಲ್ಲಾ ಮುಖಂಡರಾದ ಯೋಗೀಶ್ ಜಪ್ಪಿನಮೊಗರು, ಸಂತೋಷ್ ಶಕ್ತಿನಗರ, ಗುತ್ತಿಗೆ ನೌಕರರ ಜಿಲ್ಲಾ ಮುಖಂಡರಾದ ಬಾಲಕೃಷ್ಣ, ಹರೀಶ್, ಸುನೀಲ್ ಮುಂತಾದವರು ವಹಿಸಿದ್ದರು.

ಯುವತಿ ಮೇಲೆ ಲೈಂಗಿಕ ದೌರ್ಜನ್ಯ ಖಂಡಿಸಿ ಪ್ರತಿಭಟನೆ



ರಾಜ್ಯಾದ್ಯಂತ ಮತ್ತು ವಿಶೇಷವಾಗಿ ಬೀದರ್ ಹಾಗೂ ಬೆಂಗಳೂರಿನಲ್ಲಿ ನಡೆದಿರುವ ಅತ್ಯಾಚಾರ, ಲೈಂಗಿಕ ಕಿರುಕುಳಗಳನ್ನು ತಡೆಗಟ್ಟಲು ವಿಫಲವಾದ ಕಾಂಗ್ರೆಸ್ ಸರ್ಕಾರದ ವಿರುದ್ಧ, ಗೃಹ ಸಚಿವರಾದ ಜಿ.ಪರಮೇಶ್ವರ್ ರವರ ಹೊಣೆಗೇಡಿತನ ಖಂಡಿಸಿ ಜನವರಿ 05ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಎಸ್‌ಎಫ್‌ಐ, ಜೆಎಂಎಸ್ ಮತ್ತು ಸಿಐಟಿಯು ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಬೀದರ್‌ನ ಅಂಗನವಾಡಿ ಸಂತ್ರಸ್ತೆಗೆ, ಬೆಂಗಳೂರಿನ ಕಮ್ಮನಹಳ್ಳಿ ಪ್ರದೇಶದಲ್ಲಿನ ಮಹಿಳೆಗೆ ನೂತನ ವರ್ಷಾಚರಣೆ ಸಂದರ್ಭದಲ್ಲಿ ಕಾಮುಕರ ತಂಡವೊಂದು ಆಟೋರಿಕ್ಷಾದಿಂದ ಇಳಿದು ಮನೆಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಯುವತಿಯನ್ನು ಅಡ್ಡಗಟ್ಟಿ, ಆಕೆಯನ್ನು ಬಲವಂತವಾಗಿ ಎಳೆದುಕೊಂಡು ಹೋಗಲು ಪ್ರಯತ್ನಿಸಿದ್ದಾರೆ.

ಬಳಿಕ ಆಕೆಯನ್ನು ಅಮಾನುಷವಾಗಿ ಬೈಕ್‌ನಿಂದ ರಸ್ತೆಗೆ ತಳ್ಳಿ ಪರಾರಿಯಾಗಿದ್ದಾರೆ. ಈ ಘಟನೆಯಿಂದ ಬೆಂಗಳೂರಿನಲ್ಲಿ ಕಾಮುಕರ ಅಟ್ಟಹಾಸ ಮುಂದುವರೆದಿದ್ದು, ಹೆಣ್ಣು ಮಕ್ಕಳಿಗೆ ಸೂಕ್ತ ರಕ್ಷಣೆ ಇಲ್ಲವಾದಂತಾಗಿದೆ.

ಕಾಮುಕರನ್ನು ಕೂಡಲೇ ಬಂಧಿಸಬೇಕು ಹಾಗೂ ಗಾಯಗೊಂಡು ಲೈಂಗಿಕ ಕಿರುಕುಳಕ್ಕೆ ಒಳಗಾದ ಹೆಣ್ಣು ಮಕ್ಕಳಿಗೆ ಸೂಕ್ತ ರಕ್ಷಣೆ ಹಾಗೂ ಪರಿಹಾರಕ್ಕಾಗಿ ಒತ್ತಾಯಿಸಿದರು.

ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ॥ವಸುಂಧರ ಭೂಪತಿ, ಜೆಎಂಎಸ್‌ನ ಕಾಂ॥ಕೆ.ಎಸ್.ವಿಮಲ, ಕಾಂ॥ಗೌರಮ್ಮ, ಕಾಂ॥ಕೆ. ಎಸ್.ಲಕ್ಷ್ಮೀ, ಅಂಗನವಾಡಿ ನೌಕರರ ಸಂಘದ ಕಾಂ॥ಸುನಂದಾ, ಕಾಂ॥ಮಾಲಿನಿ ಮೆಸ್ತ, ಸಿಐಟಿಯು ಬೆಂ.ಉತ್ತರ ಜಿಲ್ಲಾಧ್ಯಕ್ಷರಾ ಕಾಂ॥ಎನ್.ಪ್ರತಾಪ್ ಸಿಂಹ, ಕಾಂ॥ಹನುಮಂತರಾವ್ ಹವಾಲ್ದಾರ್, ಕಾಂ॥ಟಿ.ಲೀಲಾವತಿ, ಕಾಂ॥ಎ.ಹೆಚ್.ವಿಜಯಲಕ್ಷ್ಮಿ ಹಾಗೂ ಇತರರು ಭಾಗವಹಿಸಿದ್ದರು. ●

ಪ್ರತ್ಯೇಕ ಆಹಾರ ವಲಯಕ್ಕಾಗಿ ಮಂಗಳೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳ ಆಗ್ರಹ

ಬೀದಿ ಬದಿ ವ್ಯಾಪಾರಿಗಳ ಹೋರಾಟ ಒಂದು ಹಂತದಲ್ಲಿ ಮಂಗಳೂರಿನಲ್ಲಿ ಯಶಸ್ವಿಯಾಗಿದ್ದು, ಮಂಗಳೂರು ನಗರ ಪಾಲಿಕೆಯು ವ್ಯವಸ್ಥೆ ಮಾಡಿಕೊಟ್ಟಿದ್ದು, ನೂರಕ್ಕೂ ಮೀರಿ ಬೀದಿ ಬದಿ ವ್ಯಾಪಾರಿಗಳಿಗೆ ಅದರಿಂದ ಅನುಕೂಲವಾಗಿದೆ. ಅಂ-ದರೆ ನೈರ್ಮಲ್ಯಕ್ಕೆ ಮಹತ್ವ ನೀಡಬೇಕಾದ ಆಹಾರದ ಮಳಿಗೆಗಳಿಗೂ ಅಲ್ಲೇ ಅವಕಾಶ ಕೊಟ್ಟಿರುವುದು ಅವೈಜ್ಞಾನಿಕವಾಗಿದ್ದು, ಪ್ರತ್ಯೇಕ ಆಹಾರ ವಲಯವನ್ನು ನಿರ್ಮಿಸಿಕೊಡಬೇಕೆಂದು ಆಗ್ರಹಿಸಿ ದ.ಕ.ಬೀದಿ ಬದಿ ವ್ಯಾಪಾರಸ್ಥರ ಸಂಘವು ಜನವರಿ 6 ರಂದು ಮಂಗಳೂರು ಮಹಾನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಂಘದ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಸಂಘದ ಅಧ್ಯಕ್ಷ ಮಹಮ್ಮದ್ ಮುಸ್ತಾಫ, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಆಹಾರ ವ್ಯಾಪಾರಸ್ಥರ ಸಂಚಾಲಕ ಹರೀಶ್ ಪೂಜಾರಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಬಲ್ಲಾಳ್‌ಬಾಗ್‌ನಿಂದ ಪಾಲಿಕೆ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ದಲಿತರ ಮನೆಗಳಿಗೆ ನೀರು ಕಡಿತ ವಿರೋಧಿಸಿ ಇರುವೈಲು ಗ್ರಾ.ಪಂ. ಕಚೇರಿಗೆ ಬೀಗ:

ಕುಡಿಯುವ ನೀರು ಪಡೆಯುವುದು ಮಾನವ ಹಕ್ಕು. ಹಾಗಿದ್ದರೂ ನೀರಿನ ಬಿಲ್ಲು ಕಟ್ಟಿಲ್ಲ ಎಂಬ ಕಾರಣ ಹೇಳಿ ಮಂಗಳೂರು ತಾಲೂಕಿನ ಇರುವೈಲ್ ಗ್ರಾಮದಲ್ಲಿ 13 ದಲಿತರ ಮನೆಗಳಿಗೆ ನೀರಿನ ಸಂಪರ್ಕ ಕಡಿತಗೊಳಿಸಲಾಯಿತು. ಇದನ್ನು ವಿರೋಧಿಸಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಜನವರಿ 6 ರಂದು ಇರುವೈಲ್ ಗ್ರಾಮ ಪಂಚಾಯತ್ ಕಚೇರಿಗೆ ಬೀಗ ಜಡಿಯಲಾಯಿತು.

ಪೋಲೀಸರು ಬಂದರೂ ಬೀಗ ತೆಗೆಯಲು ಪ್ರತಿಭಟನಾಕಾರರು ಸಿದ್ಧರಾಗಲಿಲ್ಲ, ಬಳಿಕ ಮೂಡಬಿದ್ರೆ ತಹಶೀಲ್ದಾರರು ಆಗಮಿಸಿ ಪ್ರತಿಭಟನಾಕಾರರ ಮನ ಒಲಿಸಿ ಪಿಡಿಒಗೆ ನಿರ್ದೇಶನ ನೀಡಿದ ಮೇಲೆ ಕಚೇರಿ ಬೀಗವನ್ನು ತೆರವುಗೊಳಿಸಲಾಯಿತು. ಪ.ಜಾತಿಗಳ ನಿಧಿಯನ್ನು ದಲಿತರ ನೀರಿನ ಬಿಲ್ಲು ಪಾವತಿಗೆ ಬಳಸಬೇಕೆಂದು ಸಿಪಿಐ(ಎಂ) ಮೂಡಬಿದರೆ ವಲಯ ಕಾರ್ಯದರ್ಶಿ ಯಾದವ ಶೆಟ್ಟಿ ಈ ಸಂದರ್ಭ ಆಗ್ರಹಿಸಿದರು.

ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕರಾದ ಲಿಂಗಪ್ಪ ನಂತೂರು, ಗಿರಿಜಾ ಮೂಡಬಿದರೆ, ಶಂಕರ ವಾಲ್ಪಾಡಿ, ಕೃಷ್ಣಪ್ಪ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮಂಗಳೂರು ಮಹಾನಗರ ಪಾಲಿಕೆಯ ಆಡಳಿತ ನಿವೇಶನ ರಹಿತರಿಗೆ ಅನ್ಯಾಯವೆಸಗಿದೆ – ಸುನಿಲ್ ಕುಮಾರ್ ಬಜಾಲ್

ಕಳೆದ ಮೂರು ವರ್ಷಗಳಿಂದ ನಿವೇಶನರಹಿತರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಹಲವಾರು ಪ್ರತಿಭಟನೆಗಳನ್ನು ನಡೆಸಿದ್ದಾರೆ. ಪ್ರತೀ ಭಾ-ರಿಯೂ ಪೊಳ್ಳು ಭರವಸೆಗಳನ್ನು ನೀಡಿದ ಮಹಾನಗರ ಪಾಲಿಕೆಯು ಅಂತಿಮವಾಗಿ ನವೆಂಬರ್ ತಿಂಗಳಲ್ಲಿ ಮಂಗಳೂರು ದಕ್ಷಿಣ ಸಮಿತಿ ನಿವೇಶನ ಫಲಾನುಭವಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ವಾಸ್ತವಿಕವಾಗಿ ಈ ಪಟ್ಟಿಯು ನಿಜವಾದ ನಿವೇಶನರಹಿತರಿಗೆ ಅನ್ಯಾಯವೆಸಗಿದೆ ಎಂದು ಹೇಳುತ್ತಾ ಈ ಅನ್ಯಾಯದ ವಿರುದ್ಧ ಮಂಗಳೂರು ನಗರದ ಉದ್ದಗಲಕ್ಕೂ ಮೂರು ತಿಂಗಳ ಕಾಲ ನಿರಂತರ ಹೋರಾಟ ನಡೆಸುವುದಾಗಿ ಜನವರಿ 09ರಂದು ಸಂಜೆ 6 ಗಂಟೆಗೆ ಉರ್ವಾಸ್ಟೋರ್‌ನಲ್ಲಿ ನಡೆದ ನಿವೇಶನರಹಿತರ ಪ್ರತಿಭಟನಾ ಸಭೆಯಲ್ಲಿ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಭಾಗವಹಿಸಿ ಮಾತನಾಡಿದರು.

ಸಭೆಯಲ್ಲಿ ನಿವೇಶನರಹಿತರ ಹೋರಾಟ ಸಮಿತಿಯ ನಾಯಕರಾದ ಕೃಷ್ಣಪ್ಪ ಕೊಂಚಾಡಿ, ಯೋಗೀಶ್ ಜಪ್ಪಿನಮೊಗರು, ಸಂತೋಷ್ ಶಕ್ತಿನಗರ, ಪ್ರೇಮನಾಥ ಜಲ್ಲಿಗುಡ್ಡೆ ಭಾಷಣ ಮಾಡಿದರು. ಪ್ರಾರಂಭದಲ್ಲಿ ಪ್ರದೀಪ್ ಉರ್ವಾಸ್ಟೋರ್ ಸ್ವಾಗತಿಸಿ, ಕೊನೆಯಲ್ಲಿ ಮನೋಜ್ ಉರ್ವಾಸ್ಟೋರ್ ವಂದಿಸಿದರು. ಹೋರಾಟದಲ್ಲಿ ಪ್ರಭಾವತಿ, ಉಮಾಶಂಕರ್, ಇಕ್ಬಾಲ್, ಧನ್‌ರಾಜ್, ಪ್ರಶಾಂತ್ ಎಂ.ಬಿ, ಶೃತಿ, ಹೇಮಾವತಿ, ಹರಿನಾಕ್ಷಿ, ಅಶೋಕ್ ಶ್ರೀಯಾನ್, ಉರ್ವಾಸ್ಟೋರ್ ಮತ್ತು ಕೊಟ್ಟಾರದ ನಿವೇಶನರಹಿತರು ಭಾಗವಹಿಸಿದ್ದರು.

ಹೋರಾಟ ಪರಿಣಾಮ : ಕೊನೆಗೂ ಹಕ್ಕುಪತ್ರ ನೀಡಲು ತೀರ್ಮಾನಿಸಿದ ಸರ್ಕಾರ

ಗೋಮಾಳ, ಖರಾಬು ಮುಂತಾದ ಸರಕಾರಿ ಜಮೀನುಗಳಲ್ಲಿ ಸಾಗುವಳಿ ನಿರತ ಮತ್ತು ಈಗಾಗಲೇ ಅವುಗಳ ಹಕ್ಕುಪತ್ರಕ್ಕಾಗಿ ಫಾರಂ ನಂ; 50 ಹಾಗೂ 53 ಸಲ್ಲಿಸಿ ತಿರಸ್ಕರಿಸಲ್ಪಟ್ಟ ಅರ್ಜಿದಾರ ಬಡ ಸಾಗುವಳಿದಾರರಿಗೆ ಮರಳಿ ಹಕ್ಕುಪತ್ರ ನೀಡಲು ಕ್ರಮವಹಿಸುವುದಾಗಿ ಹೇಳಿದ ರಾಜ್ಯ ಸರಕಾರದ ಮಂತ್ರಿ ಮಂಡಲದ ನಿರ್ಣಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸ್ವಾಗತಿಸಿದೆ.

ಕಳೆದ ಒಂದೆರಡು ದಶಕಗಳಿಂದ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನೇತೃತ್ವದಲ್ಲಿ ಚಳುವಳಿಯಲ್ಲಿ ತೊಡಗಿದ್ದ ರಾಜ್ಯದ ಬಡ ಸಾಗುವಳಿದಾರರಿಗೆ ಸಿಕ್ಕ ಜಯವಾಗಿದೆ. ಅದೇ ರೀತಿ, ಇತರೇ ಸಾರ್ವಜನಿಕ ಬಳಕೆಯೆಂದು ತಿರಸ್ಕರಿಸಲಾದ ಬಡರಿಗೆ ಜಮೀನಿನ ಹಕ್ಕು ನೀಡಲು ಕೂಡ ಅಗತ್ಯ ಕ್ರಮಗಳನ್ನು ವಹಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಹಲವೆಡೆ, ಪಹಣಿ ಪತ್ರಿಕೆಗಳಲ್ಲಿ ಹಳ್ಳಾ, ಕೆರೆ ಬಯಲು, ಈಚಲುನ, ಕುದುರೆ ಕಾವಲು ಹಾಗೂ ಅಮೃತ ಮಹಲು, ಕುಮ್ಕಿ, ಪೈಸಾರಿ ಮುಂತಾದ ಹೆಸರುಗಳಿದ್ದರೂ ವಾಸ್ತವದಲ್ಲಿ ಮತ್ತು ಬದಲಾದ ಸನ್ನಿವೇಶ ಹಾಗೂ ಭೌಗೋಳಿಕ ಕಾರಣದಿಂದಾಗಿ ಅವು ಅದೇ ಹೆಸರಿನಲ್ಲುಳಿದಿಲ್ಲ. ಬದಲಿಗೆ, ಅವುಗಳು ಬಡವರಿಂದ ಅಭಿವೃದ್ಧಿ ಪಡಿಸಲ್ಪಟ್ಟಿವೆ. ಆದ್ದರಿಂದ ಸದರಿ ಹೆಸರಿನ ಎಲ್ಲಾ ಜಮೀನುಗಳನ್ನು ಕೂಡಲೇ ಸರ್ವೆ ಇಲಾಖೆಯಿಂದ ಸರ್ವೆ ನಡೆಸಿ, ಪಹಣಿ ಪತ್ರಿಕೆಗಳ ಸಾಗುವಳಿ ಕಾಲಂನ್ನು ವಾಸ್ತವಿಕತೆಯ ಆಧಾರದಲ್ಲಿ ಭರ್ತಿ ಮಾಡಲು ಮತ್ತು ಅಂತಹ ಎಲ್ಲಾ ಸಾಗುವಳಿ ನಿರತ ಬಡವರಿಗೂ ಹಕ್ಕು ಪತ್ರ ನೀಡಲು ಅಗತ್ಯ ಕ್ರಮವಹಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ನಗರಗಳ ವ್ಯಾಪ್ತಿಯ ಬಡ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲಾಗದೆಂದು ತಿರಸ್ಕರಿಸಲ್ಪಟ್ಟು, ಬೇರೆ ಸಂಸ್ಥೆಗಳಿಗೆ ನಿಗದಿಸುವುದು ನಡೆದಿದೆ. ಇದರಿಂದ ಸಾವಿರಾರು ಬಡಕುಟುಂಬಗಳು ಕಳೆದ ಹಲವಾರು ದಶಕಗಳಿಂದ ಶ್ರಮವಹಿಸಿ ಅಭಿವೃದ್ಧಿಪಡಿಸಿವೆ. ಸರಕಾರದ ಮೊಂಡುತನದಿಂದ ಈ ಬಡವರಿಗೆ ಅನ್ಯಾಯವಾಗುತ್ತಿದೆ. ಆದ್ದರಿಂದ ಈ ಎಲ್ಲಾ ಬಡವರಿಗೂ ಹಕ್ಕುಪತ್ರ ನೀಡಲೂ ಅಗತ್ಯವಾದ ಕ್ರಮಗಳನ್ನು ವಹಿಸಬೇಕು.

ಅಲ್ಲದೇ, ಈ ಹಿಂದೆ ಕಂದಾಯ ಇಲಾಖೆಯಿಂದ 18 ಲಕ್ಷಕ್ಕೂ ಅಧಿಕ ಎಕರೆ ಅರಣ್ಯ ಇಲಾಖೆಗೆ ವರ್ಗಾಯಿಸಿರುವುದನ್ನು ವಾಪಾಸು ಪಡೆಯುವ ಕ್ರಮ ನಡೆದಿದೆ ಆದರೇ ಅ ಜಮೀನುಗಳಲ್ಲಿ ಈ ಹಿಂದೆ ಅರಣ್ಯ ಇಲಾಖೆಯ ದೌರ್ಜನ್ಯಕ್ಕೆ ತುತ್ತಾಗಿ ಒಕ್ಕಲೆಬ್ಬಿಸಲ್ಪಟ್ಟ ಬಡವರಿಗೆ ಅದರ ಹಕ್ಕುಪತ್ರ ನೀಡಲು ಕ್ರಮಹಿಸಬೇಕು. ಆದಿವಾಸಿಗಳು, ದೇವದಾಸಿ ಮಹಿಳೆಯರು, ಅವರ ಮಕ್ಕಳು, ಮಸಣಕಾರ್ಮಿಕರೂ ಸೇರಿದ ಎಲ್ಲಾ ದಲಿತ ಜನವಿಭಾಗಕ್ಕೆ ಹಿಂದುಳಿದ ಹಾಗೂ ಇತರೇ ಎಲ್ಲ ಬಡವರಿಗೆ ಒದಗಿಸಲು ಸೂಕ್ತ ಕ್ರಮವಹಿಸಬೇಕೆಂದು ಕೆಪಿಆರ್‌ಎಸ್ ಸಂಘಟನೆಯು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ●

ಮೋದಿ ಆಡಳಿತದಿಂದ ಇನ್ನು ಎರಡು ವರ್ಷದಲ್ಲಿ ಹದಿನೈದು ರೂಪಾಯಿಗೆ ಒಂದು ಡಾಲರ್,
ಅಲ್ಲಲ್ಲ ಒಂದು ರೂಪಾಯಿಗೆ ಹದಿನೈದು ಡಾಲರ್ ಸಿಗುತ್ತದೆ. ಸಂಸದ ನಳಿನ್ ಕಟೀಲ್ ಉವಾಚ
ನಮ್ಮ ವೀರ, ಶೂರ ಸಂಸದ ನಳಿನ್ ಕಟೀಲ್ ಕೇರಳದ ಭಾಷಣದಲ್ಲಿ "ಕರ್ನಾಟಕದ ಕಮ್ಯುನಿಸ್ಟರಿಗೆ ಬಡಿಯುತ್ತೇನೆ" ಅಂತ ಮಾತ್ರ ಹೇಳಿದ್ದಲ್ಲ, ಮೋದಿಯ ನೋಟ್ ಬ್ಯಾನ್ ಆಡಳಿತದಿಂದ ಈಗ ಒಂದು ಡಾಲರ್ ಗೆ ಅರವತ್ತು ರೂಪಾಯಿ ಇರುವುದು ಇನ್ನೆರಡೇ ವರ್ಷದಲ್ಲಿ ಡಾಲರ್ ಗೆ ಹದಿನೈದು ರೂಪಾಯಿ ಅಲ್ಲಲ್ಲ ಒಂದು ರೂಪಾಯಿಗೆ ಹದಿನೈದು ಡಾಲರ್ ಗೆ ಬಂದು ನಿಲ್ಲುತ್ತದೆ ಅಂತ ಯಕ್ಷಗಾನದ ಶೈಲಿಯಲ್ಲಿ ಹೇಳಿದ್ದಾರೆ. ಕೇರಳದ ಜನತೆಗೆ ಭರಪೂರ ಮನರಂಜನೆ, ಕರುನಾಡಿನ ಮಾನ ಮಲಯಾಳಿಗಳ ಮುಂದೆ ಹರಾಜಾಗಿ ಹೋಯ್ತು.
ಮೋದಿಯಂತಹ ಮೋದಿಯನ್ನೇ ನಿವಾಳಿಸಿ ಎಸೆಯಬೇಕು ನಮ್ಮ ನಳಿನ್ ಮುಂದೆ. ಬಂಡಲ್ ದೊರೆಗೆ ಜೋಕರ್ ಭಕ್ತ.
ನೋಡಿ ಆನಂದಿಸಿರಿ.

– ಮುನೀರ್ ಕಾಟಿಪಳ್ಳ



ಪ್ರೊ. ರಾಜೇಂದ್ರ ಚೆನ್ನಿ

ಎಡವೂ ಅಲ್ಲ, ಬಲವೂ ಅಲ್ಲ, ಅರ್ಥಾತ್ ಏನೂ ಅಲ್ಲ.

ಯಾವುದೇ ಅಲೆಗೆ ಹೋಗಬೇಡವೆನ್ನುವುದು ಒಂದು ಸಲಹೆಯೇ ಹೊರತು ತಾತ್ವಿಕ ವಾದವಾಗಲಾರದು. ಇಂಥ ವಾದವು ಹೊಸದಲ್ಲ. ಮನುಷ್ಯ ವಿರೋಧಿಯಾದ ಬಲಪಂಥೀಯ ರಾಜಕೀಯವು ಪ್ರಬಲವಾಗುತ್ತಿದ್ದಾಗಲೆಲ್ಲ ಅದು ಮುನ್ನೆಲೆಗೆ ಬರುತ್ತದೆ. ಅದರ ಮುಖ್ಯಗುರಿಯೆಂದರೆ ವಿಮರ್ಶೆ ಹಾಗೂ ಪ್ರತಿಭಟನೆಗಳನ್ನು ಹತ್ತಿಕ್ಕುವುದು. ಈ ವಾದವು ಅಪ್ಪಟವಾದ, ಮಧ್ಯಮ ವರ್ಗಕ್ಕೆ ಕೊಡಲಾಗುವ ಅಫೀಮು. ಮೊದಲೇ ರಾಜಕೀಯ ಚಿಂತನೆ ಅಥವಾ ಕ್ರಿಯೆಯೆಂದರೆ ಅಸಡ್ಡೆ ತೋರಿಸಿ ದೂರವಿರುವ ಈ ವರ್ಗಕ್ಕೆ ಅದರ ನಿಷ್ಕ್ರಿಯತೆಗೆ ಒಂದು ಆಕರ್ಷಕವಾದ ನ್ಯಾಯಸಮರ್ಥನೆಯು ಈ ವಾದದಿಂದ ದೊರೆಯುತ್ತದೆ. ಇಷ್ಟು ಸಾಲದು ಎಂಬಂತೆ ಬುದ್ಧನಡೂ ಮಧ್ಯಮ ಮಾರ್ಗವೆಂದು ಅವನನ್ನು ತಮ್ಮ ಬ್ರಾಂಡ್ ಅಂಬಾಸಡರ್"ನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ!

ಇತ್ತೀಚಿಗೆ ಒಂದು ವಾದವನ್ನು ಇದೇನೋ ನಮ್ಮ ಬಿಕ್ಕಟ್ಟುಗಳಿಗೆ ಹೊಸ ಪರಿಹಾರವೆನ್ನುವ ಹಾಗೆ ಹರಿಬಿಡಲಾಗಿದೆ. ನಿರೀಕ್ಷಿತ ರೀತಿಯಲ್ಲಿಯೇ ಅದಕ್ಕೆ ನಮ್ಮ ಮಾಧ್ಯಮಗಳು ಹಾಗೂ ಒಂದು ಸಾಹಿತ್ಯಿಕ ವಲಯವು ಬಹು ಗಂಭೀರವಾದ ಪ್ರತಿಕ್ರಿಯೆ ನೀಡಿ ಅದನ್ನು ನಮ್ಮ ಚರ್ಚೆಗಳ ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿವೆ. ಈ ವಾದವೆಂದರೆ ನಮ್ಮ ವೈಚಾರಿಕ ವಲಯವು ಎಡ ಹಾಗೂ ಬಲ ಎನ್ನುವ ಎರಡು ಅತಿಶಯಗಳಲ್ಲಿ ಇಬ್ಭಾಗವಾಗಿ ಹೋಗಿದೆ. ಈ ಎರಡೂ ಪಕ್ಷದವರು ಸೈದ್ಧಾಂತಿಕವಾಗಿ ಎರಡು ವಿರುದ್ಧ ಅಲೆಗಳಿಗೆ ತಲುಪಿದ್ದಾರೆ. ಇದರಿಂದಾಗಿಯೇ ವಾದ ವಿವಾದಗಳು ಮಾತ್ರವಲ್ಲ, ಪ್ರಕ್ಷುಬ್ಧ ವಾತಾವರಣವು ಸೃಷ್ಟಿಯಾಗಿದೆ. ಒಬ್ಬ ವಿದ್ವಾಂಸರ ಪ್ರಕಾರ ಪ್ರೊ. ಎಂ.ಎಂ.ಕಲಬುರ್ಗಿಯವರ ಕೊಲೆಗೆ ಕೂಡ ಕಾರಣವಾಗಿದ್ದು ಅವರೂ ಒಂದು ಅತಿಯಾದ ನಿಲುವಿಗೆ ತಲುಪಿದ್ದರಿಂದ! ಇದೆಲ್ಲದಕ್ಕೆ ಪರಿಹಾರವೆಂದರೆ "ಮಧ್ಯಮ ಮಾರ್ಗ". ಅಂದರೆ ಎಡವೂ ಅಲ್ಲದ ಬಲವೂ ಅಲ್ಲದ "ವಿವೇಕ" ದ ಮಾರ್ಗವನ್ನು ಹುಡುಕುವುದು.

ಇಂಥ ವಾದವನ್ನು ಗಂಭೀರವಾಗಿ ತೆಗೆದುಕೊಳ್ಳಲಾಗುತ್ತಿದೆಯೆನ್ನುವುದು ಕನ್ನಡ ವೈಚಾರಿಕತೆಯು ತಲುಪಿದ ಅಧೋಗತಿಯ ಲಕ್ಷಣವೆಂದು ಭಾವಿಸುತ್ತೇನೆ. ಏಕೆಂದರೆ ಯಾವುದೇ ಅಲೆಗೆ ಹೋಗಬೇಡವೆನ್ನುವುದು ಒಂದು ಸಲಹೆಯೇ ಹೊರತು ತಾತ್ವಿಕ ವಾದವಾಗಲಾರದು. ಹೀಗಾಗಿ ಅದು ಚರ್ಚೆಗೂ ಯೋಗ್ಯವಲ್ಲ. ಆದರೆ ನಾನು ಅದನ್ನು ಚರ್ಚಿಸಲು ಕಾರಣವೆಂದರೆ ಇಂದಿನ ಸಂದರ್ಭದಲ್ಲಿ ಇಂಥ ವಾದವು ಯಥಾಸ್ಥಿತಿಯನ್ನು ಕಾಪಾಡಲು ಹಾಗೂ ಬಲಪಂಥೀಯ ಹಿಂಸೆಯನ್ನು ಪರೋಕ್ಷವಾಗಿ ಸಮರ್ಥಿಸಲು ಬೆಂಬಲವಾಗಬಹುದು. ಇಂಥ ವಾದವು ಹೊಸದಲ್ಲ. ಮನುಷ್ಯ ವಿರೋಧಿಯಾದ ಬಲಪಂಥೀಯ ರಾಜಕೀಯವು ಪ್ರಬಲವಾಗುತ್ತಿದ್ದಾಗಲೆಲ್ಲ ಅದು ಮುನ್ನೆಲೆಗೆ ಬರುತ್ತದೆ. ಅದರ ಮುಖ್ಯಗುರಿಯೆಂದರೆ ವಿಮರ್ಶೆ ಹಾಗೂ ಪ್ರತಿಭಟನೆಗಳನ್ನು ಹತ್ತಿಕ್ಕುವುದು. ಇದನ್ನು ನೇರವಾಗಿ ದಬ್ಬಾಳಿಕೆ ಹಾಗು ಹಿಂಸೆಯ ಮೂಲಕ ಮಾಡಬಹುದು. ಇತ್ತಿಚೆಗೆ ನಾವು ಕಂಡಿರುವ ಅಸಹಿಷ್ಣುತೆಯು ಇಂಥ ಕ್ರಮವಾಗಿದೆ.

ಈ ಅಸಹಿಷ್ಣುತೆಯು ಮುಗಿಯಿತೆನ್ನುವ ಭ್ರಮೆ ಬೇಡ. ಆರ್.ಎಸ್.ಎಸ್. ಮೂಲದ ಬಲಪಂಥೀಯ ತಾತ್ವಿಕತೆಯ ಆಧಾರವೇ ಅಸಹಿಷ್ಣುತೆ ಹಾಗೂ ದ್ವೇಷ. ಇವುಗಳ ಹೊರತಾಗಿ ಅದಕ್ಕೆ ಬೇರೆಯಾದ ವೈಚಾರಿಕತೆಯೇ ಇಲ್ಲ. ಇನ್ನು ವಿಮರ್ಶೆ ಹಾಗೂ ಪ್ರತಿಭಟನೆಗಳನ್ನು ಹತ್ತಿಕ್ಕಲು ಇರುವ ಪರೋಕ್ಷವಾದ ತಂತ್ರವೆಂದರೆ ಎಡಪಂಥೀಯ ಧೋರಣೆಗಳು ಅತಿಯಾದವುಗಳಾಗಿದ್ದರಿಂದ ಮಧ್ಯಮ ಮಾರ್ಗವು ಬೇಕೆನ್ನುವ ವಾದವನ್ನು ಹರಿಬಿಡುವುದು. ಈ ವಾದವು ಅಪ್ಪಟವಾದ, ಮಧ್ಯಮ ವರ್ಗಕ್ಕೆ ಕೊಡಲಾಗುವ ಅಫೀಮು. ಮೊದಲೇ ರಾಜಕೀಯ ಚಿಂತನೆ ಅಥವಾ ಕ್ರಿಯೆಯೆಂದರೆ ಅಸಡ್ಡೆ ತೋರಿಸಿ ದೂರವಿರುವ ಈ ವರ್ಗಕ್ಕೆ ಅದರ ನಿಷ್ಕ್ರಿಯತೆಗೆ ಒಂದು ಆಕರ್ಷಕವಾದ ನ್ಯಾಯಸಮರ್ಥನೆಯು ಈ ವಾದದಿಂದ ದೊರೆ-ಯುತ್ತದೆ. ಉದಾಹರಣೆಗೆ ಎಂ.ಎಂ. ಕಲಬುರ್ಗಿಯವರ ಕೊಲೆಯಾಗುತ್ತದೆ. ರಾಜಕೀಯವು ಆ ಕಡೆಗಿರಲಿ, ಯಾವ ನಾಗರೀಕ ಸಮಾಜವೂ ಮನುಷ್ಯ ವ್ಯಕ್ತಿಯ ಕೊಲೆಯನ್ನು ಒಪ್ಪಕೂಡದು. ಈ ಕೊಲೆಯ ಹಿಂದೆ ಬಲಪಂಥೀಯ ಸಂಸ್ಥೆಗಳು ಇರುವುದು ಖಚಿತವಾಗುತ್ತ ಬಂದಂತೆ ಮಧ್ಯಮ ಮಾರ್ಗದ ಹರಿಕಾರರು ಕಲಬುರ್ಗಿಯವರು ಬರೆದದ್ದು ಅತಿಯಾಗಿತ್ತು. ಹೀಗಾಗಿ ಅವರ ಕೊಲೆಯಾಯಿತು..., ಎನ್ನುವ ಧಾಟಿಯಲ್ಲಿ ಮಾತನಾಡುತ್ತಾರೆ. ಇದು ಪರೋಕ್ಷವಾಗಿ ಕೊಲೆಯ ಸಮರ್ಥನೆಯೆನ್ನುವುದು ಅವರಿಗೆ ಹೊಳೆಯುವುದಿಲ್ಲ.

ಹೋಗಲಿ, ನಿಮ್ಮದು ಅತಿಯಾಯಿತು ಎಂದು ಸನಾತನ ಸಂಸ್ಥೆಗೆ ಅವರು ಹೇಳುತ್ತಾರೆಯೆ? ಖಂಡಿತ ಇಲ್ಲ, ಏಕೆಂದರೆ ಆಳದಲ್ಲಿ ಆ ಸಂಸ್ಥೆಯ ತಾತ್ವಿಕತೆ-ಯ ಬಗ್ಗೆ ಇವರಿಗೆ ತಕರಾರಿಲ್ಲ. ಅದು ಹೇಗೆಂದರೆ "ಒಂದು ವೇಳೆ ನಿಮ್ಮ ಸಂಸ್ಥೆಯು ಈ ಕೊಲೆಗೆ ಕಾರಣವಾಗಿದ್ದರೆ ಅದನ್ನು ನಾವು ವಿರೋಧಿಸುತ್ತೇವೆ. ಅದು ಅತಿಯಾಯಿತು. ಆದರೆ ನಿಮ್ಮ ಸಿದ್ಧಾಂತಗಳ ಬಗ್ಗೆ ನಮಗೆ ತಕರಾರಿಲ್ಲ" ಎಂದು ಹೇಳಿದಂತೆ. ವಾಸ್ತವವೆಂದರೆ ಬಲಪಂಥೀಯ ಸಂಸ್ಥೆಗಳಿಗೆ ಒಂದು ಇತಿಹಾಸವಿದೆ. ಅದರ ತಾತ್ವಿಕತೆಯ(!) ಆ ಸಂಸ್ಥೆಗಳೇ ಪ್ರಕಟಿಸಿರುವ ಬರಹಗಳು ದಾಖಲೆಗಳು ಇವೆ. ಉದಾಹರಣೆಗೆ ಗೋಲವಲ್ಕರ್ ಅವರು ಹಿಟ್ಲರ್‌ನ ನಾಜಿ ಪಕ್ಷವೂ ಯಹೂದಿಗಳನ್ನು ಕೊಂದು ಜನಾಂಗೀಯ ಶುದ್ಧೀಕರಣವನ್ನು ಮಾಡಿದ್ದನ್ನು ನೇರವಾಗಿ ಸಮರ್ಥಿಸುತ್ತಾರೆ.

ಹಾಗಿದ್ದರೆ ನಾವು ಏನನ್ನು ವಿರೋದಿಸಬೇಕು? ಅಮೂಲಾಗ್ರವಾಗಿ ಇಂಥ ಚಿಂತನೆಯನ್ನೋ ಅಥವಾ ಅದರಿಂದಾಗಿ ಉಂಟಾಗುವ ಹಿಂಸೆಯ ಪ್ರಕರಣಗಳನ್ನು ಮಾತ್ರವೋ? ಗಾಂಧೀಜಿಯ ಕೊಲೆಗೂ ತನಗೂ ಸಂಬಂಧವಿಲ್ಲವೆನ್ನುವ ಆರ್. ಎಸ್.ಎಸ್. ಕೂಡ ಮಧ್ಯಮ ಮಾರ್ಗವನ್ನೇ ಬಳಸಿಕೊಳ್ಳುತ್ತದೆ. ಗೋಡ್ಸೆ ತಮ್ಮ ಸಂಸ್ಥೆಯನ್ನು ಆಗಲೇ ಬಿಟ್ಟಿದ್ದ. ಅವನು ಹಾಲಿ ಸದಸ್ಯನಾಗಿರಲಿಲ್ಲ. ಅವನದು ಅತಿಯಾಯಿತು. (ಆದರೆ ಗೋಡ್ಸೆಯನ್ನು ಹೀರೋ ಅನ್ನಾಗಿ ನೋಡುವ ತಮ್ಮ ಪರಿವಾರದ ಸಂಸ್ಥೆಗಳನ್ನು ನಿಷೇದಿಸಿ ಎಂದು ಅದು ಹೇಳುವುದಿಲ್ಲ). ಆದರೆ ಅವನ ಕೈಯಲ್ಲಿ ಪಿಸ್ತೂಲನ್ನು ಕೊಡದಿದ್ದರೆ ಏನಂತೆ, ಅವನ ಮಿದುಳಿಗೆ ಕೊಲೆಯ ಉದ್ದೇಶವನ್ನು ತಂದಿದ್ದು ಯಾವ ತಾತ್ವಿಕತೆಯೆನ್ನುವುದು ಸ್ಪಷ್ಟವಾಗಿಯೇ ಇದೆ. ಇಂಥ ತಾತ್ವಿಕತೆಯನ್ನು ಒಪ್ಪಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಯೂ ಗಾಂಧೀಜಿಯ ಕೊಲೆಯಲ್ಲಿ ನೈತಿಕವಾಗಿ ಸಹಭಾಗಿಯೇ ಆಗಿರುತ್ತಾನೆ.

ಅಷ್ಟಕ್ಕೂ ಈ ಮಧ್ಯಮ ವರ್ಗದ ನೀತಿ ಬೋಧನೆಯು ಬರುತ್ತಿರುವುದು ಯಾವ ವೈಚಾರಿಕ ವಲಯದಿಂದ? ಬಹುಕಾಲದವರೆಗೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಗಳ ಮೇಲೆ ತನ್ನ ಯಜಮಾನಿಕೆಯನ್ನು ಸಾಧಿಸಿಕೊಂಡು ಬಂದಿದ್ದ ಬ್ರಾಹ್ಮಣಶಾಹಿಗೆ ಬರಹಗಾರರ ಒಕ್ಕೂಟದ ಕಾಲದಿಂದ ಪ್ರಬಲವಾದ ಪೆಟ್ಟುಗಳು ಬೀಳುತ್ತವೇ ಬಂದಿವೆ. ದಲಿತ, ಬಂಡಾಯ ಚಳುವಳಿಗಳಿಂದ ಹಾಗೂ ಎಡಪಂಥೀಯ ಚಳುವಳಿಗಳಿಂದ ಕನ್ನಡ ಸಾಹಿತ್ಯದ ಕುಲಕರ್ಣಿಗಳು, ಅಮಲ್ದಾರ್‌ರು ತಮ್ಮ ಪಾರಂಪರಿಕ ಅಧಿಕಾರವನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಹೀಗಾಗಿ ಅವರು ಬಲಪಂಥೀಯ ಒಲವುಗಳ ಪರವಾಗುತ್ತ ಬಂದಿದ್ದಾರೆ. ಆದರೆ ಅವರು ಹೇಳಿ ಕೇಳಿ ಮಧ್ಯಮ ವರ್ಗದವರಾಗಿರುವುದರಿಂದ ನೇರವಾಗಿ ಬಲಪಂಥದ ಸಮರ್ಥನೆಗೆ ಇಳಿಯುವುದಿಲ್ಲ. ಬದಲಾಗಿ ಎಡಪಂಥವೆಂದರೆ ಸೈದ್ಧಾಂತಿಕ 'ಅಲೆ'ಯೆನ್ನುವ ವಾದವನ್ನು ಮಂಡಿಸುತ್ತಾರೆ. ಎಂದಿಗೂ ಕೂಡ ಜನಪರವಾದ ಚಳುವಳಿಗಳಲ್ಲಿ ಭಾಗವಹಿಸುವುದಿಲ್ಲ.

ಎಡಪಂಥೀಯ ಬರಹಗಾರರನ್ನು ಎದುರು ಹಾಕಿಕೊಳ್ಳುವುದಿಲ್ಲ. ಜಾಣತನದಿಂದ ಮಾಧ್ಯಮಗಳ ಮೂಲಕ, ಪ್ರಕಾಶನ ಸಂಸ್ಥೆಗಳ ಮೂಲಕ ಎರಡನೇ ದರ್ಜೆಯ ಬ್ರಾಹ್ಮಣ ಬರಹಗಾರರನ್ನು ಶ್ರೇಷ್ಠ ಬರಹಗಾರರೆಂದು ಸ್ಥಾಪಿಸುತ್ತಾರೆ. ಈಗಲೂ ಬಹುಪಾಲು ಪ್ರಶಸ್ತಿ, ಪುರಸ್ಕಾರಗಳನ್ನು ನಿರ್ಧರಿಸುವವರು ಈ ಬ್ರಾಹ್ಮಣಶಾಹಿಯ ಸದಸ್ಯರೆ. ಫರಕು ಇಷ್ಟೆ. ಇವರದು ಪೋಸ್ಟ್‌ಮಾಡರ್ನಿಸ್ಟ್ ಅಗ್ರಹಾರಗಳು. ಈಗ ಇವರ ನಿರೀಕ್ಷೆಯೂ ಮಿರಿದಂತೆ ಅಧಿಕಾರದಲ್ಲಿರುವ ರಾಜಕೀಯ ವ್ಯವಸ್ಥೆಯ ವಿರುದ್ಧ ಪ್ರಬಲವಾದ ಪ್ರತಿಭಟನೆಯು ಬರುತ್ತಿರುವುದರಿಂದ ಇವರು ಎಡವೂ ಬೇಡ ಬಲವೂ ಬೇಡ ಎನ್ನುವ ಜಾಣತನದ ವಾದದಿಂದ ದಾರಿ ತಪ್ಪಿಸುವ ಕೆಲಸವನ್ನು ನಿರ್ವಹಿಸುತ್ತಿದ್ದಾರೆ.

ಇಷ್ಟು ಸಾಲದು ಎಂಬಂತೆ ಬುದ್ಧನದೂ ಮಧ್ಯಮ ಮಾರ್ಗವೆಂದು ಅವನನ್ನು ತಮ್ಮ ಬ್ರಾಂಡ್ ಅಂಬಾಸಡರ್"ನನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ! ದೇವರು ಇಲ್ಲ; ಯಜ್ಞಮಾರ್ಗಗಳಿಂದ ಪ್ರಯೋಜನವೇ ಇಲ್ಲ. ಯಾವ ಬಗೆಯ ಅಸಮಾನತೆ, ಹಿಂಸೆಗಳನ್ನು ಒಪ್ಪಲಾಗದು. ಹೀಗೆ ಹೇಳಿದ ಬುದ್ಧನದು ಮಧ್ಯಮ ಮಾರ್ಗವೆಂದು ಹೇಳಿದರೆ ಗತಕಾಲದ ಬಲಪಂಥೀಯರ ಆತ್ಮಗಳು ವಿಲವಿಲ ಒದ್ದಾಡುತ್ತವೆ ಎನ್ನುವ ಎಚ್ಚರವಾದರೂ ಬೇಡವೆ?


ಪ್ರಿಯ ಓದುಗರೆ, ಮಧ್ಯಮಮಾರ್ಗವನ್ನು ನೀವು ಒಪ್ಪುವುದಾದರೆ ಹೀಗೆ ಮಾಡಿ: ಎಂ.ಎಂ. ಕಲಬುರ್ಗಿಯವರಂಥ 'ಅತಿಯಾದ" ವಿಚಾರವಾದಿಯೊಬ್ಬನನ್ನು ಕೈಯಲ್ಲಿ ಹರಿತವಾದ ಚಾಕುವಿನಿಂದ ಒಬ್ಬ 'ಅತಿಯಾದ' ಬಲಪಂಥೀಯನು ಕೊಲ್ಲಲು ಬಂದಿದ್ದಾನೆ ಎಂದುಕೊಳ್ಳಿ. ಆಗ ನೀವು ಏನು ಮಾಡಬೇಕು? ಅವನು ವಿಚಾರವಾದಿಯ ಎದೆಯಲ್ಲಿ ಈ ಚಾಕುವನ್ನು ಇರಿಯುತ್ತಿದ್ದಾಗ ನಿಲ್ಲಿಸಬೇಡಿ. ಅದು ಅತಿಯಾಗಿ ಒಳಗೆ ಹೋಗುವಾಗ ಮಾತ್ರ "ಸಾಕು ನಿಲ್ಲಿಸು, ಇದು ಅತಿಯಾಯಿತು" ಎಂದು ಮೃದುವಾಗಿ ಹೇಳಿ. ಅಕಸ್ಮಾತ್ ಅಷ್ಟರಲ್ಲಿ ವಿಚಾರವಾದಿಯ ಪ್ರಾಣ ಹೋದರೆ ಯೋಚಿಸಬೇಡಿ. ಅವನ ಅತಿಯಾದ ವಿಚಾರವಾದದಿಂದಲೇ ಹೀಗಾಯಿತು ಅಲ್ಲವೆ? ●

ಜೈಪುರ ಸಾಹಿತ್ಯೋತ್ಸವ: ಆರ್.ಎಸ್.ಎಸ್.ಉಪಸ್ಥಿತಿ – ಹಿಂದೆ ಸರಿದ ಕಾಂ.ಬೇಬಿ ಧರ್ಮಾಂಧರು ಮತಾಂಧರ ವಿರುದ್ಧ ಸೈದ್ಧಾಂತಿಕ ಸಮರ

ಸಂಘ ಪರಿವಾರದ ಇಬ್ಬರನ್ನು ಸಾಹಿತ್ಯೋತ್ಸವಕ್ಕೆ ಆಹ್ವಾನಿಸಿರುವುದನ್ನು ಪ್ರತಿಭಟಿಸಿ ಸಿಪಿಐ(ಎಂ) ಪೊಲಿಟ್ ಬ್ಯೂರೊ ಸದಸ್ಯ ಎಂ.ಎ.ಬೇಬಿ. ಭಾಗವಹಿಸಲು ನಿರಾಕರಿಸಿದ್ದಾರೆ.

"ಒಂದು ಪ್ರಜಾಪ್ರಭುತ್ವ ಸಮಾಜದಲ್ಲಿ, ವಿವಿಧ ನಿಲುವಿನ ಜನರೊಂದಿಗೆ ಸಂವಾದ ನಡೆಸಬೇಕೆಂಬ ಸಂಪೂರ್ಣ ಅರಿವು ನನಗಿದೆ. ಈ ಉತ್ಸವದ ಮತ್ತೊಂದು ಗೋಷ್ಠಿಯಲ್ಲಿ ಸೈದ್ಧಾಂತಿಕ ಕಟು ವಿರೋಧಿಗಳು ಪಾಲ್ಗೊಳ್ಳುತ್ತಿರುವುದರಿಂದ ತಾನು ಭಾಗವಹಿಸದಿರುವುದು ವೈಚಾರಿಕ ದೃಷ್ಟಿಯಿಂದ ಸರಿ೦ಯಲ್ಲ ಅನ್ನುವುದೂ ನನಗೆ ಗೊತ್ತು. ಆದರೆ ಇಲ್ಲಿ ಭಾಗವಹಿಸುತ್ತಿರುವವರು ಕೇವಲ 'ಮತ್ತೊಂದು' ಸಿದ್ಧಾಂತದವರಾಗಿರದೆ, ಹಿಂದೂ ರಾಷ್ಟ್ರವೆಂಬ ಧರ್ಮಾಧಾರಿತ ದೇಶ ನಿರ್ಮಾಣದ ಸಿದ್ಧಾಂತವದು. ಅದು 'ಇಸ್ಲಾಮಿಕ್ ರಾಷ್ಟ್ರ'ದ ರೀತಿಯದು ಮತ್ತು ಅದು ಈಗಾಗಲೇ ಪ್ರಜಾಪ್ರಭುತ್ವ ವಿನಾಶದ ಸ್ವಭಾವವನ್ನು ವ್ಯಕ್ತಮಾಡಿದೆ" ಎಂದು ಉತ್ಸವ ಸಂಘಟಕರಿಗೆ ಬರೆದ ಪತ್ರದಲ್ಲಿ ಬೇಬಿ ತಿಳಿಸಿದ್ದಾರೆ.

ಪ್ರಜಾಸತ್ತಾತ್ಮಕ, ಪ್ರಗತಿಪರ, ಜಾತ್ಯತೀತ ಹಾಗೂ ವೈಜ್ಞಾನಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಡಾ.ನರೇಂದ್ರ ದಭೋಲ್ಕರ್, ಗೋವಿಂದ ಪನ್ಸಾರೆ ಮತ್ತು ಡಾ.ಎಂ.ಎಂ.ಕಲ್ಬುರ್ಗಿ ಅವರ ಅಮಾನುಷ ಹತ್ಯೆಗಳನ್ನು ಸಂಘಟಕರಿಗೆ ನೆನಪು ಮಾಡಿಕೊಟ್ಟ ಬೇಬಿಯವರು, ಇನ್ನೂ ಅನೇಕರಿಗೆ ಇಂತಹದೇ ಬೆದರಿಕೆಗಳು ಬಂದಿವೆ ಅಂದರು. ತೀರ



ಇತ್ತೀಚಿನ 'ಕುತ್ಸಿತ ಹಾಗೂ ಅಪಾಯಕಾರಿ' ಉದಾಹರಣೆಯೆಂದರೆ, ವೈವಿಧ್ಯಮಯ ಸಾಂಸ್ಕೃತಿಕ ವ್ಯಕ್ತಿತ್ವ ಹೊಂದಿರುವ ಎಂ.ಟಿ.ವಾಸುದೇವನ್ ನಾಯರ್ ಅವರ ಮೇಲೆ ಮನಸ್ಸಿಗೆ ಬಂದ ಹಾಗೆ ಬೈಗುಳಗಳನ್ನು ಎರಚಿದ್ದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಮತ್ತು ಶ್ರೇಷ್ಠ ಚಿತ್ರ ನಿರ್ದೇಶಕರೂ ಆಗಿರುವ ವಾಸುದೇವನ್ ನಾಯರ್ ಮಾಡಿದ ದೊಡ್ಡ ಅಪರಾಧವೇನೆಂದರೆ, ಕೇಂದ್ರ ಸರ್ಕಾರದ ನೋಟು ಅಮಾನ್ಯೀಕರಣ ಟೀಕಿಸಿದ್ದು ಮತ್ತು ಸಾಮಾನ್ಯ ಜನ ಅನುಭವಿಸುತ್ತಿರುವ ಕಷ್ಟಕೋಟಲೆಗಳ ಬಗ್ಗೆ ಮಾತನಾಡಿದ್ದು.

"ಪ್ರಜಾಪ್ರಭುತ್ವ ನಾಡಿನಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ತನ್ನ ಕಷ್ಟಗಳನ್ನು ಹೇಳಿಕೊಳ್ಳುವ ಹಕ್ಕು ಇದೆ. ಅದನ್ನು ಒಪ್ಪಲು ಬಿಜೆಪಿ ಮತ್ತು ಸಂಘಪರಿವಾರದವರು ಸಿದ್ಧರಿಲ್ಲ. ಮಾತಿನಲ್ಲಿ ಮಾತ್ರವಲ್ಲ ಕೃತಿಯಲ್ಲಿಯೂ ಸಹ, ಧಾರ್ಮಿಕ ಮತ್ತು ಸೈದ್ಧಾಂತಿಕ ದ್ವೇಷ ಹಾಗೂ ಹಿಂಸೆಯನ್ನು ಬಿತ್ತುವ ಅಂಥವರ ಜತೆ ಉತ್ಸವದಲ್ಲಿ ಪಾಲ್ಗೊಳ್ಳುವುದು ಅನೈತಿಕ ಮತ್ತು ಸರಿಯಲ್ಲ' ಎಂದು ಬೇಬಿ ಸಂಘಟಕರಿಗೆ ಬರೆದು ತಿಳಿಸಿದ್ದಾರೆ.

(ಕೃಪೆ: ದಿ ಹಿಂದೂ ಜನವರಿ 18, 2017 ಪುಟ 8)

ಒಂದು ದೇಶ–ಒಂದೇ ಚುನಾವಣೆ

ಪ್ರಜಾಪ್ರಭುತ್ವ–ವಿರೋಧಿ ಧೋರಣೆ ಮತ್ತು ಸರ್ವಾಧಿಕಾರಶಾಹಿ ಪಥ್ಯ



ಪ್ರಜಾಸತ್ತಾತ್ಮಕ ತತ್ವಕ್ಕೆ ವಿರುದ್ಧವಾದ ಏಕರೂಪತೆಯನ್ನು ಹೇರುವುದು ಆರ್‌ಎಸ್‌ಎಸ್–ಬಿಜೆಪಿ ಕೂಟ ಬಯಸುವ ಆದರ್ಶ. "ಒಂದು ದೇಶ–ಒಂದೇ ಚುನಾವಣೆ" ಎಂಬ ಪರಿಕಲ್ಪನೆಯು, "ಒಂದು ರಾಷ್ಟ್ರ–ಒಂದೇ ಭಾಷೆ–ಒಂದೇ ಸಂಸ್ಕೃತಿ" ಘೋಷಣೆಗೆ ಸಮನಾದುದಾಗಿದೆ. ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ತತ್ವಗಳನ್ನು ಉಳಿಸಿಕೊಳ್ಳಬೇಕಾದರೆ ಇಂಥ ಸರ್ವಾಧಿಕಾರಶಾಹಿ ಪಥ್ಯಗಳನ್ನು ತಿರಸ್ಕರಿಸಬೇಕು.

ಪ್ರಕಾಶ್ ಕಾರಟ್

ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸಬೇಕೆಂಬ ಪ್ರಧಾನಿ ನರೇಂದ್ರ ಮೋದಿ ಪ್ರಸ್ತಾವ 'ಇನ್ನೊಂದು ಪಥಪ್ರದರ್ಶಕ ಉಪಕ್ರಮ' ಎಂದು ಕಳೆದ ವಾರ ಸಭೆ ಸೇರಿದ್ದ ಬಿಜೆಪಿ ರಾಷ್ಟ್ರೀಯ ಮಂಡಳಿ ವರ್ಣಿಸಿದೆ. ಇದು ಅಚ್ಚರಿಯ ಸಂಗತಿಯೇನೂ ಅಲ್ಲ. ಯಾಕೆಂದರೆ ಬಿಜೆಪಿ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಏಕ ಕಾಲದ ಚುನಾವಣೆಯ ಪ್ರಸ್ತಾವವನ್ನು ಮಂಡಿಸಿತ್ತು.

ಚುನಾವಣೆ ಸುಧಾರಣೆಗಳ ಕ್ರಮದ ಭಾಗವಾಗಿ ಮೋದಿ ಸದ್ಯ ಈ ಪ್ರಸ್ತಾವ ಮುಂದಿಟ್ಟಿದ್ದಾರೆ. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಈ ಯೋಚನೆಯನ್ನು ಅನುಮೋದಿಸಿದ್ದರು. ಚುನಾವಣೆಗಳಿಗಾಗಿ ಸರಕಾರದ ಬೊಕ್ಕಸದ ಮೇಲೆ ಬೀಳುವ ವೆಚ್ಚವನ್ನು ತಗ್ಗಿಸುವುದು, ಸತತ ಚುನಾವಣೆಗಳಿಂದಾಗಿ ತೊಂದರೆಗೊಳಗಾಗದಂತೆ ಉತ್ತಮ ಆಡಳಿತವನ್ನು ನೀಡುವುದು ಮತ್ತು ರಾಜಕೀಯ ವ್ಯವಸ್ಥೆಗೆ ಸ್ಥಿರತೆ ಒದಗಿಸುವುದು–ಇವೇ ಮೊದಲಾದ ಅಂಶಗಳನ್ನು ಈ ಪ್ರಸ್ತಾವನೆಗೆ ಸಮರ್ಥನೆಯಾಗಿ ನೀಡಲಾಗಿದೆ. ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳ ಜೊತೆಯಲ್ಲೇ ಪಂಚಾಯತ್ ಚುನಾವಣೆಗಳನ್ನು ಕೂಡ ನಡೆಸಬೇಕೆಂದು ಹೇಳುವವರೂ ಇದ್ದಾರೆ.

ಭಾರೀ ಸಂಖ್ಯೆಯ ಇಲೆಕ್ಟ್ರಾನಿಕ್ ಮತಯಂತ್ರಗಳ ಉತ್ಪಾದನೆ ಸಮಸ್ಯೆ ಮತ್ತು ಇಷ್ಟು ಬೃಹತ್ ಚುನಾವಣೆ ಪ್ರಕ್ರಿಯೆಗೆ ನೇಮಿಸಲು ಭದ್ರತಾ ಸಿಬ್ಬಂದಿಗಳ ಅಲಭ್ಯತೆ ಮೊದಲಾದ ತಾಂತ್ರಿಕ ಅಂಶಗಳ ಆಧಾರದಲ್ಲಿ ಏಕಕಾಲದ ಚುನಾವಣೆಗೆ ಕೆಲವರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ಈ ಕ್ರಮವು ಅಪ್ಪಟ ಪ್ರಜಾಪ್ರಭುತ್ವ–ವಿರೋಧಿಯಾದುದು ಹಾಗೂ ಪಕ್ಷ ಆಧಾರಿತ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅದು ನಾಶ ಮಾಡುತ್ತದೆ ಎನ್ನುವುದೇ ನಿಜವಾದ ಆಕ್ಷೇಪ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಅವಧಿಯನ್ನು ಐದು ವರ್ಷಗಳಿಗೆ ನಿಗದಿಪಡಿಸಿದರೆ ಮಾತ್ರವೇ ಏಕಕಾಲದ ಚುನಾವಣೆಗಳು ಸಾಧ್ಯ. ಅಂದರೆ ಶಾಸನಸಭೆಗಳನ್ನು ಮಧ್ಯದಲ್ಲಿ ವಿಸರ್ಜಿಸುವಂತಿಲ್ಲ. ಇದನ್ನು ಹೇಗೆ ಸಾಧಿಸಬಹದು?. ಒಂದು ವೇಳೆ ಒಂದು ಸರಕಾರ ಸದನದಲ್ಲಿ ಬಹುಮತವನ್ನು ಕಳೆದುಕೊಂಡರೆ ಸದನವನ್ನು ವಿಸರ್ಜಿಸದೆ ಜನಾದೇಶದ ಪರಿಗಣನೆಯಿಲ್ಲದೆ ಇನ್ನೊಂದು ಸರಕಾರ ರಚಿಸಲು ಸಾಂವಿಧಾನಿಕ ಅವಕಾಶವನ್ನು ಕಲ್ಪಿಸಬೇಕು. ಅಥವ, ಇನ್ನೂ ಕೆಟ್ಟ ಕ್ರಮವೆಂದರೆ, ಸಂಬಂಧಿಸಿದ ರಾಜ್ಯದಲ್ಲಿ ಐದು ವರ್ಷ ಅವಧಿ ಪೂರ್ಣಗೊಳ್ಳುವವರೆಗೆ ರಾಷ್ಟ್ರಪತಿ ಆಡಳಿತ ಹೇರಬೇಕು.

ರಾಜ್ಯ ಶಾಸನಸಭೆ ಮತ್ತು ಲೋಕಸಭೆಯ, ಅಥವಾ ಸರಕಾರದ ಅವಧಿಯನ್ನು ವಿಸ್ತರಿಸುವ ಈ ಬಗೆಯ ವಿಧಾನಗಳು ಪಕ್ಷ ಆಧರಿತ ಸಂಸದೀಯ ಪ್ರಜಾಪ್ರಭುತ್ವದ ಮೂಲ ತತ್ವಗಳನ್ನೇ ಮತ್ತು ಶಾಸಕಾಂಗಕ್ಕೆ ಕಾರ್ಯಾಂಗದ ಉತ್ತರದಾಯಿತ್ವದ ತತ್ವಗಳನ್ನೇ ದುರ್ಬಲಗೊಳಿಸುತ್ತವೆ.

ರಾಜ್ಯ ಶಾಸನಸಭೆಗಳು ಮತ್ತು ರಾಜ್ಯ ಸರಕಾರಗಳ ವಿಚಾರದಲ್ಲಿ ಹೇಳುವುದಾದರೆ, ಕೇಂದ್ರ ಸರಕಾರ ಜನರ ಪ್ರಜಾಸತ್ತಾತ್ಮಕ ತೀರ್ಪಿನಲ್ಲಿ ಹಸ್ತಕ್ಷೇಪ ನಡೆಸಲು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ಸ್ವೇಚ್ಛಾಧಿಕಾರ ಪಡೆಯುವಂತಾಗುತ್ತದೆ. ಹಾಗಾದಲ್ಲಿ ಒಕ್ಕೂಟ ಸ್ವರೂಪದ ತಳಪಾಯಕ್ಕೇ ಭಂಗ ಬರಲಿದೆ.

ಕೇಂದ್ರ ಮಟ್ಟದಲ್ಲಿ ಹೇಳುವುದಾದಲ್ಲಿ, ಅದು ಸಂಸತ್ತಿಗೆ ಕಾರ್ಯಾಂಗದ ಉತ್ತರದಾಯಿತ್ವವನ್ನು ಮತ್ತು ಜನತೆಯ ಬಗೆಗಿರುವ ಸಂಸತ್ತಿನ ಉತ್ತರದಾಯಿತ್ವವನ್ನು ಮೊಟಕುಗೊಳಿಸುತ್ತದೆ. ಒಂದು ವೇಳೆ ಪ್ರಧಾನಿಯೊಬ್ಬರು ಸದನದ ವಿಶ್ವಾಸವನ್ನು ಕಳೆದುಕೊಂಡರೆ ಮತ್ತು ಬಹುಮತ ಗಳಿಸಬಹುದಾದವರು ಬೇರಾರೂ ಇಲ್ಲದಿದ್ದರೆ, ಅಂಥ ಸಂದರ್ಭದಲ್ಲಿ ನಿಗದಿತ ಅವಧಿಯ ವಿಚಾರದಿಂದಾಗಿ ಚುನಾವಣೆಯಲ್ಲಿ ಜನಾದೇಶಕ್ಕೆ ಸಂಬಂಧವಿಲ್ಲದ ಒಂದು ಸಮ್ಮಿಶ್ರ ಸರಕಾರವನ್ನು ರಚಿಸಬೇಕಾಗುತ್ತದೆ. ಸದನದಲ್ಲಿ ಬಹುಮತ ಹೊಂದಿರುವ ಆಳುವ ಪಕ್ಷದ ನಾಯಕ ಲೋಕಸಭೆಯನ್ನು ವಿಸರ್ಜಿಸಲು ಶಿಫಾರಸು ಮಾಡುವಂತಿಲ್ಲ ಮತ್ತು ಹೊಸ ಜನಾದೇಶ ಕೇಳುವಂತಿಲ್ಲ.

1959ರಲ್ಲಿ ಸಂವಿಧಾನದ 356ನೇ ವಿಧಿಯನ್ನು ಬಳಸಿ ಕೇರಳದ ಪ್ರಥಮ ಕಮ್ಯೂನಿಸ್ಟ್ ಸರಕಾರವನ್ನು ವಜಾ ಮಾಡುವುದರೊಂದಿಗೆ ರಾಜ್ಯ ವಿಧಾನಸಭೆಗಳು ಮತ್ತು ಲೋಕಸಭೆಗೆ ಏಕಕಾಲದ ಚುನಾವಣೆಗಳನ್ನು ನಡೆಸುವುದಕ್ಕೆ ಅಸಾಂಗತ್ಯ ಆರಂಭವಾಯಿತು ಎನ್ನುವುದನ್ನು ಮರೆಯುವಂತಿಲ್ಲ. ಹಾಗಾಗಿ 1962ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳ ಜೊತೆಯಲ್ಲಿ ಕೇರಳ ವಿಧಾನ ಸಭೆಗೆ ಚುನಾವಣೆ ನಡೆಯಲಿಲ್ಲ. ಯಾಕೆಂದರೆ ವಿಧಾನಸಭಾ ಚುನಾವಣೆ 1960ರಲ್ಲೇ ನಡೆದಿತ್ತು. ಅಂದಿನಿಂದ, ಕೇಂದ್ರ ಸರಕಾರ ಪದೇ ಪದೇ 356ನೇ ವಿಧಿಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದರಿಂದ ವಿವಿಧ ರಾಜ್ಯ ವಿಧಾನ ಸಭೆಗಳು ಬೇರೆ ಬೇರೆ ಅಧಿಕಾರಾವಧಿ ಹೊಂದುವಂತಾಗಿದೆ.

356ನೇ ವಿಧಿ ಕಾನೂನು ಪುಸ್ತಕದಲ್ಲಿ ಉಳಿದಿರುವ ವರೆಗೂ, ನಿಗದಿತ ಅವಧಿಯನ್ನು ಕಾಯ್ದುಕೊಳ್ಳುವ ಮತ್ತು ಪರ್ಯಾಯ ಸರಕಾರವನ್ನು ರಚಿಸುವ ಹೆಸರಿನಲ್ಲಿ ಅದನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವ ಕೇಂದ್ರದ ಸಾಮರ್ಥ್ಯ ಹೆಚ್ಚಾಗುತ್ತದೆ. ಇನ್ನು ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದೆಂದರೆ ಈಗಾಗಲೇ ಅಸ್ತಿತ್ವದಲ್ಲಿರುವ ವಿಧಾನಸಭೆಗಳ ಅವಧಿಯನ್ನು ಕಡಿತಗೊಳಿಸುವುದೆಂದೇ ಆಗುತ್ತದೆ. ಇದು ತೀರಾ ಅಪ್ರಜಾಸತ್ತಾತ್ಮಕವಾದುದು.

ಭಾರತದಲ್ಲಿ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಗಳಲ್ಲಿ ಬಹಳಷ್ಟು ಭಿನ್ನತೆಗಳನ್ನು ಹೊಂದಿರುವ 29 ರಾಜ್ಯಗಳಿವೆ. ಒಂದು ಅಪ್ರಜಾಸತ್ತಾತ್ಮಕ ಏಕರೂಪತೆಯನ್ನು ಹೇರುವುದು ಆರ್‌ಎಸ್‌ಎಸ್–ಬಿಜೆಪಿ ಕೂಟ ಬಯಸುವ ಆದರ್ಶ. "ಒಂದು ದೇಶ–ಒಂದೇ ಚುನಾವಣೆ" ಎಂಬ ಪರಿಕಲ್ಪನೆಯು, "ಒಂದು ರಾಷ್ಟ್ರ–ಒಂದೇ ಭಾಷೆ–ಒಂದೇ ಸಂಸ್ಕೃತಿ" ಘೋಷಣೆಗೆ ಸಮನಾದುದಾಗಿದೆ. ಪ್ರಜಾಸತ್ತಾತ್ಮಕ ಮತ್ತು ಒಕ್ಕೂಟ ತತ್ವಗಳನ್ನು ಉಳಿಸಿಕೊಳ್ಳಬೇಕಾದರೆ ಇಂಥ ಸರ್ವಾಧಿಕಾರಶಾಹಿ ಪಥ್ಯಗಳನ್ನು ತಿರಸ್ಕರಿಸಬೇಕು.

ಅನು:ವಿಶ್ವ

> 1959ರಲ್ಲಿ ಸಂವಿಧಾನದ 356ನೇ ವಿಧಿಯನ್ನು ಬಳಸಿ ಕೇರಳದ ಪ್ರಥಮ ಕಮ್ಯೂನಿಸ್ಟ್ ಸರಕಾರವನ್ನು ವಜಾ ಮಾಡುವುದರೊಂದಿಗೆ ರಾಜ್ಯ ವಿಧಾನಸಭೆಗಳು ಮತ್ತು ಲೋಕಸಭೆಗೆ ಏಕಕಾಲದ ಚುನಾವಣೆಗಳನ್ನು ನಡೆಸುವುದಕ್ಕೆ ಅಸಾಂಗತ್ಯ ಆರಂಭವಾಯಿತು ಎನ್ನುವುದನ್ನು ಮರೆಯುವಂತಿಲ್ಲ. 356ನೇ ವಿಧಿ ಕಾನೂನು ಪುಸ್ತಕದಲ್ಲಿ ಉಳಿದಿರುವ ವರೆಗೂ, ನಿಗದಿತ ಅವಧಿಯನ್ನು ಕಾಯ್ದುಕೊಳ್ಳುವ ಮತ್ತು ಪರ್ಯಾಯ ಸರಕಾರವನ್ನು ರಚಿಸುವ ಹೆಸರಿನಲ್ಲಿ ಅದನ್ನು ಒಂದು ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುವ ಕೇಂದ್ರದ ಸಾಮರ್ಥ್ಯ ಹೆಚ್ಚಾಗುತ್ತದೆ. ಇನ್ನು ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದೆಂದರೆ ಈಗಾಗಲೇ ಅಸ್ತಿತ್ವದಲ್ಲಿರುವ ವಿಧಾನಸಭೆಗಳ ಅವಧಿಯನ್ನು ಕಡಿತಗೊಳಸುವುದೆಂದೇ ಆಗುತ್ತದೆ. ಇದು ತೀರಾ ಅಪ್ರಜಾಸತ್ತಾತ್ಮಕವಾದುದು.



ಗಾಂಧಿಯಾಗಿ ಮೋದಿ

ಪ್ರಕಾಶ್ ಕಾರಟ್

> ವಶಪಡಿಸಿಕೊಂಡ ನಂತರ ಸ್ಥಾನಚ್ಯುತಿ. ಕೆವಿಐಸಿ ಕ್ಯಾಲೆಂಡರ್ ಚಿತ್ರ ಒಂದು ಸಂದೇಶವನ್ನು ಕಣ್ಣಿಗೆ ಕಟ್ಟುವಂತೆ ನೀಡಿದೆ. ಗಾಂಧಿ ಕಾಲ ಸಂದಿತು, ಈಗ ಮೋದಿ ಹೊಸ ಪ್ರವಾದಿ. ... ನಾವು ಹರ್ಯಾಣದ ಆರೋಗ್ಯ ಮಂತ್ರಿ ಅನಿಲ್ ವಿಜ್‌ಗೆ ಕೃತಜ್ಞರಾಗಿರಬೇಕು.



ಆರೆಸ್ಸೆಸ್ ಮತ್ತು ಬಿಜೆಪಿ ಕೆಲವು ಸಮಯದಿಂದ ಗಾಂಧೀಜಿಯನ್ನು ಬಳಸಿಕೊಳ್ಳಲು ಪ್ರಯತ್ನ ನಡೆಸಿವೆ. ಮೊದಲು ಗಾಂಧೀಜಿ ಮತ್ತು ಅವರ ನಿಲುವುಗಳೆಲ್ಲವನ್ನೂ ಪೈಶಾಚಿಕ ಎಂದು ಚಿತ್ರಿಸಲಾಯಿತು. ಅದರ ಫಲಿತಾಂಶವಾಗಿ ಗೋಡ್ಸೆ ಸೋದರರು ಗಾಂಧೀಜಿಯ ಹತ್ಯೆಯ ನೀಚಕೃತ್ಯ ಎಸಗಿದರು. ಈಗ ಬಿಜೆಪಿ–ಆರೆಸ್ಸೆಸ್ ಗಾಂಧೀಜಿಯಿಂದ ಹಿಡಿದು ಬಿ ಆರ್ ಅಂಬೇಡ್ಕರ್ ವರೆಗೆ ಎಲ್ಲ ರಾಷ್ಟ್ರೀಯ ವ್ಯಕ್ತಿಗಳನ್ನೂ ವಶಪಡಿಸಿಕೊಳ್ಳಲು ಶ್ರಮಿಸುತ್ತಿವೆ.

ಈಗ ಅದರ ಮುಂದಿನ ಹೆಜ್ಜೆಯನ್ನು ಇಡಲಾಗಿದೆ. ವಶಪಡಿಸಿಕೊಂಡ ನಂತರ ಸ್ಥಾನಚ್ಯುತಿ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ(ಕೆವಿಐಸಿ) ಸ್ವದೇಶಿಬಟ್ಟೆಯ ಪರಮ ಪ್ರತಿಪಾದಕರಾಗಿದ್ದ ಗಾಂಧೀಜಿ ಚರಕದಿಂದ ನೂಲು ತೆಗೆಯುವ ಚಿರಪರಿಚಿತ ಚಿತ್ರದ ಬದಲು ಮೋದಿಯವರು ಚರಕದ ಮುಂದೆ ಕುಳಿತಿರುವ ಭಂಗಿಯ ಚಿತ್ರವನ್ನು ತನ್ನ ಈ ವರ್ಷದ ಕ್ಯಾಲೆಂಡರಿನಲ್ಲಿ ಪ್ರಕಟಿಸಿದೆ.

ಈ ಕ್ಯಾಲೆಂಡರ್ ಚಿತ್ರ ಒಂದು ಸಂದೇಶವನ್ನು ಕಣ್ಣಿಗೆ ಕಟ್ಟುವಂತೆ ನೀಡಿದೆ. ಗಾಂಧಿ ಕಾಲ ಸಂದಿತು, ಈಗ ಮೋದಿ ಹೊಸ ಪ್ರವಾದಿ. ಕೆವಿಐಸಿಯ ಈ ಕ್ಯಾಲೆಂಡರ್ ಕಲೆಗೆ ಬಂದಿರುವ ಪ್ರತಿಕ್ರಿಯೆಗಳು ಮತ್ತು ವ್ಯಕ್ತಪಟ್ಟಿರುವ ಆಕ್ರೋಶ ಅರ್ಥವಾಗುವಂತದ್ದೇ.



ವ್ಯಂಗ್ಯಚಿತ್ರ ಕೃಪೆ : ಸತೀಶ ಆಚಾರ್ಯ

ಈಗಾಗಲೇ ಮೋದಿಯವರು ಗಾಂಧೀಜಿಯ ನಂತರದ ಅತ್ಯಂತ ಮಹಾನ್ ಗುಜರಾತಿ ಎಂದು ಹಾಡಿಹೊಗಳಲಾಗುತ್ತಿದೆ. ಬಹುಶಃ ಈಗ ಗಾಂಧೀಜಿಯನ್ನು ಉನ್ನತ ಪೀಠದಿಂದ ಹೊರತಳ್ಳಿ ಆ ಜಾಗದಲ್ಲಿ ಮೋದಿಯವರನ್ನು ಕೂರಿಸುವ ಸಮಯ ಬಂದಿದೆ. ಆತ್ಮರತಿಯ ಮತ್ತು ಸರ್ವಾಧಿಕಾರಶಾಹಿ ವ್ಯಕ್ತಿತ್ವದ ಮೋದಿಯವರಿಗೆ ಈ ರೀತಿ ಮಹಾತ್ಮ ಗಾಂಧಿಯವರ ಪಾತ್ರವನ್ನು ಕಸಿದುಕೊಂಡಿರುವುದರಿಂದ ಒಳಗೊಳಗೇ ಬಹಳ ಸಂತೋಷವಾಗಿರಬೇಕು.

ಆದರೆ ಇದರಿಂದ ಹಿಂದುತ್ವವಾಲಾಗಳಿಗೇನೂ ಮುಜುಗರವಾಗಿಲ್ಲ. ನಾವು ಹರ್ಯಾಣದ ಆರೋಗ್ಯ ಮಂತ್ರಿ ಅನಿಲ್ ವಿಜ್‌ಗೆ ಕೃತಜ್ಞರಾಗಿರಬೇಕು. ಏಕೆಂದರೆ ಅವರು ಮೋದಿಯವರು ಗಾಂಧೀಜಿಗಿಂತ ಬಹುದೊಡ್ಡ 'ಬ್ರಾಂಡ್' ಎಂದು ಸಾರಿದ್ದಾರೆ. ಖಾದಿಯೊಂದಿಗೆ ಗಾಂಧೀಜಿಯ ಸಂಬಂಧದಿಂದಾಗಿ ಖಾದಿ ಉದ್ದಿಮೆ ಮುಳುಗಿದೆಯಂತೆ. ಅವರ ಪ್ರಕಾರ ರೂಪಾಯಿ ನೋಟುಗಳಲ್ಲಿ ಗಾಂಧೀಜಿಯ ಚಿತ್ರದಿಂದಾಗಿ ನಮ್ಮ ಕರೆನ್ಸಿ ಅಪಮೌಲ್ಯಗೊಳ್ಳುವಂತಾಗಿದೆ! ಅಂದರೆ 500 ಮತ್ತು 1000ರೂಪಾಯಿ ನೋಟುಗಳನ್ನು ಏಕೆ ರದ್ದು ಮಾಡಲಾಯಿತು ಎಂಬುದಕ್ಕೆ ನಿಜವಾದ ಕಾರಣ ನಮಗೆ ಇಲ್ಲಿ ಸಿಕ್ಕಂತಾಗಿದೆ!



ಕರ್ನಾಟಕದಲ್ಲಿ ಸಂಚಲನ ಮೂಡಿಸಿದ ದುಡಿಯುವ ಜನರ ಮಾಣಿಕ್ಯ

ತ್ರಿಪುರಾ ಮುಖ್ಯಮಂತ್ರಿ ಕಾ. ಮಾಣಿಕ್ ಸರ್ಕಾರ್ ಜನವರಿ 15ರಂದ 17ರವರೆಗೆ 3 ದಿನಗಳ ಕರ್ನಾಟಕಕ್ಕೆ ನೀಡಿದ ಭೇಟಿ ಚಾರಿತ್ರಿಕವಾಯಿತು. ನಾಲ್ಕು ಜಿಲ್ಲೆಗಳಿಗೆ ಭೇಟಿ ನೀಡಿ ನಾಲ್ಕು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಕಾ. ಸರ್ಕಾರ್ ಭೇಟಿ ಇಡೀ ಕರ್ನಾಟಕದಲ್ಲಿ ಸಂಚಲನ ಮೂಡಿಸಿತು. ಅವರ ಕರ್ನಾಟಕ ಭೇಟಿಗೆ ಪ್ರಮುಖ ಕಾರಣವಾದ್ದು ಕೂಡಲಸಂಗಮದ ಪಂಚಮಸಾಲಿ ಮಠ ಅವರಿಗೆ ನೀಡಿದ 2016–17 ಸಾಲಿನ 'ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ' ಸ್ವೀಕಾರ. ದುಡಿಯುವ ಜನರ ಮಾಣಿಕ್ಯ', 'ಭಾರತದ ಅತ್ಯಂತ ಬಡ ಮುಖ್ಯಮಂತ್ರಿ', 'ಸರಳ ಸಜ್ಜನ ಆದರ್ಶ ರಾಜಕಾರಣಿ' ಎಂದೆಲ್ಲಾ ಪ್ರಸಿದ್ಧರಾಗಿರುವ ಕಾ. ಸರ್ಕಾರ್ ಅವರು ಕರ್ನಾಟಕಕ್ಕೆ ಬರುತ್ತಿದ್ದಾರೆಂದು ತಿಳಿಯುತ್ತಲೇ ಕಾರ್ಯಕ್ರಮಗಳಿಗೆ ಹಲವು ಕೋರಿಕೆಗಳು ಬಂದವು. ಮೂರು ದಿನಗಳ ಭೇಟಿಯಲ್ಲಿ ಅವರು ಜನವರಿ 15 ರಂದು ಕೂಡಲಸಂಗಮದಲ್ಲಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು. ಜನವರಿ 16 ರಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಆಹ್ವಾನದ ಮೇರೆಗೆ ಅಲ್ಲಿ 'ತ್ರಿಪುರಾದ ರಾಜಕೀಯ ಆರ್ಥಿಕ' ಎನ್ನುವ ವಿಷಯದ ಮೇಲೆ ವಿಶೇಷ ಉಪನ್ಯಾಸ ಮಾಡಿದರು. ಅದೇ ಮಧ್ಯಾಹ್ನ ನೆರೆಯ ಕೊಪ್ಪಳ ಜಿಲ್ಲೆಯ ಸುಮಾರ 10 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದ ಗಂಗಾವತಿಯಲ್ಲಿ 'ಎಡ ಪರ್ಯಾಯ' ಸಮಾವೇಶದ ಉದ್ಘಾಟನೆ ಮಾಡಿದರು. ಜನವರಿ 17ರಂದು ಬೆಂಗಳೂರಿನಲ್ಲಿ ತುಂಬಿ ತುಳುಕುತ್ತಿದ್ದ ಶಿಕ್ಷಕರ ಸದನ ಸಭಾಂಗಣದಲ್ಲಿ ನಾಗರಿಕ ಅಭಿನಂದನೆ ಸ್ವೀಕರಿಸಿ ಮಾತನಾಡಿದರು. ಕರ್ನಾಟಕದಲ್ಲಿ ಸಂಚಲನ ಮೂಡಿಸಿದ ಕಾ. ಸರ್ಕಾರ್ ಅವರ ಕರ್ನಾಟಕ ಭೇಟಿಯ ಬಗ್ಗೆ ಒಂದು ಸಮಗ್ರ ವರದಿ.

ವಸಂತ್‌ರಾಜ್ ಎನ್.ಕೆ

ಕೂಡಲಸಂಗಮದಲ್ಲಿ ಬಸವ ಕೃಷಿ ಪ್ರಶಸ್ತಿ ಪ್ರದಾನ

"ದಟ್ಟದರಿದ್ರರ ಸೇವೆಯೇ ದೇವರ ಪೂಜೆ"

ಜನವರಿ 15ರಂದು ಬೆಳಿಗ್ಗೆ ಹೊಸಪೇಟೆ ರೈಲ್ವೇ ಸ್ಟೇಶನ್ ತಲುಪಿದ ಕಾ. ಮಾಣಿಕ್ ಸರ್ಕಾರ್ ಕೂಡಲಸಂಗಮದತ್ತ ಪ್ರಯಾಣ ಮಾಢಿದರು. ಕೂಡಲಸಂಗಮದಲ್ಲಿ ಅವರು ಬಸವ ಐಕ್ಯಸ್ಥಳಕ್ಕೆ ಭೇಟಿ ನೀಡಿದರು. ಆ ಮೇಲೆ ಅವರನ್ನು ರೈತ–ಕಾರ್ಮಿಕ ಸಮಾವೇಶ ಮತ್ತು 7ನೇ ಕೃಷಿ ಸಂಕ್ರಾಂತಿ ನಡೆಯುವ ಸ್ಥಳಕ್ಕೆ ತೆರೆದ ಎತ್ತಿನ ಬಂಡಿಯಲ್ಲಿ ಕರೆ ತರಲಾಯಿತು. ಅಷ್ಟು ಹೊತ್ತಿಗೆ ಮೂರು ಸಾವಿರಕ್ಕೂ ಹೆಚ್ಚು ಜನ ಅವರನ್ನು ನೋಡಲು ಕೇಳಲು ನೆರೆದಿದ್ದರು. ಸಮಾವೇಶವನ್ನು ಹೊಂಬಾಳೆಯನ್ನು ಅರಳಿಸುವ ಮೂಲಕ ಕಾ. ಸರ್ಕಾರ್ ಉದ್ಘಾಟಿಸಿದರು. ಅವರಿಗೆ ಪಂಚಮಸಾಲಿ ಲಿಂಗಾಯತ ಮಠದ ಜಯಮೃತ್ಯುಂಜಯ ಸ್ವಾಮಿ 2016–17 ಸಾಲಿನ 'ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿ' ಪ್ರಶಸ್ತಿ ಪ್ರದಾನ ಮಾಡಿದರು. ಇದಕ್ಕಿಂತ ಮೊದಲು ಕಾ, ಜಿ.ಎನ್. ನಾಗರಾಜ್ ಕಾ. ಮಾಣಿಕ್ ಸರ್ಕಾರ್ ಅವರ ಪರಿಚಯ ಮಾಡಿದರು. ಪ್ರಶಸ್ತಿಯ ಭಾಗವಾಗಿ ಅವರಿಗೆ ಬಸವಣ್ಣನವರ ಕಂಚಿನ ಪ್ರತಿಮೆ, ನೇಗಿಲು ಮತ್ತು ಒಂದು ಲಕ್ಷ ರೂ,.ನ ಚೆಕ್ ನೀಡಲಾಯಿತು. ಪ್ರಶಸ್ತಿ ಮೊತ್ತ 1 ಲಕ್ಷ ರೂ.ಗಳನ್ನು ಕಾ. ಸರ್ಕಾರ್ ಸಿಪಿಐ(ಎಂ) ಪಕ್ಷಕ್ಕೆ ಕೊಡುಗೆಯಾಗಿ ನೀಡಿದರು. ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ, ಕಾ.ಜಿ.ವಿ.ಶ್ರೀರಾಮರೆಡ್ಡಿ, ಲೇಖಕ ರಮಜಾನ್ ದರ್ಗಾ, ಸಿಪಿಐ ನಾಯಕ ಡಾ. ಸಿದ್ದನಗೌಡ ಪಾಟೀಲ, ಸಚಿವರುಗಳಾದ ಉಮಾಶ್ರೀ, ವಿನಯ್ ಕುಲಕರ್ಣಿ, ಶಾಸಕ ವಿಜಯ ಕಾಶಪ್ಪನವರ್ ಉಪಸ್ಥಿತರಿದ್ದರು. ರಮಜಾನ್ ದರ್ಗಾ ಅವರು ಬರೆದ ಶರಣರ ಚಳುವಳಿ ಬಗ್ಗೆ ಬರೆದ ಪುಸ್ತಕವನ್ನು ಕಾ. ಸರ್ಕಾರ್ ಬಿಡುಗಡೆ ಸಮಾವೇಶದಲ್ಲಿ ಮಾಡಿದರು

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಾ. ಸರ್ಕಾರ್ ಧರ್ಮದ ಪರಿಕಲ್ಪನೆ ಬಗ್ಗೆ ಬಸವಣ್ಣ ಮತ್ತು ವಿವೇಕಾನಂದರ ವಿಚಾರಗಳಲ್ಲಿ ಹೋಲಿಕೆಯಿದೆ ಎಂದರು. ದೇವರು ಗುಡಿಗಳಲ್ಲಿ ಇಲ್ಲ. ದೇವರನ್ನು ಹುಡುಕಿಕೊಂಡು ಗುಡಿಗಳಿಗೆ ಹೋಗಬೇಕಾಗಿಲ್ಲ, ಪೂಜೆ ಸಲ್ಲಿಸಬೇಕಾಗಿಲ್ಲ. ದೇವರು ಮನುಷ್ಯರಲ್ಲೇ ಇದ್ದಾನೆ. ದಟ್ಟದರಿದ್ರರ ಸೇವೆಯೇ ದೇವರ ಪೂಜೆ ಎಂದು ಇಬ್ಬರೂ ನಂಬಿದ್ದರು. ಪಂಚಮಸಾಲಿ ಮಠದ ಈಗಿನ ಸ್ವಾಮಿಜಿಗಳೂ ಅದನ್ನೇ ನಂಬಿದ್ದಾರೆ. ಆದ್ದರಿಂದ ಗ್ರಾಮೀಣ ಬದುಕಿನ ಆಧಾರವಾದ ಕೃಷಿಗೆ ಮತ್ತು ರೈತರ ಏಳಿಗೆ ಬಗ್ಗೆ ಕಾಳಜಿ ವಹಿಸುತ್ತಾರೆ. ಆ ಕಾಳಜಿಯಿಂದ ಗಮನಾರ್ಹ ಸಾಧನೆ ಮಾಡಿದವರನ್ನು ಸನ್ಮಾನಿಸುತ್ತಾರೆ. ನನ್ನ ಮಟ್ಟಿಗೆ ಹೇಳುವುದಾದರೆ ಮಾನವತೆಯೇ ನನ್ನ ಧರ್ಮ. ಇದನ್ನೇ ನನಗೆ ನನ್ನ ಪಕ್ಷ ಕಲಿಸಿದ್ದು. ಮಾನವತೆ ಇಲ್ಲದವರು, ಬಡವರ ಬಗ್ಗೆ ಕಾಳಜಿ ಇಲ್ಲದವರು ಕಮ್ಯುನಿಸ್ಟರು, ಸಮಾಜವಾದಿಗಳು ಆಗಲು ಸಾಧ್ಯವಿಲ್ಲ ಎಂದರು.

ಯಾವ ಧರ್ಮವೂ ಇನ್ನೊಂದು ಧರ್ಮದ ಅನುಯಾಯಿಗಳನ್ನು ದ್ವೇಷಿಸಲು ಕಲಿಸುವುದಿಲ್ಲ. ಹಿಂದೂ ಧರ್ಮವಂತೂ ಖಂಡಿತ ಕಲಿಸುವುದಿಲ್ಲ. ಆದರೆ ಕೆಲವರು ಮುಸ್ಲಿಮರು, ಕ್ರಿಶ್ಚಿಯನ್ನರು ಮುಂತಾದ ಇತರ ಧರ್ಮಗಳ ಅನುಯಾಯಿಗಳು ಹಿಂದೂ ಧರ್ಮಕ್ಕೆ 'ವಾಪಸು' ಬರಬೇಕು. "ಘರ್ ವಾಪಸಿ'ಗೆ ತಯಾರಿಲ್ಲದಿದ್ದರೆ ಅವರಿಗೆ ಭಾರತದಲ್ಲಿ ಜಾಗ ಇಲ್ಲ ಎಂದು ಹೇಳುತ್ತಾರೆ. ಧರ್ಮ ಖಾಸಗಿ ವಿಷಯ. ತಮಗೆ ಬೇಕಾದ ಧರ್ಮ ಅನುಸರಿಸುವ ಹಕ್ಕು ಎಲರಿಗೂ ಇದೆ. 17 ಕೋಟಿ ಮುಸ್ಲಿಮರು ಎಲ್ಲಿ ಹೋಗಬೇಕು? 17 ಕೋಟಿ ಜನಸಂಖ್ಯೆ ಇರುವ ದೇಶಗಳು ಬಹಳ ಇಲ್ಲ. 17 ಕೋಟಿ ಜನರಿಗೆ ಆಶ್ರಯ ಕೊಡಬಲ್ಲ ದೇಶವೂ ಇಲ್ಲ. ಇಂತಹ ಒತ್ತಾಯ, ಹೇಳಿಕೆಗಳನ್ನು ಬಿಜೆಪಿ ಪಕ್ಷದವರು ಮತ್ತು



ಸಂಘಪರಿವಾರದವರು ಆಗಾಗ ಕೊಡುತ್ತಿದ್ದರೂ, ಬೇರೆ ಎಲ್ಲಾ ವಿಷಯಗಳ ಬಗ್ಗೆ ಬೆಳಿಗ್ಗೆಯಿಂದ ಮಧ್ಯರಾತ್ರಿವರೆಗೆ ಮಾತನಾಡುವ, ಟ್ವೀಟ್ ಮಾಡುವ ನಮ್ಮ ಪ್ರಧಾನಿ ಈ ಬಗ್ಗೆ ಮೌನ ವಹಿಸುತ್ತಾರೆ.

ಕಳೆದ ಚುನಾವಣಾ ಸಮಯದಲ್ಲಿ ಕೊಟ್ಟ ವಾಗ್ದಾನಗಳನ್ನು ಪೂರೈಸದಿರುವ ಮೋದಿ ಸರಕಾರವನ್ನು ಟೀಕಿಸಿದ ಅವರು, ನೋಟು ನಿಷೇಧ ಮೊದಲು ಘೋಷಿಸಿದ ನಾಲ್ಕೂ ಉದ್ದೇಶಗಳನ್ನು ಪೂರೈಸುವುದರಲ್ಲಿ ವಿಫಲವಾಗಿದೆ. ಈಗ ಹೇಳುತ್ತಿರುವ ನಗದು–ರಹಿತ ಆರ್ಥಿಕ ಕಾರ್ಯಸಾಧ್ಯ ವ್ಯವಸ್ಥೆಯಲ್ಲ. ಅದು ಕಾರ್ಪೊರೆಟ್ ಗಳಿಗೆ ಮಾತ್ರ ಅನುಕೂಲಕರವಾಗಬಲ್ಲುದು ಎಂದರು.

ಅವರ ಭಾಷಣದ ನಂತರ ನಡೆದ ಸಂವಾದದಲ್ಲಿ ಮಹಿಳೆಯರಿಗೆ ತ್ರಿಪುರಾ ಸರಕಾರ ಏನು ಮಾಡಿದೆ ಎಂಬ ಪ್ರಶ್ನೆಗೆ ಚುಟುಕಾಗಿ ಉತ್ತರಿಸಿದರು. ಭೂಸುಧಾರಣೆ ಜಾರಿ ಮಾಡುವಾಗ ಪುರುಷ–ಮಹಿಳೆಯರಿಗೆ ಜಂಟಿ ಪಟ್ಟಾ ಕೊಟಲಾಗಿದೆ. ಬಿ.ಪಿ.ಎಲ್. ಕುಟುಂಬಗಳಿಗೆ ಎರಡು ಹೆಣ್ಣು ಮಕ್ಕಳವರೆಗೆ ಶಿಕ್ಷಣಕ್ಕೆ ಮಾಸಿಕ ನೆರವು ನೀಡಲಾಗುತ್ತದೆ. ಅದನ್ನೂ ತಾಯಿಯ ಬ್ಯಾಂಕ್ ಅಕೌಂಟಿಗೆ ನೀಡಲಾಗುತ್ತದೆ. ಮೂರು ಹಂತಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸದಸ್ಯ ಸ್ಥಾನಗಳಲ್ಲಿ ಶೇ. 50 ಮಹಿಳೆಯರಿಗೆ ಮೀಸಲಾಗಿಡಲಾಗಿದೆ. ಸ್ಥಳೀಯ ಸಂಸ್ಥೆಗಳ ಪದಾಧಿಕಾರಿ ಹುದ್ದೆಗಳಲ್ಲೂ ಶೆ. 50 ಮಹಿಳೆಯರಿಗೆ ಮೀಸಲಾಗಿಡಲಾಗಿದೆ ಎಂದರು. ●





ಬೆಂಗಳೂರಿನಲ್ಲಿ ನಾಗರಿಕ ಅಭಿನಂದನೆ

ಕರ್ನಾಟಕ ಭೇಟಿಯ ಕೊನೆಯ ಹಂತವಾಗಿ ಜನವರಿ 17ರಂದು ಬೆಂಗಳೂರಿನಲ್ಲಿ ಶಿಕ್ಷಕರ ಸದನದಲ್ಲಿ ಮಾಣಿಕ್ ಸರ್ಕಾರ್ ಅವರಿಗೆ ನಾಗರಿಕ ಅಭಿನಂದನಾ ಸಮಿತಿಯಿಂದ ನಾಗರಿಕ ಅಭಿನಂದನೆ ಇಟ್ಟುಕೊಳ್ಳಲಾಗಿತ್ತು. ಅಭಿನಂದನೆಗೆ ಉತ್ತರವಾಗಿ ಕಾ. ಮಾಣಿಕ್ ಸರ್ಕಾರ್ ಮಾಡಿದ ಭಾಷಣದ ಆಯ್ದ ಭಾಗಗಳು ಇಲ್ಲಿವೆ. ಪ್ರಧಾನಿ ಮೋದಿಯ "ಸಹಕಾರಿ ಒಕ್ಕೂಟತತ್ವ"ದ ಮತ್ತು ತ್ರಿಪುರಾದ ಪ್ರಗತಿಯ ಬಗ್ಗೆ ಅವರು ಮಾಡಿದ ಟಿಪ್ಪಣಿ ಹಾಗೂ ಅಭಿನಂದನೆಯಲ್ಲಿ ಪ್ರಮುಖರ ಹೇಳಿಕೆಗಳು ಬಾಕ್ಸಿನಲ್ಲಿವೆ.

(ಆಯ್ದ ಭಾಗಗಳ ಅನುವಾದ ಚೇತನಾ ತೀರ್ಥಹಳ್ಳಿ)



ಎಡ–ಪರ್ಯಾಯದಿಂದಷ್ಟೆ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯ: ಮಾಣಿಕ್ ಸರ್ಕಾರ್

ಭಾರತದ ಸ್ಥಿತಿ ಇಂದು ವಿಷಮ ಹಂತ ತಲುಪಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ನಡೆಸುತ್ತಿದ್ದಾಗಲೂ ಪರಿಸ್ಥಿತಿ ಉತ್ತಮವಾಗಿಯೇನೂ ಇರಲಿಲ್ಲ. ಆರ್ಥಿಕ ಪ್ರಗತಿ, ರೈತರ ಆತ್ಮಹತ್ಯೆ ತಡೆ, ನಿರುದ್ಯೋಗ ನಿವಾರಣೆ, ಜನರ ಜೀವನಮಟ್ಟದಲ್ಲಿ ಏರಿಕೆ? ಈ ಯಾವುದರ ಸುಳಿವೂ ಇಲ್ಲ. ಹಾಗಿದ್ದೂ 'ಅಚ್ಛೇ ದಿನಗಳು' ಬರಲಿವೆ ಎಂದು ಹೇಳಲಾಗುತ್ತಿದೆ. ಲೋಕಸಭೆ ಚುನಾವಣೆಗೆ ಮೊದಲು



ಬಿಜೆಪಿ ಈ ಎಲ್ಲವನ್ನು ಸಾಧಿಸುವುದಾಗಿ ಭರವಸೆ ನೀಡಿತ್ತು. ಆದರೆ ಆಗುತ್ತಿರುವುದೇನು? ದಿನಬಳಕೆಯ ವಸ್ತುಗಳ ಬೆಲೆ ಗಗನಕ್ಕೇರುತ್ತಲೇ ಸಾಗಿದೆ. ರುಪಾಯಿ ಮೌಲ್ಯ ಕುಸಿಯುತ್ತ ಹಣದುಬ್ಬರ ಪ್ರಮಾಣ ಹೆಚ್ಚಾಗಿದೆ.

ಈ ಮೂರು ವರ್ಷಗಳಲ್ಲಿ ಕೇವಲ ಒಂದು ಲಕ್ಷದ ಮೂವತ್ತು ಸಾವಿರದಷ್ಟು ಮಾತ್ರ ಉದ್ಯೋಗಸೃಷ್ಟಿಯಾಗಿದೆ. ಪ್ರತಿ ವರ್ಷ 18 ವರ್ಷ ಕಳೆದಿರುವಂಥ ಸುಮಾರು 1 ಕೋಟಿ 30 ಲಕ್ಷ ಜನ ಓದು ಮುಗಿಸಿ ಉದ್ಯೋಗ ಹುಡುಕಲು ಹೊರಡುತ್ತಾರೆ. ಹೀಗಿರುವಾಗ ಅದ–ಕ್ಕೆ ಪೂರಕವಾಗಿ ಉದ್ಯೋಗಸೃಷ್ಟಿ ಮಾಡುವ ಬಗ್ಗೆ ಕೇಂದ್ರ ಸರ್ಕಾರ ಗಮನ ಹರಿಸುತ್ತಿಲ್ಲ. ರೈತರ ಆತ್ಮಹತ್ಯೆ ಪ್ರಮಾಣವೂ ದೇಶಾದ್ಯಂತ ಗಂಭೀರವಾಗಿ ಬೆಳೆಯುತ್ತಿದೆ.

ಚುನಾವಣಾ ಸಂದರ್ಭದಲ್ಲಿ ಬಿಜೆಪಿ ರೈತರಿಗೆ ದೊಡ್ಡದೊಡ್ಡ ಭರವಸೆಗಳನ್ನು ನೀಡಿತ್ತು. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸ್ವಾಮಿನಾಥನ್ ಮಿಶನ್ ವರದಿಯಂತೆ ಬೆಳೆಗಳ ವೆಚ್ಚದ ಒಂದುವರೆ ಪಟ್ಟು ಬೆಂಬಲ ಬೆಲೆ ನಿಗದಿ ಮಾಡಲಾಗುವುದು. ರೈತರು ಆತ್ಮಹತ್ಯೆ ಮಾಡಿಕೊಳ್ಳದಂತೆ ತಡೆಯುತ್ತೇವೆಂದು ವಾಗ್ದಾನ ಮಾಡಿತ್ತು. ಆದರೆ ಈ ಅವಧಿಯಲ್ಲಿ ರೈತರ ಆತ್ಮಹತ್ಯೆ ಪ್ರಮಾಣ ಶೇ.34ರಷ್ಟು ಏರಿಕೆಯಾಗಿದೆ.

ಅಧಿಕಾರಕ್ಕೆ ಬಂದರೆ ವಿದೇಶಿ ಬ್ಯಾಂಕ್'ಗಳಿಂದ ಕಪ್ಪುಹಣವನ್ನು ತಂದು ಪ್ರತಿಯೊಬ್ಬ ಭಾರತೀಯನ ಖಾತೆಗೂ ತಲಾ 15 ಲಕ್ಷ ರುಪಾಯಿ ಜಮಾ ಮಾಡುವುದಾಗಿ ಬಿಜೆಪಿ ಹೇಳಿಕೊಂಡಿತ್ತು. ಈ ಕೆಲಸವನ್ನು ತಾನು ಅಧಿಕಾರಕ್ಕೆ ಬಂದ ನೂರು ದಿನಗಳ ಒಳಗಾಗಿ ಮಾಡುವೆನೆಂದು ಭರವಸೆ ನೀಡಿತ್ತು. ಆದರೆ ನೂರು ದಿನಗಳು ಯಾವಾಗಲೋ ಕಳೆದು ಇದೀಗ 900 ದಿನಗಳೂ ಮುಗಿಯತೊಡಗಿವೆ. ಪ್ರಧಾನ ಮಂತ್ರಿಗಳು ಕಪ್ಪು ಹಣ ತರುವುದಿರಲಿ, ವಿದೇಶಿ ಬ್ಯಾಂಕ್'ಗಳಲ್ಲಿ ಹಣ ಇರಿಸಿದವರ ಪಟ್ಟಿನೀಡಲಿಕ್ಕೇ ಹೆದರುತ್ತಿದ್ದಾರೆ.

ಕೇಂದ್ರ ಸರ್ಕಾರದ ಈ ವೈಫಲ್ಯಗಳನ್ನು ಪ್ರಶ್ನಿಸಬೇಕಾದವರು ಯಾರು? ಕಾಂಗ್ರೆಸ್'ನ ಮುಂಚೂಣಿಯ ನಾಯಕ ರಾಹುಲ್ ಗಾಂಧಿ ಮೌನವಾಗಿದ್ದಾರೆ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಪ್ರಶ್ನಿಸಲೆಂದು ನಿರೀಕ್ಷಿಸಿ ಫಲವಿಲ್ಲ. ಏಕೆಂದರೆ ಎಲ್ಲೆಲ್ಲಿ ಜನತೆ ತೀವ್ರ ಸಂಕಷ್ಟ ಅನುಭವಿಸ್ತಿದ್ದಾರೋ ಆ ರಾಜ್ಯಗಳಲ್ಲಿ ಬಿಜೆಪಿ ಸರ್ಕಾರವೇ ಆಡಳಿತ ನಡೆಸುತ್ತಿದೆ. ಅವರಿಗೆ ತಮ್ಮ ನಾಯಕನನ್ನು ಪ್ರಶ್ನಿಸುವ ಧೈರ್ಯವಿಲ್ಲ. ಈ ಸರ್ಕಾರಗಳು ದೊಡ್ಡ ಉದ್ದಿಮೆದಾರರು ಬಾಕಿ ಇರಿಸಿಕೊಂಡಿರುವ ಸಾಲ ಮರಳಿಸುವಂತೆ ಕೇಳಲಿಕ್ಕೂ ಹೆದರುತ್ತವೆ. ದೇಶದಲ್ಲಿ ಸಾರ್ವಜನಿಕರು ಹಣ ಇರಿಸಿರುವ ಬ್ಯಾಂಕ್'ಗಳಿಂದ ದೊಡ್ಡ ದೊಡ್ಡ ಕಂಪನಿಗಳು ಭಾರೀ ಪ್ರಮಾಣದ ಸಾಲ ಪಡೆದುಕೊಂಡಿವೆ. ಅವು ಮರಳಿ ಬರದ ಸಾಲವೆಂದು ಬ್ಯಾಂಕ್'ಗಳೂ ಕೈಚೆಲ್ಲಿ ಕುಳಿತಿವೆ. ಈ ಉದ್ದಿಮೆದಾರರು ಇಲ್ಲಿಯ ಹಣವನ್ನು ವಿದೇಶೀ ಬ್ಯಾಂಕ್'ಗಳಲ್ಲಿ ಭದ್ರವಾಗಿಡುತ್ತಿದ್ದಾರೆ. ಅದನ್ನು ಮರಳಿ ತರಿಸುವ ಶಕ್ತಿ ಕೇಂದ್ರ ಸರ್ಕಾರಕ್ಕೆ ಇಲ್ಲವಾಗಿದೆ. ಬಡಜನರು. ರೈತರು 5 – 10 ಸಾವಿರ ರುಪಾಯಿ ಸಾಲ ಪಡೆದು ಮರಳಿಸಲು ವಿಫಲರಾದರೆ ಅವರ ಮನೆ? ಜಮೀನುಗಳನ್ನು ಜಪ್ತಿ ಮಾಡಲಾಗುತ್ತದೆ. ಅವರನ್ನು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಲೂ ಹಿಂದೆಮುಂದೆ ನೋಡುವುದಿಲ್ಲ. ಆದರೆ ಕಾರ್ಪೊರೇಟ್ ದೈತ್ಯರು ಪಡೆದ ಸಾಲ ಮರುಪಾವತಿಯ ಬಗ್ಗೆ ಸರ್ಕಾರಗಳಾಗಲೀ ಅಧಿಕಾರಿಗಳಿಗಾಗಲೀ ತಲೆ ಕೆಡಿಸಿಕೊಳ್ಳುವುದಿಲ್ಲ. ಇದು ನಮ್ಮ ದೇಶದ ಪರಿಸ್ಥಿತಿ.

ನಮ್ಮ ದೇಶದಲ್ಲಿ ಇಂದು ಸಂಘರ್ಷದ ವಾತಾವರಣ ನಿರ್ಮಾಣಗೊಂಡಿದೆ. ವಿದ್ಯಾರ್ಥಿಗಳು ಸಂಘರ್ಷ ನಡೆಸುತ್ತಿದ್ದಾರೆ. ರೈತರು ಸಂಘರ್ಷ ನಡೆಸುತ್ತಿದ್ದಾರೆ. ಕಾರ್ಮಿಕರು, ಶಿಕ್ಷಕರು ಎಲ್ಲರೂ ಸಂಘರ್ಷದಲ್ಲಿದ್ದಾರೆ. ಆದರೆ ಸರ್ಕಾರಕ್ಕೆ ಅವರ ದನಿ ಕೇಳಲು ಸಮಯವಿಲ್ಲವಾಗಿದೆ. ಭಾರತವನ್ನು ಆಳುತ್ತಿರುವ ಈ ಸರ್ಕಾರ ಜನವಿರೋಧಿ ಸರ್ಕಾರ. ಇದು ಬಡವರನ್ನು ತಿರಸ್ಕಾರದಿಂದ ಕಾಣುತ್ತಿದೆ.

ಇಂಡಿಯಾದಲ್ಲಿ ಶೇ.70ರಷ್ಟು ಜನರು ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಅವರಲ್ಲಿ ಬಹುತೇಕರು ಬಡಜನರು. ಇಂಡಿಯಾದ ಹಳ್ಳಿಗಳು ಸ್ವಾತಂತ್ರ್ಯ ಪಡೆದ ಇಷ್ಟು ದಶಕಗಳ ನಂತರವೂ ಮೂಲಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿದೆ. ನೀರು, ದಾರಿ, ನೀರಾವರಿ, ಶಾಲೆ, ಆಸ್ಪತ್ರೆ, ಮಾರುಕಟ್ಟೆ ಮೊದಲಾದ ಸೌಲಭ್ಯಗಳಿಲ್ಲದ ಹಳ್ಳಿಗರ ಜೀವನ ಮಟ್ಟ ಕುಸಿಯುತ್ತಲೇ ಸಾಗಿದೆ. ಎಷ್ಟೋ ಜನ ಸೂರಿಲ್ಲದೆ ಬದುಕುತ್ತಿದ್ದಾರೆ. ಮತ್ತೆಷ್ಟೋ ಜನ ಆರೋಗ್ಯದ ಕನಿಷ್ಠ ಕಾಳಜಿಗೂ ಹಣವಿಲ್ಲದೆ ಪರದಾಡುತ್ತಿದ್ದಾರೆ.

> **ಇಂಡಿಯಾದ ಇಂದಿನ ಎಲ್ಲ ಸಮಸ್ಯೆಗೂ ಇರುವ ಪರಿಹಾರವೆಂದರೆ, ಅದು ಪ್ರಜಾಪ್ರಭುತ್ವದ ಸಮರ್ಥ ಅನ್ವಯ. ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಅತ್ಯಂತ ಸಮರ್ಥವಾಗಿ ಅನ್ವಯಗೊಂಡಿದೆ. ವರ್ಗ? ಸಮೂಹಗಳ ಐಕ್ಯ ಸಂಘರ್ಷದಿಂದ ಮಾತ್ರವೇ ಪ್ರಜಾಪ್ರಭುತ್ವವನ್ನು ನಿಜಾರ್ಥದಲ್ಲಿ ಜಾರಿಗೊಳಿಸಲು ಸಾಧ್ಯ. ಪ್ರಜಾಪ್ರಭುತ್ವ ನಾಶವಾದರೆ ಈ ದೇಶವೂ ಉಳಿಯುವುದಿಲ್ಲ. ರೈತ, ಕಾರ್ಮಿಕ, ದುಡಿಯುವ ವರ್ಗಗಳು ಒಗ್ಗೂಡಿ ಹೋರಾಟಕ್ಕಿಳಿಯದೆ ಹೋದರೆ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುವುದು ಕಷ್ಟ. ಈ ನಿಟ್ಟಿನಲ್ಲಿ ಎಡ ಪಕ್ಷಗಳು ಐಕ್ಯಸಂಘರ್ಷಕ್ಕೆ ಮುಂದಾಗಬೇಕಿದೆ.**

ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಜನರ ಕೊಳ್ಳುವ ಸಾಮರ್ಥ್ಯ ಹೆಚ್ಚುವಂತೆ ಯೋಜನೆಗಳನ್ನು ರೂಪಿಸಬೇಕಿತ್ತು. ಅದಕ್ಕೆ ವ್ಯತಿರಿಕ್ತವಾಗಿ ಜನರ ಸಾಮರ್ಥ್ಯವನ್ನು ಕತ್ತರಿಸುವ ಕೆಲಸವನ್ನದು ಮಾಡುತ್ತಿದೆ. ಬಜೆಟ್'ನಲ್ಲಿ ನೀರಾವರಿ, ಕೃಷಿ ಅಭಿವೃದ್ಧಿ, ಆರೋಗ್ಯ ಮೊದಲಾದ ಸೌಲಭ್ಯಗಳಿಗೆ ನೀಡಲಾಗುತ್ತಿದ್ದ ಹಣದ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಸೇವಾಕ್ಷೇತ್ರಗಳ ಖಾಸಗೀಕರಣಕ್ಕೆ ಇಂಬುಕೊಡುವ ಮೂಲಕ ಕೆಳವರ್ಗಗಳ ಜನರಿಗೆ ಕೆಲವು ಸೌಲಭ್ಯಗಳು ಕೈಗೆಟುಕದಂತೆ

ಪುಟ 10 ಕ್ಕೆ



"ಮಾಣಿಕ್ ಸರ್ಕಾರ್ : ಆದರ್ಶ ರಾಜಕಾರಣದ ಕನಸಿನ ಸಾಕಾರಮೂರ್ತಿ"

(ಪ್ರಮುಖರ ಅಭಿನಂದನೆ– ಮೆಚ್ಚಿಗೆ)

ನಾಗರಿಕ ಅಭಿನಂದನೆ ಸಭೆಯಲ್ಲಿ ಪ್ರಸಿದ್ಧ ಸಿನಿಮಾ–ನಾಟಕ ನಿರ್ದೇಶಕ ಎಂ.ಎಸ್.ಸತ್ಯು, ವಿಶ್ರಾಂತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಗೋಪಾಲಗೌಡ ಮತ್ತು ಲೇಖಕಿ ಡಾ. ಎನ್. ಗಾಯತ್ರಿ ಅವರನ್ನು ಅಭಿನಂದನಾ ಸಮಿತಿ ಪರವಾಗಿ ಸನ್ಮಾನಿಸಿದರು. ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ಹಿರಿಯ ಚಿಂತಕ ಡಾ. ಕೆ.ಎಂ.ಮರುಳಸಿದ್ದಪ್ಪ, ಹಿರಿಯ ಚಿಂತಕ ಡಾ. ಜಿ. ರಾಮಕೃಷ್ಣ, ಸಿಪಿಐ ಕೇಂದ್ರ ಮಂಡಳಿ ಸದಸ್ಯ ಡಾ. ಸಿದ್ದನಗೌಡ ಪಾಟೀಲ್, ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ. ಕೆ.ಎನ್.ಉಮೇಶ್ ವೇದಿಕೆಯ ಮೇಲಿದ್ದರು. ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಸದಸ್ಯೆ ಕಾ. ಗೌರಮ್ಮ ಸ್ವಾಗತಿಸಿದರು. . ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಸದಸ್ಯ ಕಾ. ಕೆ. ಪ್ರಕಾಶ್ ಪ್ರಸ್ತಾವನೆ ಮಾಡಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾ. ಮೀನಾಕ್ಷಿ ಸುಂದರಂ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಅಧ್ಯಕ್ಷತೆ ವಹಿಸಿದ್ದರು.



ಕರ್ನಾಟಕದಲ್ಲಿ ಕಳೆದ ಹಲವು ದಶಕಗಳಲ್ಲಿ ಹಲವಾರು ಬಸವ ಪ್ರಶಸ್ತಿಗಳನ್ನು ಹಲವರಿಗೆ ಕೊಡಲಾಗಿದೆ. ಆದರೆ ಬಹುಶಃ ಇದು ಮೊದಲ ಬಾರಿಗೆ ನಿಜವಾಗಿಯೂ ಅರ್ಹನಾದ ವ್ಯಕ್ತಿಗೆ ಬಸವ ಪ್ರಶಸ್ತಿ ಕೊಡಲಾಗಿದೆ ಅಂತ ಕಾಣ್ತದೆ. ಪ್ರಜಾಪ್ರಭುತ್ವದ ಬಗೆಗೆ ಹಿಂಜರಿಕೆ ಅನುಮಾನಗಳು ಮೂಡುತ್ತಿರುವ ಈ ಹೊತ್ತಿನಲ್ಲಿ ಆದರ್ಶ ರಾಜಕಾರಣದ ಕನಸಿನ ಸಾಕಾರಮೂರ್ತಿ ಆಗಿದ್ದಾರೆ ಮಾಣಿಕ್ ಸರ್ಕಾರ್.

–ಡಾ. ಕೆ. ಮರುಳಸಿದ್ದಪ್ಪ



ಕಮ್ಯುನಿಸ್ಟರ ಆಡಳಿತ ಸ್ವಭಾವತಃ ಭ್ರಷ್ಟಾಚಾರ–ರಹಿತ ಉತ್ತಮ ಆಡಳಿತ ಎಂಬುದು ಮೊದಲ ಕಮ್ಯುನಿಸ್ಟ್ ಮುಖ್ಯಮಂತ್ರಿ ಇ.ಎಂ.ಎಸ್.ನಂಬೂದಿರಿಪಾದ್ ಕಾಲದಿಂದಲೇ ಸಿದ್ಧ್ವಾಗಿದೆ. ಅದೇ ಮಾದರಿಯನ್ನು ಜ್ಯೋತಿ ಬಸು ಮಯಂದುವರೆಸಿದರು. ಅದೇ ಸಂಪ್ರದಾಯವನ್ನು ಮಾಣಿಕ್ ಸರ್ಕಾರ್ ಮುಂದುವರೆಸಿದ್ದಾರೆ. ನಮ್ಮ ಮುಖ್ಯಮಂತ್ರಿ ಏಕೆ, ಮಂತ್ರಿಗಳನ್ನು ಭೇಟಿ ಮಾಡುವುದು ಕಷ್ಟ. ಅವರ ಮನೆ ಇರುವ ಬೀದಿಯಲ್ಲಿ ಓಡಾಡುವುದೇ ಕಷ್ಟ. ಆದರೆ ನಾನು ಅಗರ್ತಲಾಕ್ಕೆ ಬಿ.ಸುರೇಶ ಅವರ 'ಗಿರಿಜಾ ಕಲ್ಯಾಣ' ನಾಟಕದ ಹಿಂದಿ ಆವೃತ್ತಿ ಪ್ರದರ್ಶನಕ್ಕೆ ಹೋಗಿದ್ದಾಗ ಬೇಟಿ ಆಗಿದ್ದೆ. ಅವರು ನಾಟಕಕ್ಕೆ ಬಂದಿದ್ದರು. ನಾಟಕ ಅರ್ಥ ಮಾಡಿಕೊಂಡು ಅದರ ಬಗ್ಗೆ ಮಾತನಾಡಿದರೂ ಕೂಡಾ.

– ಎಂ.ಎಸ್. ಸತ್ಯು



ಭ್ರಷ್ಟರೇ ಭ್ರಷ್ಟಾಚಾರದ ವಿರುದ್ಧ, ದೇಶದ್ರೋಹಿಗಳೇ ದೇಶದ್ರೋಹದ ವಿರುದ್ಧ ಹೋರಾಟ ನಡೆಸುವ ಪ್ರಹಸನದ ರಾಜಕಾರಣದ ವಿಷಮ ಸಂಧರ್ಭದಲ್ಲಿ ಪರ್ಯಾಯ ರಾಜಕಾರಣದ ಮಾದರಿಯಾಗಿ ಮಾಣಿಕ್ ಸರ್ಕಾರ್ ನಮಗೆ ಬೇಕಾಗಿದೆ.

–ಡಾ. ಜಿ.ರಾಮಕೃಷ್ಣ



"ಮಾಣಿಕ್ ಸರ್ಕಾರ್ ಅವರ ಭೇಟಿ ಹಲವರಿಗೆ ಖುಷಿ ಕೊಟ್ಟರೆ, ಕೆಲವರಿಗೆ ನಾಚಿಕೆ ತಂದಿದೆ. ನಿಮ್ಮಂಗೆ ರಾಜಕಾರಣದಲ್ಲಿ ಪ್ರಾಮಾಣಿಕವಾಗಿ ಇರುವುದು ಕಷ್ಟ ಎಂದು ಕೆಲವು ರಾಜಕಾರಣಿಗಳು ಸಾರ್ವಜನಿಕವಾಗಿಯೇ ಹೇಳಿದರು. ಭ್ರಷ್ಟರಿಗೆ ನಾಚಿಕೆ ಆಗುವುದು ಪಾಸಿಟಿವ್ ಬೆಳವಣಿಗೆ"

– ಡಾ. ಸಿದ್ದನಗೌಡ ಪಾಟೀಲ್

ಬೆಂಗಳೂರಿನಲ್ಲಿ ನಾಗರಿಕ ಅಭಿನಂದನೆ........ ಪುಟ 9 ರಿಂದ

ಮಾಡಲಾಗುತ್ತಿದೆ.

ಸರ್ಕಾರದ ಕಾರ್ಮಿಕ ವಿರೋಧಿ? ಜನವಿರೋಧಿ ನೀತಿಗಳನ್ನು ವಿರೋಧಿಸಿ 2015 ಮತ್ತು 16ರ ಸೆಪ್ಟೆಂಬರ್ ತಿಂಗಳಿನಲ್ಲಿ 2 ಬೃಹತ್ ಪ್ರತಿಭಟನೆಗಳು ನಡೆದವು. ಕಳೆದ ವರ್ಷದ ಪ್ರತಿಭಟನೆಯಲ್ಲಿ ಸುಮಾರು 17 ಕೋಟಿ ಕಾರ್ಮಿಕರು ಭಾಗವಹಿಸಿದ್ದರು. ಇದು ಎಷ್ಟು ದೊಡ್ಡ ಪ್ರತಿಭಟನೆಯಾಗಿತ್ತು ಎಂದು, ಇಷ್ಟು ಜನಸಂಖ್ಯೆ ಇರುವ ದೇಶಗಳೇ ಬೆರಳೆಣಿಕೆಯಷ್ಟು ಇವೆ ಎಂದು ನೆನೆಸಿಕೊಂಡರೆ ತಿಳಿಯುತ್ತದೆ. ಕಳೆದ 50 ವರ್ಷಗಳಲ್ಲಿ ಇಂಥದೊಂದು ಬೃಹತ್ ಪ್ರತಿಭಟನೆ ನಡೆದ ದಾಖಲೆಗಳೇ ಇಲ್ಲ. ಇದು ಜಗತ್ತಿನಲೇ ಬಹಳ ದೊಡ್ಡ ಪ್ರತಿಭಟನೆಯಾಗಿತ್ತು. ಆದರೆ ದುಡಿಯುವ ಜನರ ಈ ಹೋರಾಟ ಇಂಡಿಯಾದ ಮಾಧ್ಯಮಗಳಿಗೆ ಮಹತ್ವದ್ದು ಅನ್ನಿಸಲೇ ಇಲ್ಲ! ವಿದೇಶಿ ಮಾಧ್ಯಮಗಳು ಇದಕ್ಕೆ ಮಹತ್ವ ನೀಡಿ ಸುದ್ದಿ ಮಾಡಿದವು. ಆದರೆ ಇಂಡಿಯಾದಲ್ಲಿ, ಕಾರ್ಪೊರೇಟ್ ಹಿಡಿತದಲ್ಲಿರುವ ಮಾಧ್ಯಮ ಜಗತ್ತು ಇದನ್ನು ಉಪೇಕ್ಷೆಯಿಂದ ನೋಡಿತು.

ಆಳುವ ಸರ್ಕಾರದಂತೆಯೇ ಮಾಧ್ಯಮಗಳೂ ಸಹಾ. ಈ ದೇಶದ ಪ್ರಧಾನ ಮಂತ್ರಿಗೆ ಜನಸಾಮಾನ್ಯರ ಬಗ್ಗೆ ಕಾಳಜಿ ಇಲ್ಲ. ದುಡಿಯುವ ಜನರ ಬಗ್ಗೆ ಒಲವಿಲ್ಲ. ಈ ವರ್ಗ ಪ್ರಧಾನಿಯ ಧೋರಣೆಯನ್ನು ಅರ್ಥಮಾಡಿಕೊಂಡು ಪ್ರಶ್ನಿಸಲು ತೊಡಗುತ್ತಿದ್ದಂತೆ ಸಮಾಜದಲ್ಲಿ ಒಡಕು ಮೂಡಿಸಿ ಗಮನ ಬೇರೆಡೆಗೆ ಹರಿಸುವ ಪ್ರಯತ್ನ ಮಾಡಲಾಗುತ್ತಿದೆ.

ಇದು ಬಿಜೆಪಿಯವರು ಬ್ರಿಟಿಷರಿಂದ ಕಲಿತ ಪಾಠವಿರಬೇಕು. ಅವರು ಕೂಡ ಒಡೆದಾಳುವ ನೀತಿ ಪ್ರಯೋಗಿಸಿಯೇ ಆಡಳಿತ ನಡೆಸುತ್ತಿದ್ದುದು. ಬಿಜೆಪಿ ದೇವರು– ಧರ್ಮದ ಹೆಸರಲ್ಲಿ ಒಡೆದಾಳುವ ಕೆಲಸ ಮಾಡುತ್ತಿದೆ. ಹಿಂದುತ್ವವನ್ನು ಮುಂದಿಟ್ಟುಕೊಂಡು ಜನರ ನಡುವೆ ಬಿರುಕು ಮೂಡಿಸುತ್ತಿದೆ. ಈ ದೇಶದಲ್ಲಿ 17 ಕೋಟಿಯಷ್ಟು ಮುಸ್ಲಿಮರಿದ್ದಾರೆ. ನಾಲ್ಕೂವರೆ ಕೋಟಿಯಷ್ಟು ಕ್ರಿಶ್ಚಿಯನ್ನರಿದ್ದಾರೆ. ಎರಡೂವರೆ ಕೋಟಿಯಷ್ಟು ಬೌದ್ಧರಿದ್ದಾರೆ. ಮತ್ತಷ್ಟು ಕೋಟಿ ಇತರ ಧರ್ಮೀಯರು ಕೂಡ ಇಂಡಿಯಾದಲ್ಲಿ ನೆಲೆಸಿದ್ದಾರೆ. ಆದರೆ ಈಗಿನ ಸರ್ಕಾರ ಹಿಂದೂಗಳಿಗೆ ಮಾತ್ರ ಈ ದೇಶ, ಮಿಕ್ಕವರು ದೇಶ ಬಿಟ್ಟು ತೊಲಗಬೇಕು ಎನ್ನುವಂತೆ ವರ್ತಿಸುತ್ತಿದೆ. ಏಕೆಂದರೆ ಬಿಜೆಪಿಯ ಹೃದಯದೊಳಗೆ ಇರೋದು ಆರೆಸ್ಸೆಸ್ ಎಂಬ ಕೋಮುವಾದಿ ಸಂಘಟನೆ.

2014ರ ಚುನಾವಣಾ ಸಮಯದಲ್ಲಿ ಬಿಜೆಪಿ ಇವನ್ನೆಲ್ಲ ಮಾತಾಡಿರಲಿಲ್ಲ. ಅಭಿವೃದ್ಧಿಯ ಭರವಸೆಗಳನ್ನೆ ಮುಂದೆ ಮಾಡಿಕೊಂಡು ಚುನಾವಣೆ ಗೆದ್ದಿತ್ತು. ಆದರೆ ಈಗ ಮಾಡುತ್ತಿರುವುದೇ ಬೇರೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಅದರ ಉತ್ತರ ಮೌನ ಮಾತ್ರ. ಮೋದಿಯವರಂತೂ ಈ ಪ್ರಶ್ನೆಗಳಿಗೆ ಉತ್ತರ ತೋಚದೆ ಅವನ್ನು ಸ್ವೀಕರಿಸುವ ಗೋಜಿಗೇ ಹೋಗಿಲ್ಲ. ಹಾಗೆಂದೇ ಅವರು ಪಾರ್ಲಿಮೆಂಟ್'ಗೆ ಬರುವುದನ್ನೂ ತಪ್ಪಿಸಿಕೊಳ್ಳುತ್ತಿದ್ದಾರೆ. ಧರ್ಮ ಒಂದು ವೈಯಕ್ತಿಕ ನಂಬಿಕೆಯಷ್ಟೆ. ಅದನ್ನು ಮುಂದಿಟ್ಟುಕೊಂಡು ಯಾವುದೇ ಪಕ್ಷವೂ ರಾಜಕಾರಣ ಮಾಡಬಾರದು. ಶಿಕ್ಷಣದಲ್ಲಿಯೂ ಧರ್ಮ ಹಣಕಬಾರದು. ತನ್ನ ಧರ್ಮದಲ್ಲಿ ಇರುವುದು? ಬಿಟ್ಟು ಬದಲಾಗುವುದು ಪ್ರತಿಯೊಬ್ಬರ ವೈಯಕ್ತಿಕ ಹಕ್ಕು. ಅದನ್ನು ಗೌರವಿಸದ ಹೊರತು ಪ್ರಜಾಪ್ರಭುತ್ವವಾಗಲೀ ಜಾತ್ಯತೀತತೆಯಾಗಲೀ ಸಾಧ್ಯವಾಗುವುದಿಲ್ಲ.

ಸರ್ಕಾರ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಜನರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಡಿಮಾನೆಟೈಸೇಷನ್ ವಿಫಲಗೊಂಡ ನಂತರ ಪ್ರಧಾನಿ ಕ್ಯಾಷ್ ಲೆಸ್ ಇಂಡಿಯಾದ ಮಾತಾಡುತ್ತಿದ್ದಾರೆ. ಇಂಡಿಯಾದಲ್ಲಿ ನಗದುರಹಿತ ವ್ಯವಹಾರ ಹೇಗೆ ತಾನೆ ಯಶಸ್ವಿಯಾಗಲು ಸಾಧ್ಯ? ದೊಡ್ಡದೊಂದು ವರ್ಗ ಕನಿಷ್ಠ ಸೌಲಭ್ಯಗಳೂ ಇಲ್ಲದೆ ಬದುಕುತ್ತಿರುವಾಗ ಅದು ಸಾಧ್ಯವಾಗುವುದಾದರೂ ಹೇಗೆ?

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಮಾಡುತ್ತಿದ್ದುದೂ ಇದನ್ನೇ. ಹಾಗೆ ನೋಡಿದರೆ ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಒಂದು ವ್ಯತ್ಯಾಸವೆಂದರೆ ಕಾಂಗ್ರೆಸ್ ನೇರವಾಗಿ ಕೋಮುವಾದವನ್ನು ಸಮರ್ಥಿಸಿಲ್ಲ, ಬಿಜೆಪಿ ಅದನ್ನು ಮಾಡುತ್ತಿದೆ.

ವಾಸ್ತವದಲ್ಲಿ ದೇಶದ್ರೋಹದ ಕೆಲಸ ಮಾಡುತ್ತಿರುವುದು ಭ್ರಷ್ಟಾಚಾರವನ್ನು ಹಾಸಿಹೊದ್ದಿರುವ ಈ ಪಕ್ಷಗಳ ರಾಜಕಾರಣಿಗಳು. ಇವರು ಕ್ರೋನಿ ಕ್ಯಾಪಿಟಲಿಸ್ಟರ ಹಿಡಿತದಲ್ಲಿದ್ದಾರೆ. ಪ್ರಧಾನಿ ಮೋದಿ ಕೂಡ ಈ ಕ್ರೋನಿ ಕ್ಯಾಪಿಟಲಿಸ್ಟರ ಒತ್ತಡ ಎದುರಿಸಲಾಗದೆ ಸೋತಿದ್ದಾರೆ. ಏಕೆಂದರೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವರು ಮೋದಿಯ ಮೇಲೆ ಹೂಡಿದ್ದ ಹಣಕ್ಕೆ ಲಾಭವನ್ನು ಅಪೇಕ್ಷಿಸುತ್ತಿದ್ದಾರೆ. ಅದನ್ನು ಪಡೆಯದೆ ಅವರು ಬಿಡುವವರಲ್ಲ. ಜನಪರ ಆಡಳಿತ ನೀಡಲು ಎಡಪರ್ಯಾಯದಿಂದ ಮಾತ್ರ ಸಾಧ್ಯ. ಇದನ್ನು ಎಡ ಪಕ್ಷಗಳು ಅಧಿಕಾರ ನಡೆಸುತ್ತಿರುವ ರಾಜ್ಯಗಳಲ್ಲಿ ಸಾಧಿಸಿ ತೋರಿಸಿದ್ದೇವೆ. ಎಡ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಭ್ರಷ್ಟಾಚಾರಕ್ಕೆ ತಾವಿಲ್ಲ. ತ್ರಿಪುರಾದಲ್ಲಿ ಭ್ರಷ್ಟಾಚಾರ ನಡೆದ ಪ್ರಕರಣಗಳೇ ಇಲ್ಲ. ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಪಕ್ಷ ಆಡಳಿತ ನಡೆಸಿದ್ದಷ್ಟೂ ಕಾಲ ಭ್ರಷ್ಟಾಚಾರಮುಕ್ತವಾಗಿತ್ತು. ಕೇರಳದಲ್ಲಿಯೂ ಭ್ರಷ್ಟಾಚಾರ ನಡೆದ ಉದಾಹರಣೆಗಳಿಲ್ಲ. ವಿರೋಧ ಪಕ್ಷಗಳು ಕೆಲವು ಕಮ್ಯುನಿಸ್ಟ್ ರಾಜಕಾರಣಿಗಳ ಮೇಲೆ ಭ್ರಷ್ಟತೆಯ ಆರೋಪ ಹೊರಿಸಲು ಯತ್ನಿಸಿ ವಿಫಲರಾಗಿದ್ದಾರೆ. ಎಡಪಕ್ಷಗಳು ಇರುವಲ್ಲಿ ನೀವು ಭ್ರಷ್ಟಾಚಾರ ಕಾಣುವುದು ಅಸಾಧ್ಯ.

ಈ ಎಲ್ಲ ಸಮಸ್ಯೆಗೂ ಇರುವ ಪರಿಹಾರವೆಂದರೆ ಅದು ಪ್ರಜಾಪ್ರಭುತ್ವದ ಸಮರ್ಥ ಅನ್ವಯ. ತ್ರಿಪುರಾದಲ್ಲಿ ಪ್ರಜಾಪ್ರಭುತ್ವ ಅತ್ಯಂತ ಸಮರ್ಥವಾಗಿ ಅನ್ವಯಗೊಂಡಿದೆ. ವರ್ಗ – ಸಮೂಹಗಳ ಐಕ್ಯ ಸಂಘರ್ಷದಿಂದ ಮಾತ್ರವೇ ಪ್ರಜಾಪ್ರಭುತ್ವವನ್ನು ನಿಜಾರ್ಥದಲ್ಲಿ ಜಾರಿಗೊಳಿಸಲು ಸಾಧ್ಯ. ಪ್ರಜಾಪ್ರಭುತ್ವ ನಾಶವಾದರೆ ಈ ದೇಶವೂ ಉಳಿಯುವುದಿಲ್ಲ. ರೈತ, ಕಾರ್ಮಿಕ, ದುಡಿಯುವ ವರ್ಗಗಳು ಒಗ್ಗೂಡಿ ಹೋರಾಟಕ್ಕಿಳಿಯದೆ ಹೋದರೆ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುವುದು ಕಷ್ಟ.

ಕರ್ನಾಟಕದಲ್ಲಿ ಎಡ ಪಕ್ಷಗಳು ಅಷ್ಟು ಸಶಕ್ತವಾಗಿಲ್ಲ. ಆದರೂ ಇಲ್ಲಿ ಅದರ ಕೆಲಸಗಳು ಕಡಿಮೆಯದೇನಲ್ಲ. ಕ್ರೋನಿ ಕ್ಯಾಪಿಟಲಿಸಮ್ಮಿನ ಹಿಡಿತಕ್ಕೆ ಸಿಗದೆ ತಮ್ಮ ನಮ್ಮ ಕಾಲಿನ ಮೇಲೆಯೇ ನಾವು ನಿಂತುಕೊಳ್ಳುವುದು ಮುಖ್ಯವಾಗುತ್ತದೆ. ನಾವು ಒಗ್ಗೂಡಿದರೆ ನಮ್ಮನ್ನು ಯಾರೂ ಬಗ್ಗಿಸಲಾರರು. ಆದ್ದರಿಂದ ಜನರ ನಡುವೆ ಹೋಗಿ, ಜನರ ಜೊತೆ ಬೆರೆತು ಅವರನ್ನು ಅರಿಯಿರಿ. ಜನರ ವಿಶ್ವಾಸ ಗಳಿಸಲು ಸಾಕಷ್ಟು ಸಮಯ ಹಿಡಿಯಬಹುದು. ಸಮಸ್ಯೆಯಿಲ್ಲ. ಮುಂದೊಮ್ಮೆ ಅದು ಫಲಕೊಡುವುದು. ಹೀಗಲ್ಲದೆ ಎಡಪರ್ಯಾಯ ಕಟ್ಟಲು ಸಾಧ್ಯವಿಲ್ಲ.

ಉಳಿದವರು ಕಂಡಂತೆ ಮಾಣಿಕ್ ಸರ್ಕಾರ್

ಜನಪರ ಆಡಳಿತಕ್ಕೆ ಮಾಣಿಕ್ ಸರ್ಕಾರ್ ಅವರ ತ್ರಿಪುರಾ ಸರಕಾರ ಮಾದರಿ. ಇಡೀ ದೇಶ ಇಂದು ಭಾವೋದ್ವೇಗ ಹಾಗೂ ಸಮೂಹ ಸನ್ನಿಗೆ ಸಿಲುಕಿದ ರೀತಿ ಏಕಮೂಖಿ ಸಂಸ್ಕೃತಿಯ ಕಡೆಗೆ ಸಾಗುತ್ತಿದೆ. ಆದರೆ ರೈತರು ಮತ್ತು ಕಾರ್ಮಿಕರ ಅಭ್ಯುದಯವನ್ನೇ ಮುಖ್ಯವಾಗಿಸಿಕೊಂಡಿರುವ ತ್ರಿಪುರಾ ಮಾದರಿ ಇಂದು ದೇಶಕ್ಕೆ ಅಗತ್ಯವಿದೆ.

– ಜಯಮೃತ್ಯುಂಜಯ ಸ್ವಾಮಿ, ಕೂಡಲಸಂಗಮದ ಪಂಚಮಸಾಲಿ ಲಿಂಗಾಯತ ಮಠ

ಕಮ್ಯುನಿಸ್ಟರು ಮತ್ತು ಶರಣರ ನಡುವೆ ಅವಿನಾಭಾವ ಸಂಬಂಧವಿದೆ. ಬಸವಣ್ಣ ವಿಶ್ವದ ಮೊದಲ ಕಾಮ್ರೇಡ್. ಮಾಣಿಕ್ ಸರ್ಕಾರ್ 21ನೇ ಶತಮಾನದ ನೈಜ ಶರಣ

– ರಂಜಾನ್ ದರ್ಗಾ, ಲೇಖಕ

ರೊಕ್ಕ ಮಾಡಲು ರಾಜಕಾರಣಕ್ಕೆ ಬರಬೇಕು ಎಂಬ ಭಾವನೆ ದಟ್ಟವಾಗಿದೆ. ಆದರೆ ಮಾಣಿಕ್ ಸಕಾರ್ ಅವರ ಬದುಕು ಜೀವನ–ರೀತಿಯನ್ನು ಗಮನಿಸಿದರೆ ನಾವೆಲ್ಲರೂ ರಾಜಕಾರಣ ಬಿಡಬೇಕು ಎಂಬ ಯೋಚನೆ ಮಾಡಬೇಕಾಗುತ್ತದೆ.

– ವಿನಯ ಕುಲರ್ಣಿ, ಸಚಿವ

ನಮ್ಮ ಹಳ್ಳಿಯ ಸಾಮಾನ್ಯನೊಬ್ಬ ಸಮಾವೇಶಕ್ಕೆ ಬಂದಿದ್ದ. ಇಲ್ಲಿಗೆ ಯಾಕಪ್ಪಾ ಬಂದಿದ್ದಿ ಅಂತ ಕೇಳಿದೆ. ಆತ ಹೇಳಿದ – ನನಗೆ ಗಾಂಧಿಯನ್ನಂತೂ ನೋಡುವ ಭಾಗ್ಯ ಸಿಗಲಿಲ್ಲ. ಅಷ್ಟೇ ಸರಳ ಪ್ರಾಮಾಣಿಕ ನಾಯಕ ಮಾಣಿಕ್ ಸರ್ಕಾರ್ ಅವರನ್ನಾದರೂ ನೋಡೋಣ ಅಂತ ಬಂದೆ ಎಂದ.

– ವಿಜಯ್ ಕಾಶಪ್ಪನವರ್, ಶಾಸಕ

ಕೋ–ಆಪರೇಟಿವ್ ಫೆಡರಲಿಸಂ ಅಂದ್ರೆ ಏನು?



ಪ್ರಧಾನಿಯವರು ಆಗಾಗ ಕೋ–ಆಪರೇಟಿವ್ ಫೆಡರಲಿಸಂ ಬಗ್ಗೆ ಮಾತನಾಡುತ್ತಿರುತ್ತಾರೆ. ಹಾಗೆಂದರೇನೆಂದು ಒಮ್ಮೆ ಅವರನ್ನು ನಾನು ಕೇಳಿದೆ. ಅವರು ಮೌನವಾಗಿದ್ದರು. ಇದು ಮೋದಿಯವರು ಬಳಸುವ ಹೈ–ಫೈ ಅರ್ಥಹೀನ ಇನ್ನೊಂದು ಪದ ಅಥವಾ ಘೋಷಣೆ. ನಿಜವಾಗಿಯೂ ಹೇಳಬೇಕಾದರೆ ಅವರು ಈಗಾಗಲೇ ಫೆಡರಲಿಸಂ ತತ್ವಗಳ ಆಚರಣೆಗಳನ್ನೂ ಉಲ್ಲಂಘಿಸುತ್ತಿದ್ದಾರೆ. ಯೋಜನಾ ಆಯೋಗಕ್ಕೆ ತಿಲಾಂಜಲಿ ಕೊಡಲಾಗಿದೆ. ರಾಜ್ಯಗಳ ಯೋಜನಾ ಗಾತ್ರದ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಯಾವುದೇ ಸಮಾಲೋಚನೆ ಇಲ್ಲದೆ, ಅದರಲ್ಲಿ ಕಡಿತ ಮಾಡಲಾಗುತ್ತಿದೆ. ಮುಖ್ಯಮಂತ್ರಿಗಳು ಮತ್ತು ರಾಜ್ಯಗಳ ಜತೆ ಸಂವಾದ ಸಮಾಲೋಚನೆಯ ಪ್ರಮುಖ ವೇದಿಕೆಗಳಾದ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ, ರಾಷ್ಟ್ರೀಯ ಭಾವೈಕ್ಯತೆ ಮಂಡಳಿಗಳು ಮೋದಿ ಪ್ರಧಾನಿಯಾದ ಮೇಲೆ ಸಭೆನೇ ಸೇರಿಲ್ಲ. ಅಂತರ–ರಾಜ್ಯ ಮಂಡಳಿ ಒಂದು ಬಾರಿ ಸಭೆ ಸೇರಿದರೂ, ಅಲ್ಲಿ ಯಾವುದೇ ಉಪಯುಕ್ತ ಚರ್ಚೆ ಆಗಲಿಲ್ಲ. ಇದಾ ಮೋದಿಯವರ ಕೋ–ಆಪರೇಟಿವ್ ಫೆಡರಲಿಸಂನ ಅರ್ಥ?

ಎಡರಂಗ ಆಳ್ವಿಕೆಯಲ್ಲಿ ತ್ರಿಪುರಾ ಪ್ರಗತಿ

1978ರಲ್ಲಿ ಎಡರಂಗ ಸರಕಾರ ಅಧಿಕಾರ ವಹಿಸಿಕೊಂಡಾಗ ತ್ರಿಪುರಾದಲ್ಲಿ ತಾಯಂದಿರು ತಮ್ಮ ಮಕ್ಕಳನ್ನು ಮಾರುವ,, ಜನತೆ ಹಸಿವಿನಿಂದ ಸಾಯಬೇಕಾದ ಗಂಭೀರ ಸ್ಥಿತಿ ಇತ್ತು. ಎಡರಂಗ ಆಳ್ವಿಕೆಯ ನಂತರ ತ್ರಿಪುರಾದಲ್ಲಿ ಅಂತಹ ಸ್ಥಿತಿ ಇಲ್ಲ. ಒಬ್ಬ ರೈತನೂ ಕೃಷಿ ಸಂಬಂಧಿ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳದ ಒಂದೇ ರಾಜ್ಯ ತ್ರಿಪುರಾ. ಇಲ್ಲಿ ಶಿಕ್ಷಣವನ್ನು ಆರೋಗ್ಯವನ್ನು ಹಣ ಕೊಟ್ಟು ಕೊಳ್ಳಬೇಕಾಗಿಲ್ಲ.



1972ರಲ್ಲಿ ಸಾಕ್ಷರತೆ ಕೇವಲ ಶೇ. 22 ಇತ್ತು. ಈಗ ಸಾಕ್ಷರತೆ ದೇಶದಲ್ಲೇ ಅತಿ ಹೆಚ್ಚು ಶೇ. 97.8. ಶಾಲೆ ಬಿಡುವ ಪ್ರಮಾಣ ಶೇ. 68ರಿಂದ ಶೇ. 1.5ಕ್ಕೆ ಇಳಿಸಲಾಗಿದೆ. ಸಾರ್ವತ್ರಿಕ ಉಚಿತ ಶಾಲಾ ಶಿಕ್ಷಣವನ್ನು ಜಾರಿ ಮಾಡಲಾಗಿದೆ. ಕಾಲೇಜಿನವರೆಗೆ ಉಚಿತ ಶಿಕ್ಷಣ ಇದೆ. ರೇಗಾ ಯೋಜನೆ ಜಾರಿಯಲ್ಲಿ ತ್ರಿಪುರಾ ಕಳೆದ 4 ವರ್ಷಗಳಿಂದ ಸತತವಾಗಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. 2014–15ರಲ್ಲಿ 88 ದಿನಗಳ ಕೆಲಸ ಒದಗಿಸಿದರೆ, 2015–16ರಲ್ಲಿ 92 ದಿನಗಳ ಕೆಲಸ ಒದಗಿಸಲಾಗಿದೆ. ಆದಿವಾಸಿಗಳು ಪಾಲುಗೊಂಡು ಅರಣ್ಯ ಹಕ್ಕುಗಳ ಕಾನೂನನ್ನು ಜಾರಿಗೆ ತಂದ ಮೊದಲ ರಾಜ್ಯ ತ್ರಿಪುರಾ. ರಾಜ್ಯದಲ್ಲಿ ಅಧಿಕಾರದ ವಿಕೇಂದ್ರೀಕರಣ ಮಾಡಲಾಗಿದ್ದು 3 ಹಂತಗಳ ಚುನಾಯಿತ ಸ್ಥಳೀಯ ಸಂಸ್ಥೆಗಳು ಕೆಲಸ ಮಾಡುತ್ತವೆ. ಈ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಸದಸ್ಯತ್ವದಲ್ಲೂ ಮತ್ತು ಪದಾಧಿಕಾರಿಗಳ ಹುದ್ದೆಗಳಲ್ಲೂ ಶೇ. 50 ಮಹಿಳೆಯರಿಗೆ ಮೀಸಲಾತಿ ಜಾರಿ ಮಾಡಲಾಗಿದೆ. 6ನೇ ಪರಿಚ್ಛೇಧದ ಪ್ರಕಾರ ಚುನಾಯಿತ ಆದಿವಾಸಿ ಪ್ರದೇಶ ಸ್ವಾಯತ್ತ ಕೌನ್ಸಿಲುಗಳನ್ನು ತ್ರಿಪುರಾದಲ್ಲಿದ್ದು ರಚಿಸಲಾಗಿದ್ದು, ಅದರಲ್ಲಿ ಕಳೆದ ಮೂರು ಚುನಾವಣೆಗಳಲ್ಲಿ ಎಡರಂಗ ಎಲ್ಲಾ 28 ಸೀಟುಗಳನ್ನು ಗೆದ್ದಿದೆ.

ನಾವು ಇಲ್ಲಿಯವರೆಗೆ ಇಷ್ಟು ಮಾಡಿದ್ದೇವೆ, ಮುಂದೆ ಮಾಡಬೇಕಾದ್ದು ಬಹಳಷ್ಟಿದೆ. ಅಭಿವೃದ್ಧಿಗೆ ಆಕಾಶವೇ ಮಿತಿ.

ಫೇಸ್‌ಬುಕ್‌ನಲ್ಲಿ ಲೈವ್ ಪ್ರಸಾರ

ಕಾ. ಮಾಣಿಕ್ ಸರ್ಕಾರ್ ಅವರ ಕರ್ನಾಟಕ ಭೇಟಿಯ ಘೋಷಣೆ ಆಗುತ್ತಿದ್ದಂತೆ ಸಾಮಾಜಿಕ ಮಾಧ್ಯಮ ಕೂಡಲೇ ಕಾರ್ಯ ಪ್ರವೃತ್ತವಾಯಿತು. ಇಂತಹ ಭೇಟಿಯನ್ನು ನಮ್ಮ ಮಾಧ್ಯಮಗಳು ನಿರ್ಲಕ್ಷಿಸುತ್ತವೆ ಎಂದು ನಿರೀಕ್ಷಿಸಿದ ತಂಡ, ಸಾಮಾಜಿಕ ಮಾಧ್ಯಮ ಬಳಸಿ ಗರಿಷ್ಟ ಪ್ರಚಾರ ನೀಡಬೇಕೆಂದು ನಿರ್ಧರಿಸಲಾಯಿತು. ಇದಕ್ಕಾಗಿ ಈ ಬಾರಿ ಏನಾದರೂ ಹೊಸದು ಮಾಡಬೇಕು ಎಂದು ಯೋಚಿಸಿ, ಕೊನೆಗೆ ಎಲ್ಲಾ ನಾಲ್ಕು ಸಮಾರಂಭಗಳನ್ನು ಇಡಿಯಾಗಿ ಅಥವಾ ಕನಿಷ್ಟ ಕಾ. ಸರ್ಕಾರ್ ಅವರ ಭಾಷಣವನ್ನು ಫೇಸ್ ಬುಕ್ಕಿನಲ್ಲಿ ಲೈವ್ ಪ್ರಸಾರ ಮಾಡಬೇಕು ಎಂದು ನಿರ್ಧರಿಸಲಾಯಿತು. ಅಗತ್ಯ ತಯಾರಿಗಳೊಂದಿಗೆ ಕಾ. ನವೀನ್ ಕುಮಾರ್ (ಹಾಸನ) ಮತ್ತು ಕಾ. ಬಸವರಾಜ ಪೂಜಾರ (ಹಾವೇರಿ) ಕಾ. ಸರ್ಕಾರ್ ಅವರನ್ನು ಫಾಲೋ ಮಾಡಿದರು. ಬೆಂಗಳೂರಿನಲ್ಲಿ ಚೇತನಾ ಸೇರಿಕೊಂಡರು.

ಭೇಟಿ ಆರಂಭವಾಗುವ ಮೊದಲೇ ಅದರ ವಿವರಗಳನ್ನು ಪೋಸ್ಟರ್ ಮೂಲಕ ಪ್ರಚಾರ ಮಾಡಲಾಯಿತು. ಒಟ್ಟು ಪರಿಣಾಮ ತಂಡದ ನಿರೀಕ್ಷೆಗೂ ಮೀರಿತ್ತು. ಕಾ. ಸರ್ಕಾರ್ ಭೇಟಿಯ ಮೂರು ದಿನಗಳ ಪೋಸ್ಟ್ ಗಳು 2 ಲಕ್ಷ ನೋಟ(ವ್ಯೂ) ಪಡೆದವು! ಸಾಮಾನ್ಯವಾಗಿ ಎರಡಂಕಿ ದಾಟದ ವಿಡಿಯೋ ನೋಟಗಳು ಸರಾಸರಿ ಸಾವಿರದಷ್ಟು ಇದ್ದವು. 12 ವಿಡಿಯೋಗಳು ಸಾವಿರಕ್ಕಿಂತ ಹೆಚ್ಚು ನೋಟ ಪಡೆದವು. 4 ವಿಡಿಯೋಗಳು 4 ಸಾವಿರ ದಾಟಿದರೆ, 2 ವಿಡಿಯೋಗಳು 10 ಸಾವಿರಕ್ಕಿಂತ ಹೆಚ್ಚು ನೋಟ ಪಡೆದವು. ಕೂಡಲಸಂಗಮದಲ್ಲಿ ಕಾ. ಸರ್ಕಾರ್ ಅವರ ಭಾಷಣದ ವಿಡಿಯೋ 15 ಸಾವಿರ ಮುಟ್ಟಿದೆ. ದೂರದ ತ್ರಿಪುರಾದಿಂದಲೂ ಈ ಲೈವ್ ಕವರೇಜ್ ಬಗ್ಗೆ ಮೆಚ್ಚಿಗೆ ಬಂತು. ಈ ಮೆಚ್ಚಿಗೆಯ ಭಾಗವಾಗಿ ಬೆಂಗಳೂರಿನ ಸಮಾರಂಭದಲ್ಲಿ ಸ್ವತಃ ಕಾ. ಸರ್ಕಾರ್ ಅವರ ಸಹಿಯಿದ್ದ ಪುಸ್ತಕಗಳನ್ನು ಕಾಣಿಕೆಯಾಗಿ ಕೊಡಲಾಯಿತು.

ಸಿಪಿಐ(ಎಂ) ಕರ್ನಾಟಕದ ಸಾಮಾಜಿಕ ಮಾಧ್ಯಮ ತಂಡಕ್ಕೆ ಶಾಭಾಶ್! ಅದರ ನಾಯಕತ್ವ ವಹಿಸಿದ ಕಾ. ನವೀನ್ ಕುಮಾರ್ ಗೆ ಡಬ್ಬಲ್ ಶಾಭಾಸ್!!

ಜನವರಿ 31ರ ಸಿಐಟಿಯು ವಿನ ಅನಿರ್ದಿಷ್ಟ ಹೋರಾಟ ಏಕೆ?

ಎಸ್. ವರಲಕ್ಷ್ಮಿ

ಇಂದಿನ ಕೆಲವು ಪತ್ರಿಕೆಗಳ ಸಂಪಾದಕೀಯದಲ್ಲಿ "ಸಂಪತ್ತಿನ ಅಸಮಾನ ಹಂಚಿಕೆ ವಿಶ್ವಕ್ಕೆ ಎಚ್ಚರಿಕೆಯ ಗಂಟೆ" ಎಂದು ಲೇಖನಗಳನ್ನು ಬರೆಯಲಾಗುತ್ತಿದೆ. ಅದೇ ಸಂದರ್ಭದಲ್ಲಿ ದೇಶದ ಕಾರ್ಮಿಕ ಚಳುವಳಿಯನ್ನು, ಕೇವಲ ಆರ್ಥಿಕ ಪ್ರಶ್ನೆಗಳಿಗೆ ಮಾತ್ರ ಸೀಮಿತಗೊಳಿಸಿ ಆ ಚಳುವಳಿಗಳ ಬೇಡಿಕೆಗಳಿಗೆ ಹಾಗೂ ಎತ್ತುವ ಪ್ರಶ್ನೆಗಳಿಗೆ ಯಾವುದೇ ಪ್ರಚಾರ ಕೊಡದೇ ಇದೇ ಬಂಡವಾಳಗಾರರ ಪರವಾಗಿ ನಿಲ್ಲುವುದಿದೆ. ಹೀಗಿದ್ದರೂ ಈಗಲಾದರೂ ಪತ್ರಿಕೆಗಳು ಸತ್ಯವನ್ನು ಸ್ವಲ್ಪಮಟ್ಟಿಗಾದರೂ ಒಪ್ಪಿಕೊಳ್ಳುತ್ತಿರುವುದು ಸಂತೋಷ.

ಇಡೀ ವಿಶ್ವದಲ್ಲಿ ಮತ್ತು ನಮ್ಮ ದೇಶದಲ್ಲಿನ ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ ಎಂದು ವಿವಿಧ ಮೂಲಗಳಿಂದ ಸಂಗ್ರಹಿಸಿದ ದಾಖಲೆಗಳನ್ನು ವಿಶ್ಲೇಷಿಸಿ ಆಕ್ಸಫಾಂ ಎಂಬ ಸಂಸ್ಥೆ ಸಿದ್ಧಪಡಿಸಿದ ವರದಿಯ ಪ್ರಕಾರ "ವಿಶ್ವದ ಬಹುಪಾಲು ಸಂಪತ್ತು ಕೆಲವೇ ಕೆಲವು ಜನರ, ಸಂಸ್ಥೆಗಳ ಕೈಯಲ್ಲಿದೆ. ವಿಶ್ವದ ಅರ್ಧದಷ್ಟು ಜನರ ಬಳಿ ಒಟ್ಟು ಎಷ್ಟು ಸಂಪತ್ತಿದೆಯೋ ಅಷ್ಟೇ ಮೊತ್ತದ ಸಂಪತ್ತಿಗೆ ಕೇವಲ 8 ಜನ ಮಾತ್ರ ಮಾಲೀಕರು. ಈ ವ್ಯಕ್ತಿಗಳಲ್ಲದೇ ಬಹುರಾಷ್ಟ್ರೀಯ ಸಂಸ್ಥೆಗಳಾದ ವಾಲ್ ಮಾರ್ಟ, ಶೇಲ್, ಆಪಲ್ ಗಳನ್ನೊಳಗೊಂಡಂತೆ 10 ಬೃಹತ್ ಕಂಪೆನಿಗಳ ಒಟ್ಟು ಆದಾಯ ವಿಶ್ವದ 180 ಬಡ ಮತ್ತು ಅಭಿವೃದ್ಧಿಶೀಲ ದೇಶಗಳ ಆದಾಯಕ್ಕಿಂತಲೂ ಹೆಚ್ಚು.

ಭಾರತದಲ್ಲಿ 58% ರಷ್ಟು ಸಂಪತ್ತು 1%ರಷ್ಟು ಸಿರಿವಂತರ ಕೈಯಲ್ಲಿದೆ. ಈ ಸಂಪತ್ತಿನ ಕ್ರೋಡೀಕರಣ-ಕ್ಕೆ ಪ್ರಮುಖ ಕಾರಣಗಳು: ಕಾರ್ಮಿಕರ/ನೌಕರರಿಗೆ ಸರಿಯಾದ ವೇತನವನ್ನು ಕೊಡದಿರುವುದು. ಸರಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನು ವಂಚಿಸುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ದುರ್ಬಳಕೆ ಮಾಡುವುದು ಪ್ರಮುಖವಾದುವುಗಳಾಗಿವೆ. ಈ ಅಂಶಗಳನ್ನು ಇತ್ತೀಚೆಗೆ ನಡೆದ ಸಿಐಟಿಯು ವಿನ 15ನೇ ಸಮ್ಮೇಳನ ಗುರುತಿಸಿತ್ತು. ಸಂಪತ್ತು ಸೃಷ್ಟಿಸುವ ಕಾರ್ಮಿಕರ ಶ್ರಮಕ್ಕೆ ತಕ್ಕ ಪ್ರತಿಫಲ ಕೇಳಲಾರದ ಹಾಗೇ ವಾತಾವರಣಗಳನ್ನು ಸೃಷ್ಟಿ ಮಾಡಲಾಗುತ್ತಿದೆ.

ಹಕ್ಕೊತ್ತಾಯಗಳು

1. ಕನಿಷ್ಠವೇತನ 18,000 ರೂ. ಗಾಗಿ.
2. ಗುತ್ತಿಗೆ ಕಾರ್ಮಿಕರಿಗೆ, ಸಮಾನ ಕೆಲಸಕ್ಕೆ ಸಮಾನ ವೇತನಕ್ಕಾಗಿ.
3. ಕೆಲಸದ ಭದ್ರತೆಗಾಗಿ.
4. ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ.
5. ಅಂಗನವಾಡಿ, ಬಿಸಿ ಯೂಟ, ಆಶಾ ಮುಂತಾದ ಸ್ಕೀಂ ನೌಕರರ ಖಾಯಂಗಾಗಿ ಒತ್ತಾಯಿಸಿ.

ರೂ. 18 ಸಾವಿರ ಕನಿಷ್ಟ ಕೂಲಿ

7ನೇ ವೇತನ ಆಯೋಗದ ಶಿಫಾರಸ್ಸಿನಂತೆ 18 ಸಾವಿರ ಕನಿಷ್ಟ ಕೂಲಿಯನ್ನು ನಿಗದಿ ಮಾಡುವ ಬದಲಿಗೆ 9100 ರೂ.ಗಳನ್ನು ರಾಜ್ಯ ಸರ್ಕಾರ ನಿಗದಿಪಡಿಸಿ ಆದೇಶಿಸಿದೆ. ರಾಜ್ಯದ ಕಾರ್ಖಾನೆಗಳ ವಿಭಾಗದ ವಾರ್ಷಿಕ ಕೈಗಾರಿಕಾ ಸರ್ವೇಕ್ಷಣಾ ವರದಿಗಳ ಪ್ರಕಾರ 2009 ರಿಂದ 2013 ರ ವರೆಗೆ 4 ವರ್ಷಗಳ ನಿವ್ವಳ ಮೌಲ್ಯವರ್ಧನೆಯಲ್ಲಿ ಮಾಲೀಕರ ಲಾಭದ ಪಾಲು 60.40 ರಷ್ಟಿದ್ದರೆ, ಕಾರ್ಮಿಕರ ವೇತನದ ಪಾಲು ಶೇ. 16.45ರಷ್ಟಿದೆ. ಮಾಲೀಕರು ಇಂತಹ ಲಾಭಗಳಿಕೆಯ ಪರಿಸ್ಥಿಯಲ್ಲಿದ್ದರೂ ಸಹ ಕನಿಷ್ಠವೇತನ 10,500 ರೂ ಹೆಚ್ಚಿಸಿರುವುದಕ್ಕೆ ಆಕ್ಷೇಪಣೆ ಸಲ್ಲಿಸಿ ಒತ್ತಡ ಹೇರಿದ್ದು ಮಾತ್ರವಲ್ಲದೇ ಹೈಕೋರ್ಟನಿಂದ ಏಕ ಮುಖವಾಗಿ ತಡೆಯಾಜ್ಞೆಯನ್ನು ತರಿಸಲಾಗಿತ್ತು. ಅಂತಿಮವಾಗಿ ರಾಜ್ಯಸರಕಾರ ಮಾಲೀಕರ ವಾದವೇ ಗೆಲುವು ಪಡೆಯಿತು.

40 ವರ್ಷಗಳಿಂದ ದುಡಿಯುತ್ತಿರುವ ಗ್ರಾಮ ಪಂಚಾಯತ ನೌಕರರಾದ ಬಿಲ್ ಕಲೆಕ್ಟರ್, ವಾಟರ್‌ಮನ್, ಕಾವಲುಗಾರರು, ಕಸಗುಡಿಸುವವರು, ಮತ್ತು ಜವಾನರಿಗೆ 10 ಸಾವಿರದಿಂದ 12750 ರೂ.ಗಳ ಕನಿಷ್ಠ ವೇತನವನ್ನು ನಿಗದಿಗೊಳಿಸಿದೆ. ಮಹಾನಗರ ಪಾಲಿಕೆಗಳಲ್ಲಿ ಮತ್ತು ಪುರಸಭೆಗಳಲ್ಲಿ ಗುಯತ್ತಿಗೆಯ ಆಧಾರದಲ್ಲಿ ಕೆಲಸ ಮಾಡುವ ಪೌರ ಕಾರ್ಮಿಕರಿಗೆ 11ಸಾವಿರದಿಂದ 14,600 ರೂ. ಗಳನ್ನು ನಿಗದಿಗೊಳಿಸಿ ಆದೇಶಿಸಿ 6 ತಿಂಗಳಾಗಿವೆ. ಆದೇಶ ಮಾಡಿದ ಸರಕಾರ ಅನುದಾನ ಬಿಡುಗಡೆ ಮಾಡಲು ಮುತುವರ್ಜಿ ವಹಿಸುತ್ತಿಲ್ಲ.

ಹಾಗೆಯೇ ರಾಜ್ಯದಲ್ಲಿ ಸುಮಾರು 8ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ವಿಶ್ವಸಂಸ್ಥೆ ಹೇರಿದ ನಿರ್ಬಂಧಗಳನ್ನು ನೆಪವಾಗಿಟ್ಟುಕೊಂಡು ಇಂದಿಗೂ 1000 ಬೀಡಿಗೆ 160 ರೂ. ಕೊಡಬೇಕೆಂದಿದ್ದರೂ ರಾಜ್ಯದ ಹಲವೆಡೆ ಜಾರಿಯಾಗುತ್ತಿಲ್ಲ. 2015 ರಿಂದ ಕೊಡಬೇಕಾದ ರೂ. 12.75 ಯನ್ನು ಇನ್ನು ಜಾರಿ ಮಾಡಿಸಲು ಸಾಧ್ಯವಾಗಿಲ್ಲ. ಹಾಗೆಯೇ ಪ್ಲಾಂಟೇಶನ್ ನಲ್ಲಿ 1951 ತೋಟ ಕಾರ್ಮಿಕರ ಕಾಯಿದೆಯ ಪ್ರಕಾರ ಕಾರ್ಮಿಕರಿಗೆ ಉಚಿತ ವಸತಿ, ಕುಡಿಯುವ ನೀರು, ಆರೋಗ್ಯದ ಖರ್ಚು ವೆಚ್ಚಗಳನ್ನು ಮಾಲೀಕರೆ ಭರಿಸಿ ದಿನಕ್ಕೆ 263.43 ಕೂಲಿ ಕೊಡಲಾಗುತ್ತಿತ್ತು. ಆದರೆ ಈಗ ಎಲ್ಲ ಸವಲತ್ತುಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಲು ಕಾಯಿದೆಗೆ ತಿದ್ದುಪಡಿ ತರಲು ರಾಜ್ಯ ಸರಕಾರ ಹೊರಟಿದೆ. ಈ ಕಾರ್ಮಿಕರಿಗೆ ಇಂದಿಗೂ ತಿಂಗಳಿಗೆ ಸಿಗುವ ವೇತನ ಕೇವಲ 6838 ರೂ. ಗಳು ಮಾತ್ರ. ಆದರೆ ಇಂಉ ಕಾಫಿ ಉತ್ಪಾದನೆಯಲ್ಲಿ ಭಾರತ 2ನೆಯ ಸ್ಥಾನದಲ್ಲಿದ್ದರೆ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇಷ್ಟು ಲಾಭಗಳಿಕೆಯಿದ್ದರೂ ಕೂಡಾ ಈ ಕಾರ್ಮಿಕರಿಗೆ ಇರುವ ಸವಲತ್ತು ತೆಗೆದು ಹಾಕುವ ತಿದ್ದುಪಡಿಗಳಿವೆ. ಆದರೆ ವೇತನಗಳನ್ನು ಹೆಚ್ಚಿಸುವ ಯಾವ ಸೂಚನೆಗಳು ಇಲ್ಲ.

ಇನ್ನು ಸುಮಾರು 5 ಲಕ್ಷ ಆಟೋ ಚಾಲಕರು ರಾಜ್ಯದಲ್ಲಿದ್ದಾರೆ. ಪೆಟ್ರೋಲ್, ಡೀಸೆಲ್ ಬೆಲೆಗಳು, ಆಟೋ ಸಾಮಾಗ್ರಿಗಳು, ಪೋಲಿಸರ ಶಿಸ್ತುಕ್ರಮಗಳಿಗೆ ಹೆಚ್ಚಿನ ಹಣವನ್ನು ವ್ಯಯಿಸಬೇಕಾಗಿದೆ. ಆದರೆ ಆಟೋ ಮೀಟರ್ ದರ ಅಥವಾ ಸರಕಾರದಿಂದ ಇನ್ನಿತರ ಯಾವುದೇ ಪ್ರೋತ್ಸಾಹ ಧನಗಳಿಲ್ಲ. ಸರಕಾರದಡಿಯಲ್ಲಿರುವ ಕೆ.ಎಸ್.ಆರ್.ಟಿ.ಸಿ, ಬಿಎಂಟಿಸಿ ಗಳಲ್ಲಿ ದುಡಿಯುವ ನೌಕರರು ಬೆಲೆ ಏರಿಕೆಯಾಧಾರದಲ್ಲಿ 45% ರಷ್ಟು ವೇತನ ಹೆಚ್ಚಳ ಕೇಳಿದ್ದರು. ಆದರೆ ಇವರಿಗೆ ಸಿಕ್ಕಿದ್ದು ಕೇವಲ 12%ರಷ್ಟು ಮಾತ್ರ. ಈ ವೇತನ ಹೆಚ್ಚಳಕ್ಕಾಗಿ ಮುಷ್ಕರಕ್ಕೆ ನಾಯಕತ್ವ ಕೊಟ್ಟಂತಹ 65 ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಪಿಯುಸಿ ಪ್ರಾಧ್ಯಾಪಕರು ಮತ್ತು ಪ್ರೌಢಶಾಲೆಯ ಮುಖ್ಯೋಪಾಧ್ಯಾಯರು ವೇತನ ತಾರತಮ್ಯಕ್ಕಾಗಿ 12 ದಿನಗಳ ಉಪವಾಸ ಸತ್ಯಾಗ್ರಹ ಮಾಡಿದರೂ ಕೂಡಾ ಸರಕಾರ ಇವರ ಬೇಡಿಕೆಗಳನ್ನು ತಿರಸ್ಕರಿಸಿತು. ಸುಮಾರು 4ಲಕ್ಷ ನೌಕರರೇ 6.20ಲಕ್ಷ ನೌಕರರ ಕೆಲಸವನ್ನು ನಿಭಾಯಿಸುತ್ತಿದ್ದಾರೆ. ಇವರು 6ನೆಯ ವೇತನ ಆಯೋಗ ಮತ್ತು ವೇತನ ತಾರತಮ್ಯದ ವಿರುದ್ಧ ರಾಜ್ಯದಲ್ಲಿ ಒಂದು ದಿನದ ಮುಷ್ಕರವನ್ನು ನಡೆಸಿದ್ದಾರೆ. ಹಾಗೆಯೇ ಹಲವು ವರ್ಷಗಳ ನಂತರ ಪೋಲಿಸರು ಕೂಡಾ ವೇತನ ಹೆಚ್ಚಳಕ್ಕಾಗಿ ಮುಷ್ಕರ ನಡೆಸಿದ್ದಾರೆ.

ಸ್ಕೀಂ ಕಾರ್ಮಿಕರ ಖಾಯಂ ಮಾಡಿ

ಬಹಳ ಪ್ರಮುಖವಾಗಿ ಸರಕಾರ ಸ್ಕೀಂಗಳಲ್ಲಿ 42 ವರ್ಷಗಳಿಂದ ದುಡಿಯುತ್ತಿರುವ ಅಂಗನವಾಡಿ ನೌಕರರು ಒಟ್ಟು 57.86 ಲಕ್ಷ ಐಸಿಡಿಎಸ್ ಫಲಾನುಭವಿಗಳಿಗಾಗಿ, 20ಲಕ್ಷ ಮಹಿಳೆಯರು ಇರುವ 1.4ಲಕ್ಷ ಸ್ತ್ರೀ ಶಕ್ತಿ ಗುಂಪುಗಳಿಗಾಗಿ ಮತ್ತು 18,65 ಲಕ್ಷ ಹೆಣ್ಣು ಮಕ್ಕಳಿಗೆ ಭಾಗ್ಯಲಕ್ಷ್ಮಿ ಬಾಂಡ್ ಕೊಡಿಸುವ ಮುಖಾಂತರ ರಾಜ್ಯದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಕಾರಣವಾಗಿರುವ ಮತ್ತು ಆರೂವರೆ ಗಂಟೆಗಳ ಕಾಲ ದುಡಿಯುವ ಅಂಗನವಾಡಿ ಕಾರ್ಯಕರ್ತೆಗೆ ರೂ. 6000, ಸಹಾಯಕಿಗೆ 3000 ರೂ. ಗಳು ಮಾತ್ರ ಗೌರವಧನ. ಹಾಗೆಯೇ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಗೈರು ಹಾಜರಿಯನ್ನು ತಪ್ಪಿಸಲು ಶಿಕ್ಷಣದಲ್ಲಿ ಏಕಾಗ್ರತೆಯನ್ನು ಮೂಡಿಸಲು ಅರೆಬರೆ ಸಲಕರಣೆಗಳೊಂದಿಗೆ ಪ್ರತಿನಿತ್ಯ ತಾಯಂದಿರರು 61.40ಲಕ್ಷ ಮಕ್ಕಳಿಗೆ ಸ್ವಚ್ಛವಾದ ಮತ್ತು ಬಿಸಿಯಾದ ಊಟವನ್ನು ಅಡುಗೆ ಮಾಡಿ ಬಡಿಸುತ್ತಿದ್ದಾರೆ. ಇದೇ ರೀತಿಯಲ್ಲಿ ಅಡುಗೆ ಮಾಡುವ ಅಡುಗೆದಾರರಿಗೆ ಕನಿಷ್ಠ ವೇತನಗಳಿದ್ದರೂ ಬಿಸಿಯೂಟ ಯೋಜನೆ ಎನ್ನುವ ಕಾರಣಕ್ಕೆ ಈ ಮಹಿಳೆಯರನ್ನು ಕೇವಲ 2000 ರೂ. ಗಳಿಗೆ ದುಡಿಸಲಾಗುತ್ತಿದೆ. ಹಾಗೆಯೇ ಎನ್‌ಎಚ್‌ಎಂ ನಲ್ಲಿ ದುಡಿಯುವ ಆಶಾ ನೌಕರರು ಮನೆಮನೆ ಸುತ್ತಿ ಮಾಡುವ ಕೆಲಸಕ್ಕೆ ಕೇವಲ ಪ್ರೋತ್ಸಾಹಧನ ನೀಡಿ ಶೋಷಿಸಲಾಗುತ್ತಿದೆ.

2012ರಲ್ಲಿ ಕೇಂದ್ರ ಸರಕಾರದ ತ್ರಿಪಕ್ಷೀಯ ಸಮಿತಿಯಾದ ಐಎಲ್‌ಸಿ (ಭಾರತೀಯ ಕಾರ್ಮಿಕ ಸಮ್ಮೇಳನ) ಇವರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ ನಿಗದಿಗೊಳಿಸಬೇಕೆಂದೂ ಶಿಫಾರಸ್ಸು ಮಾಡಿದೆ. ಒಂದು ರಾಜ್ಯದ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ, ಆರೋಗ್ಯ, ಪೌಷ್ಠಿಕತ, ಗ್ರಾಮೀಣಾಭಿವೃದ್ಧಿ, ನರೇಗಾ, ಸರ್ವಶಿಕ್ಷಣ ಅಭಿಯಾನ, ನ್ಯಾಶನಲ್ ರೂರಲ್ ಲೈವಲೀವುಡ್ ಮಿಷನ್ (ಎನ್ ಆರ್ ಎಲ್ ಎಂ), ಕಸ್ತೂರಿ ಭಾ, ಗಾಂಧಿ ಬಾಲವಿಕಾಸ ವಿದ್ಯಾಲಯಗಳ ಮತ್ತು ರಾಜ್ಯ ಸರಕಾರದ ಯೋಜನೆಗಳನ್ನು ದುಡಿಯುವವರನ್ನು ಕನಿಷ್ಠಕೂಲಿ ಕಾಯಿದೆಯ ವ್ಯಾಪ್ತಿಗೆ ತಂದು ಕನಿಷ್ಠ ವೇತನ ನೀಡಬೇಕು.

ಅಧಿಕೃತವಾಗಿ ಕನಿಷ್ಠ ವೇತನದ ಪರಿಕಲ್ಪನೆ "ಸಾಮಾಜಿಕ ಚೌಕಾಶಿ ಮಾಡಲಾರದ, ತೀವ್ರ ಶೋಷಣೆಗೊಳಗಾಗಿರುವ ಅಸಂಘಟಿತ ಕಾರ್ಮಿಕರನ್ನು 'ಬೆವರು ದುಡಿಮೆಗಾರರು' ಎನ್ನುತ್ತಾರೆ. ಅವರ ತೀವ್ರ ಶೋಷಣೆಯಾಗದಂತೆ ಪ್ರಭುತ್ವ ಅವರಿಗೆ ರಕ್ಷಣೆ ನೀಡುವುದಕ್ಕಾಗಿ ಮತ್ತು ಯೋಗಕ್ಷೇಮಕ್ಕಾಗಿ 1948ರ ಕನಿಷ್ಠ ಕೂಲಿ ಕಾಯಿದೆ ರಚನೆಗೊಂಡಿದೆ" ಇದರ ಯಾವುದೇ ವಿಭಾಗಗಳನ್ನು ಕಾಯಿದೆಯ ವ್ಯಾಪ್ತಿಗೆ ತರಬಹುದು ಹಾಗೂ ಕೆಲಸದ ಆಧಾರದಲ್ಲಿ ಪ್ರದೇಶಗಳ ಆಧಾರದಲ್ಲಿ ಒಂದು ದಿನದ ಕೂಲಿಯನ್ನು ನಿಗದಿ ಮಾಡಲಾಗುತ್ತದೆ.

1948ರ ಕನಿಷ್ಠ ಕೂಲಿ ಕಾಯಿದೆ ಜಾ-ರಿಯಾಗಿ ಇಂದಿಗೆ 69 ವರ್ಷವಾಯಿತು. ದೇಶದ ಸಂವಿಧಾನದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಘನತೆಯಿಂದ ಮತ್ತು ಸಮಾನತೆಯಿಂದ ಬದುಕಬೇಕೆಂದು ಆದೇಶಿಸಿ 69 ವರ್ಷಗಳಾಯಿತು. 1957ರ ಐಎಲ್ ಸಿ ಕನಿಷ್ಠ ಕೂಲಿ ಲೆಕ್ಕಾಚಾರವನ್ನು ಅಧಿಕೃತವಾಗಿ ಶಿಫಾರಸ್ಸು ಮಾಡಲಾಯಿತು. ಆಗಾಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ಕೂಡಾ ಕನಿಷ್ಠ ವೇತನದ ಬಗ್ಗೆ ನಿರ್ದೇಶನಗಳನ್ನು ನೀಡಿದೆ. ಇಷ್ಟೆಲ್ಲ ನಿರ್ದೇಶನಗಳಿದ್ದರೂ ಕೂಡಾ ಇಂದಿನ ಸರಕಾರಗಳು ಕನಿಷ್ಠ ಕೂಲಿಯ ಪ್ರಶ್ನೆಯನ್ನು ಬಗೆಹರಿಸಲಿಲ್ಲ. 7ನೆಯ ವೇತನ ಆಯೋಗ 2015ರಲ್ಲಿ 18ಸಾವಿರ ಕನಿಷ್ಠ ಕೂಲಿ ಶಿಫಾರಸ್ಸು ಮಾಡಿದೆ. ಕಾರ್ಮಿಕರ ಮತ್ತು ಕಾರ್ಮಿಕರ ಕುಟುಂಬದವರ ಮತಗಳಿಂದ ಆಯ್ಕೆಯಾಗುವ ಸರಕಾರಗಳು ಬಂಡವಾಳಗಾರರ ಪರವಾಗಿಯೇ ಧೋರಣೆಗಳನ್ನು ರೂಪಿಸುತ್ತಿದೆ.

ಸಮಾನ ಕೆಲಸಕ್ಕೆ ಸಮಾನ ವೇತನ:

2016 ಅಕ್ಟೋಬರ್ 26 ರಂದು ಸುಪ್ರೀಂ ಕೋರ್ಟ "ಸಮಾನ ಕೆಲಸಕ್ಕೆ ಸಮಾನ ವೇತನ" ನೀಡಬೇಕೆಂದೂ ತೀರ್ಪಿತ್ತಿದೆ. ದಿನಗೂಲಿ ನೌಕರರು, ತಾತ್ಕಾಲಿಕ ಉದ್ಯೋಗಿಗಳು, ಪ್ರಾಸಂಗಿಕ ಆ ಧಾರಿತ ನೌಕರರು, ಗುತ್ತಿಗೆ ನೌಕರರು, ಅಪ್ರಂಟಿಸ್ ಸೇರಿದಂತೆ ಯಾವದೇ ಹೆಸರಿನಿಂದ ಕರೆಯುವ ನೌಕರರು ಖಾಯಂ ನೌಕರರಿಗೆ ಕಡಿಮೆ ವೇತನವನ್ನು ಕೊಡುವಂತಿಲ್ಲ. ಅವರಂತೆ ಕೆಲಸ ನಿರ್ವಹಿಸುವ ಇತರರಿಗಿಂತ ಕಡಿಮೆ ವೇತನ ನೀಡುವ ಯಾವುದೇ ಕೃತ್ಯ ಗರ್ವದಿಂದ ಆದೇಶಿಸುವ ಗುಲಾಮಗಿರಿಯೇ ಆಗಿರುತ್ತದೆ. ಕಾರ್ಮಿಕರು ತಮಗಿಷ್ಟವಿಲ್ಲದೇ ಅಡಿಯಾಳುತನಕ್ಕೆ ಒಳಗಾಗುವ ದಮನಕಾರಿ ದಬ್ಬಾಳಿಕೆಯ ಕ್ರಮ ಎಂದು ನ್ಯಾಯಪೀಠ ವ್ಯಾಖ್ಯಾನಿಸಿದೆ. ಜಾಗತೀಕರಣದ ನೀತಿಗಳ ಪರಿಣಾಮದಿಂದ ಅಧುನಿಕ ತಂತ್ರಜ್ಞಾನದ ಹಲವು ಮುಖಗಳು ಕಾರ್ಮಿಕರ ಶೋಷಣೆಯ ಸ್ವರೂಪಗಳು ಬದಲಾಗಿವೆ ಮತ್ತು ಹೆಚ್ಚಾಗಿವೆ. ಇಂದು ರಾಜ್ಯದಲ್ಲಿ ಖಾಸಗೀ ಕ್ಷೇತ್ರದಲ್ಲಿ 100ಕ್ಕೆ 60 ರಷ್ಟು ಸರಕಾರದ ವಿಭಾಗಗಳಲ್ಲಿ 100ಕ್ಕೆ 50ರಷ್ಟು ಗುತ್ತಿಗೆ ಮತ್ತು ಇತರೆ ಹೆಸರುಗಳಲ್ಲಿ ಕಾರ್ಮಿಕರನ್ನು ದುಡಿಸಲಾಗುತ್ತಿದೆ.

1970 ಗುತ್ತಿಗೆ ಕಾರ್ಮಿಕ ಕಾಯಿದೆಗೆ ತಿದ್ದುಪಡಿ ತಂದು 20 ಕಾರ್ಮಿಕರ ಬದಲಾಗಿ 50 ಕಾರ್ಮಿಕರಿದ್ದರೆ ಮಾತ್ರ ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಲು, ಒಂದೇ ಕಾರ್ಖಾನೆಯಲ್ಲಿ ಹಲವು ವಿಭಾಗಗಳನ್ನು ಮಾಡಿ ಗುತ್ತಿಗೆಯಾಧಾರದಲ್ಲಿ ದುಡಿಸಲು ಮತ್ತು ಏಜೆನ್ಸಿಗಳನ್ನು ಹುಟ್ಟು ಹಾಕಲು ಕೇಂದ್ರ ಸರಕಾರ ಪ್ರಯತ್ನ ನಡೆಸುತ್ತಿದೆ. ಇದರಿಂದಾಗಿ ಮತ್ತಷ್ಟು ಇವರ ಶೋಷಣೆಗೆ ಹೆಚ್ಚುತ್ತದೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ ತೀರ್ಪಿನ ಜಾರಿಗೆ ಒತ್ತಾಯಿಸಲಾಗುತ್ತಿದೆ.


ಸರಕಾರದಡಿಯಲ್ಲಿರುವ ವಿದ್ಯುತ್ ಉತ್ಪಾದನೆಯ ಘಟಕಗಳು, ವಿದ್ಯುತ್ ಸರಬರಾಜು ಘಟಕಗಳಲ್ಲಿ ದುಡಿಯುವವರು, ಆರೋಗ್ಯ ಕ್ಷೇತ್ರದಲ್ಲಿ ನರ್ಸಗಳಾಗಿ, ಸಮಾಜಕಲ್ಯಾಣ ಇಲಾಖೆಯಡಿಯಲ್ಲಿರುವ ಹಾಸ್ಟೇಲ್ ಗಳಲ್ಲಿ, ಮುನಿಸಿಪಾಲಿಟಿಗಳಲ್ಲಿರುವ ಪೌರಕಾರ್ಮಿಕರು, ಅತಿಥಿ ಶಿಕ್ಷಕರಾಗಿ ಮೊರಾರ್ಜಿ ಶಾಲೆಗಳಲ್ಲಿ, ಅತಿಥಿ ಉಪನ್ಯಾಸಕರು ಹಲವು ವರ್ಷಗಳಿಂದ ರಾಜ್ಯದಲ್ಲಿ ದುಡಿಯುತ್ತಿದ್ದಾರೆ. ಆದರೆ ಈ ಇಲಾಖೆಗಳಲ್ಲಿ ಖಾಯಂ ನೌಕರರಿಗೆ ಕೆಲಸ ತೆಗೆದುಕೊಳ್ಳುವಾಗ ಇವರನ್ನು ಪರಿಗಣಿಸದೇ ಅತಂತ್ರರನ್ನಾಗಿಸಲಾಗುತ್ತಿದೆ.

ಹಾಗೆಯೇ ಅಸಂಘಟಿತ ಕ್ಷೇತ್ರದಲ್ಲಿ ಸುಮಾರು 1 ಕೋಟಿ 25ಲಕ್ಷ ಕಾರ್ಮಿಕರು ಮನೆಕೆಲಸಕಾರರು, ಹಮಾಲಿ ಕಾರ್ಮಿಕರು, ಆಟೋ ಚಾಲಕರು, ಕುಲಕಸಬುದಾರರು, ಬೀದಿಬದಿ ವ್ಯಾಪಾರಸ್ಥರು, ಇನ್ನು ಹಲವು ತರಹದ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನೊದಗಿಸಲು ಪಶ್ಚಿಮಬಂಗಾಳ ಮಾದರಿಯ ಪಿ.ಎಫ್. ನ್ನು ಕೊಡಲು ಕಾರ್ಮಿಕ ಇಲಾಖೆ ಶಿಫಾರಸ್ಸು ಮಾಡಿದೆ. ಆದರೆ ರಾಜ್ಯ ಸರಕಾರ ಇದಕ್ಕೆ ಕೊಡಬೇಕಾಗಿರುವ ಅನುದಾನವನ್ನು ಕೊಡದೇ ಆ ಶಿಫಾರಸ್ಸುಗಳು ಮೂಲೆಗುಂಪಾಗಿವೆ.

ಒಟ್ಟಾರೆಯಾಗಿ ರಾಜ್ಯ ಸರಕಾರ ರಾಜ್ಯದಲ್ಲಿ ಕಾರ್ಮಿಕ/ನೌಕರರ ಅತೀವ ಶೋಷಣೆಯನ್ನು ಮಾಡುವ ಧೋರಣೆಗಳನ್ನು ಕೈಗೊಳ್ಳುತ್ತದೆ. ಕನಿಷ್ಠ ಕೂಲಿ ಎಂಬುದೇ ಅಷ್ಟು ಸುಲಲಿತವಲ್ಲ. ಬಂಡವಾಳಗಾರರರಿಂದ ತಮ್ಮ ಪಾಲನ್ನು ಕಸಿಯಬೇಕೆ ಹೊರತು ಬಿಕ್ಷೆಯಾಗಿ ಬೇಡುತ್ತಿಲ್ಲ. ಕನಿಷ್ಠಕೂಲಿ ಎಂಬುದು ಗುಲಾಮಗಿರಿಯ ವಿರುದ್ಧ ಸಮಾನತೆಯೆಡೆಗೆ ಚಲಿಸುವ ಪ್ರಕ್ರಿಯೆ. ಹಾಗಾಗಿ ಈ ಭೂಮಾಲಕ ಬಂಡವಾಳಗಾರರ ವ್ಯವಸ್ಥೆಯ ವಿರುದ್ಧ ಪ್ರತಿ ಕಾರ್ಮಿಕನೂ ಎದೆಯೊಡ್ಡಿ ನಿಲ್ಲಬೇಕಿದೆ.

ಸಂವಿಧಾನಬದ್ಧ ಮತು ಕಾನೂನು ಬದ್ಧ ಹಕ್ಕನ್ನು ಪಡೆಯಲು ಸಿಐಟಿಯು ವಿನ ರಾಜ್ಯ ಸಮಿತಿ ನೇತೃತ್ವದಲ್ಲಿ ಜನವರಿ 31ರಿಂದ ಹಗಲು ರಾತ್ರಿ ಅನಿರ್ದಿಷ್ಟಾವಧಿ ಹೋರಾಟ ನಡೆಸಲು ತೀರ್ಮಾನಿಸಿದೆ. ಸಿಐಟಿಯು ಸಂಯೋಜಿತ 173 ಸಂಘಗಳ ಮತ್ತು ಸಿಐಟಿಯು ಮಾರ್ಗದರ್ಶನ ಮಾಡುವ ಎಲ್ಲ ಸಂಘಗಳ ನಾಯಕರು, ಕಾರ್ಯಕರ್ತರು ಸದಸ್ಯರು ಈ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ●

ನೋಟುಹರಣ–ಉತ್ತರಕಾಂಡ



ನಿಷೇಧಗೊಂಡ ಎಷ್ಟು ನೋಟುಗಳು ವಾಪಾಸು ಬಂದಿವೆ?

ಪ್ರಧಾನ ಮಂತ್ರಿಗಳ ಕಚೇರಿಗೆ ಗೊತ್ತಿಲ್ಲ, ಹಣಕಾಸು ಮಂತ್ರಾಲಯಕ್ಕೆ ಗೊತ್ತಿಲ್ಲ; ರಿಜರ್ವ್ ಬ್ಯಾಂಕಿಗೂ ಗೊತ್ತಿಲ್ಲ! ಬಹುಶಃ ಅಚ್ಛೇದಿನ್‌ಗಳಲ್ಲಿ 'ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ' ಎಂದರೆ ಇದೇ ಇರಬೇಕು.

97% ದಷ್ಟು ನಿಷೇಧಿತ ನೋಟುಗಳು ಬ್ಯಾಂಕಿಂಗ್ ವಯವಸ್ಥೆಗೆ ವಾಪಾಸು ಬಂದಿವೆ ಎಂದು ವರದಿಯಾಗಿರುವುದನ್ನು ರಿಝರ್ವ್ ಬ್ಯಾಂಕ್ ನಿರಾಕರಿಸಿದೆ. ಆದರೆ ಅದು ಡಿಸೆಂಬರ್ 19ರಂದು ಪ್ರಕಟಿಸಿದ ನೋಟುಗಳ ಅಂಕಿ–ಸಂಖ್ಯೆಯನ್ನು ವಿಶ್ಲೇಷಿಸಿದರೆ ನಿಷೇಧಗೊಂಡ 15.44ಲಕ್ಷ ಕೋಟಿರೂ.ಗಳ ಮೊತ್ತದ ನೋಟುಗಳ ಪೈಕಿ ಕೇವಲ 54 ಸಾವಿರ ಕೋಟಿ ರೂ.ಗಳಷ್ಟು ಮಾತ್ರ ವಾಪಾಸು ಬರಬೇಕಾಗಿದೆ. ಅಂದರೆ 97%ದಷ್ಟು ವಾಪಾಸು ಬಂದಿದೆ ಎಂದರ್ಥ. ಆದರೂ ರಿಝರ್ವ್ ಬ್ಯಾಂಕ್ ಆ ವರದಿಯನ್ನು ನಿರಾಕರಿಸಿದ್ದೇಕೆ?


ಡಿಸೆಂಬರ್ 19ರ ನಂತರ ಹೊಸ ನೋಟುಗಳನ್ನು ಚಲಾವಣೆಗೆ ತಂದಿದ್ದರೆ(ಖಂಡಿತಾ ತಂದಿರುತ್ತಾರೆ) ಈ ಲೆಕ್ಕಾಚಾರದಲ್ಲಿ ಬದಲಾವಣೆಯಾಗುತ್ತದೆ. ಬಹುಶಃ ನಿಷೇಧಗೊಂಡ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತ ವಾಪಾಸು ಬಂದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಬಹುಶಃ ಈ ಕಾರಣಕ್ಕಾಗಿಯೇ ರಿಝರ್ವ್ ಬ್ಯಾಂಕ್ ಅಂತಿಮ ಲೆಕ್ಕಾಚಾರವನ್ನು ಕೊಡುತ್ತಿಲ್ಲವೇ ಎಂಬ ಸಂದೇಹ ವಿಶೇಷಜ್ಞರಿಗೆ.

ಸೂಚನೆ ಸರಕಾರದ್ದು, ಆರ್‌ಬಿಐ ಪಾಲಿಸಿತು?

ಈ ಹಿಂದೆ ಮೋದಿ ಸರಕಾರ ರಿಝರ್ವ್ ಬ್ಯಾಂಕ್ ಸಲಹೆಯ ಮೇರೆಗೆ ಸರಕಾರ ಈ ಕ್ರಮವನ್ನು ಕೈಗೊಂಡಿತು ಎಂದು ಸಂಸತ್ತಿಗೆ ಹೇಳಿತ್ತು. ಆದರೆ ಬ್ಯಾಂಕಿನ ಗವರ್ನರ್ ಸಂಸದೀಯ ಸಮಿತಿಯ ಕೇಳಿಕೆಯ ಮೇರೆಗೆ ಸಲ್ಲಿಸಿದ ಟಿಪ್ಪಣಿಯಲ್ಲಿ ನವಂಬರ್ 7ರಂದು ಸರಕಾರ ಈ ಸೂಚನೆಯನ್ನು ಕೊಟ್ಟು ಕೂಡಲೇ ಬ್ಯಾಂಕಿನ ಆಡಳಿತ ಮಂಡಳಿ ಈ ಬಗ್ಗೆ ತಿಳಿಸಬೇಕು ಎಂದಿತು. ರಿಝರ್ವ್ ಬ್ಯಾಂಕ್ ಮಂಡಳಿ ಒಪ್ಪಿಕೊಂಡಿತು. ಮರುದಿನವೇ ಪ್ರಧಾನ ಮಂತ್ರಿಗಳು ನೋಟುರದ್ದತಿಯ ಘೋಷಣೆ ಮಾಡಿದರು.

ಆದರೂ ಇದು ಜಂಟಿ ನಿರ್ಣಯ ಎಂದಿದೆ ಆರ್‌ಬಿಐ, ತನ್ನ ನಿರ್ಣಯ ಎಂದೇನೂ ಖಡಾಕಂಡಿತವಾಗಿ ಹೇಳಿಲ್ಲ ಎಂಬುದನ್ನು ಗಮನಿಸಬೇಕು ಎನ್ನುತ್ತಾರೆ ವಿಶ್ಲೇಷಕರು.



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

35% ಉದ್ಯೋಗ ನಷ್ಟ, 50% ಆದಾಯ ನಷ್ಟ

ಅಖಿಲ ಭಾರತ ಉತ್ಪಾದಕರ ಸಂಘ(ಎಐಎಂಒ) ಮಾಡಿದ ಒಂದು ಅಧ್ಯಯನದ ಪ್ರಕಾರ ಅನಾಣ್ಯೀಕರಣದ 34 ದಿನಗಳಲ್ಲೇ 35% ಉದ್ಯೋಗಗಳು ನಾಶವಾಗಿವೆ, ಉತ್ಪಾದಕರ ಆದಾಯ ಅರ್ಧಕ್ಕೆ ಇಳಿದಿದೆ. ಈ ಸಂಘ ದೇಶದಲ್ಲಿ ಸರಕು ಉತ್ಪಾದಕರ ಅತಿ ದೊಡ್ಡ ಸಂಘ. ಸುಮಾರಾಗಿ ಎಲ್ಲ ಕೈಗಾರಿಕಾ ಚಟುವಟಿಕೆಗಳು ಸ್ಥಗಿತಗೊಂಡಿವೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನೇ ಇದು ಹೆಚ್ಚಾಗಿ ತಟ್ಟಿದೆ ಎಂದು ಈ ಅಧ್ಯಯನ ತಿಳಿಸುತ್ತದೆ.

ಅತ್ತ ಈ ರೀತಿ ನಗರಗಳಲ್ಲಿ ಆಗಿರುವ ಉದ್ಯೋಗನಾಶದಿಂದ ಬಡ ಕೂಲಿಕಾರರು ತಮ್ಮ ಊರಿಗೆ ಮರಳಿ ಮನರೇಗ ಯೋಜನೆಯಲ್ಲಿ ಉದ್ಯೋಗಕ್ಕೆ ಅರ್ಜಿ ಹಾಕುತ್ತಿರುವುದರಿಂದ ಅಲ್ಲಿ ಉದ್ಯೋಗಗಳ ಬೇಡಿಕೆ 60%ದಷ್ಟು ಹೆಚ್ಚಿದೆ ಎಂದೂ ವರದಿಯಾಗಿದೆ. ಆದರೆ 50 ದಿನಗಳ ಗಡುವಿನ ನಂತರ ಹೊಸವರ್ಷದ ಮುನ್ನಾದಿನ ಪ್ರಧಾನಿಗಳು ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಸಂಕಟಗಳನ್ನು ಸಹಿಸಿಕೊಂಡಿದ್ದಕ್ಕಾಗಿ ಜನರನ್ನು ಅಭಿನಂದಿಸಿದರೇ ಹೊರತು ಮನರೇಗಕ್ಕೆ ಹೆಚ್ಚಿನ ಹಣಕೊಟ್ಟು, ಸಂಕಟ ಸಹಿಸಿಕೊಂಡ ಜನರಿಗೆ ತುಸುವಾದರೂ ಜೀವನಾಧಾರ ಕಲ್ಪಿಸುವ ಬಗ್ಗೆ ಏನೂ ಹೇಲಿಲ್ಲ. ಆಮೇಲೆ ಇಂತಹ ಬೇಡಿಕೆ ಬಂದ ಮೇಲೂ ಏನೂ ಮಾಡಿಲ್ಲ.

ತೆರಿಗೆ ಸಂಗ್ರಹ ಹೆಚ್ಚಿದೆಯಂತೆ!

ಸರಕಾರದ ಗೀಳಾಗಿ ಬಿಟ್ಟಿದ್ದ ಜಿಡಿಪಿ ಬೆಳವಣಿಗೆಯ ಜಡಿಜ ಬಗ್ಗೆ ಪರಿಣಿತ ಸಂಸ್ಥೆಗಳ ಭವಿಷ್ಯನುಡಿಗಳು ಸರಕಾರಕ್ಕೆ ಇರುಸು ಮುರುಸು ಮಾಡಿದಂತಿದೆ. ಕಳೆದ ವರ್ಷ ಅದು 8.6% ಇತ್ತು. ಈಬಾರಿ ಅದು 7.1%ಆಗಿರುತ್ತದೆ ಎಂದು ಸರಕಾರದ ಅಂದಾಜು ಹೇಳುತ್ತದೆ. ಆದರೆ ಇದು ಅನಾಣ್ಯೀಕರಣದ ಪರಿಣಾಮವನ್ನು ಪರಿಗಣಿಸದ ಅಂದಾಜು ಎಂದು ಬೇಗನೇ ಬಯಲಾಗಿದೆ. ಎಡಿಬಿ ಅದು 7% ದಾಟಲಿಕ್ಕಿಲ್ಲ ಎಂದು ಹೇಳಿದರೆ, ಫಿಚ್‌ಸಂಸ್ಥೆ ಅದು 6.9% ಇರುತ್ತದೆ ಎಂದಿದೆ. ಈಗ ಐಎಂಎಫ್ ತನ್ನ ಈ ಹಿಂದಿನ 7.6%ದ ಅಂದಾಜನ್ನು 6.6%ಕ್ಕೆ ಇಳಿಸಿದೆ. ಚೀನಾದ ಜಿಡಿಪಿ ಬೆಳವಣಿಗೆ ದರ 6.5%ಎಂದು ಅಂದಾಜು ಮಾಡಿದ್ದನ್ನು 6.7%ಕ್ಕೆ ಏರಿಸಿದೆ. ಈ ಮೂಲಕ ಭಾರತ 'ಅತ್ಯಂತ ವೇಗದ ಬೆಳವಣಿಗೆಯ ಆರ್ಥಿಕ ಎಂಬ ಮೋದಿಯವರ ಆತ್ಮಪ್ರಶಂಸೆಗೆ ಆಘಾತ ಉಂಟುಮಾಡಿದೆ.

ಈ ನಡುವೆ ಇಂತಹ ಸಂಸ್ಥೆಗಳ ಸರ್ಟಿಫಿಕೇಟುಗಳನ್ನೇ ತೋರಿಸುತ್ತಿದ್ದ ಹಣಕಾಸ ಮಂತ್ರಿಗಳು, ಇವೆಲ್ಲ ಸುಳ್ಳು, ವಾಸ್ತವವಾಗಿ ಅನಾಣ್ಯೀಕರಣದಿಂದ ತೆರಿಗೆ ಸಂಗ್ರಹ ಹೆಚ್ಚಿದೆ ಎಂದು ಹೇಳಿದ್ದಾರೆ. ಆದರೆ ಇದು ಮತ್ತೊಂದು 'ಅಚ್ಛೇದಿನ್' ಅಸತ್ಯ ಎಂದು ಬೇಗನೇ ಬಯಲಾಗಿದೆ. ವಾಸ್ತವವಾಗಿ ಈ ಏರಿಕೆ ಪೆಟ್ರೋಲ್–ಡೀಸೆಲ್ ದರಗಳ ಏರಿಕೆಗಳಿಂದಾಗಿ ಸಂಗ್ರಹವಾದ ಹೆಚ್ಚಿನ ತೆರಿಗೆಗಳಿಂದಾಗಿ. ಕಳೆದ 15ದಿನಗಳಲ್ಲೇ ಎರಡು ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏರಿಸಿದ್ದು ಇದನ್ನು ಸಾಬೀತು ಮಾಡಿದೆ.

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆಗಳು ಇಳಿದಾಗ, ಪೆಟ್ರೋಲ್–ಡೀಸೆಲ್ ಮೇಲಿನ ತೆರಿಗೆಗಳನ್ನು ಹೆಚ್ಚಿಸಿ ಅದರ ಪೂರ್ಣ ಪ್ರಯೋಜನ ಇಲ್ಲಿಯ ಬಳಕೆದಾರರಿಗೆ ಸಿಗದಂತೆ ಮಾಡಿದ ಈ ಸರಕಾರ, ಕಚ್ಚಾತೈಲ್ ಬೆಲೆ ಏರಲಾರಂಬಿಸಿದಾಗ ಅದನ್ನು ಇಳಿಸುವುದಾಗಿ ಹೇಳಿದರೂ ಇದುವರೆಗೂ ಇಳಿಸಿಲ್ಲ!

ಶಿವಸೇನೆಯ ಪ್ರಶ್ನೆ: ನೋಟು ನಿಷೇಧದದ ನಂತರ ಸತ್ತ ಸೈನಿಕರೆಷ್ಟು?

ಹೌದು ಇದು ಅಚ್ಛೇದಿನ್‌ಗಳ ಸಾಥಿ 'ಶಿವಸೇನೆ' ಕೇಳಿರುವ ಪ್ರಶ್ನೆ. ಅದರ ಮುಖಪತ್ರಿಕೆ 'ಸಾಮ್ನಾ'ದ ಸಂಪಾದಕೀಯ ಈ ಸಂಖ್ಯೆಯನ್ನು ಪ್ರಕಟಿಸಬೇಕು ಮತ್ತು ನೋಟು ರದ್ದತಿಯ ನಿರ್ಣಯವನ್ನು ನಿಲ್ಲಿಸಬೇಕು ಎಂದಿದೆ. ಭಯೋತ್ಪಾದಕರು ಹಿಂದೆ ಸರ್ವಜನಿಕ ಸ್ಥಳಗಳಲ್ಲಿ ದಾಳಿ ಮಾಡುತ್ತಿದ್ದರು, ಈಗ ಅವರು ಸೇನಾ ನೆಲೆಗಳ ಮೇಲೆಯೇ ಗುರಿಯಿಟ್ಟು ಸೈನಿಕರನ್ನು ಕೊಲ್ಲುತ್ತಿದ್ದಾರೆ ಎಂದಿರುವ ಈ ಸಂಪಾದಕೀಯ ಸೇನಾಪಡೆಗಳನ್ನು ರಾಜಕೀಯದ ಕೆಸರಿಗೆ ಎಳೆಯಬಾರದು ಎಂದು ತನ್ನ ಮಿತ್ರಪಕ್ಷಕ್ಕೆ ಬುದ್ಧಿವಾದ ಹೇಳಿದೆ! ಅನಾಣ್ಯೀಕರಣ ಈಗ ರಾಷ್ಟ್ರೀಯ ಮಹತ್ವದ ವಿಷಯವಾಗಿ ಉಳಿದಿಲ್ಲ, ಅದೊಂದು ರಾಜಕೀಯ ಪ್ರಶ್ನೆಯಾಗಷ್ಟೇ ಉಳಿದಿದೆ ಎಂದೂ ಅದು ತನ್ನ ಮಿತ್ರನಿಗೆ ಹೇಳಿದೆ!

ಕಾಶ್ಮೀರ ಕಣಿವೆಯ ಗಲಭೆಗಳ ಮೇಲೆ ಅನಾಣ್ಯೀಕರಣದ ಪ್ರಭಾವ ಎಷ್ಟು?

500ರೂ. ನೋಟುಗಳನ್ನು ಕಲ್ಲು ತೂರುವವರಿಗೆ ಮತ್ತು 1000ರೂ. ನೋಟುಗಳನ್ನು ಇನ್ಯಾವುದಕ್ಕೋ ಬಳಸುತ್ತಿದ್ದರು. ಪ್ರಧಾನ ಮಂತ್ರಿಗಳು ಅಂತಹ ಹಣ ಪೂರೈಕೆಯನ್ನು ಸೊನ್ನೆಗೆ ಇಳಿಸಿದ್ದಾರೆ ಎಂದು ರಕ್ಷಣಾ ಮಂತ್ರಿಗಳು ನೋಟುರದ್ದತಿಯ ಇನ್ನೊಂದು ಮ್ಯಾಜಿಕ್ ಬಗ್ಗೆ ಹೇಳಿದ್ದರು.

ಆದರೆ ಆಳುವ ಪಕ್ಷದ ಮತ್ತೊಂದು ಮಿತ್ರಪಕ್ಷದ ಮುಖಂಡರು ಹಾಗೂ ಜಮ್ಮು–ಕಾಶ್ಮೀರದ ಪಿಡಿಪಿ–ಬಿಜೆಪಿ ಸರಕಾರದ ಮುಖ್ಯಮಂತ್ರಿಗಳು ಕಾಶ್ಮೀರ ಕಣಿವೆಯಲ್ಲಿ ಅಸಂತುಷ್ಟಿಯ ಮೇಲೆ ಅನಾಣ್ಯೀಕರಣ ಯಾವುದೇ ಪ್ರಭಾವ ಬೀರಿಲ್ಲ ಎಂದು ರಕ್ಷಣಾ ಮಂತ್ರಿಗಳ ಹೇಳಿಕೆಗೆ ಪ್ರತಿಕ್ರಿಯೆ ನೀಡುತ್ತ ಹೇಳಿದ್ದಾರೆ.

ನಾಲ್ಕು ಹೆಂಡಂದಿರು, 40 ಮಕ್ಕಳಿರುವವರು ದೇಶದಲ್ಲಿ ಜನಸಂಖ್ಯಾಸ್ಫೋಟಕ್ಕೆ ಹೊಣೆ ಎಂದು ಚುನಾವಣಾ ಪ್ರಚಾರ ನಡೆಯುತ್ತಿರುವ ಉತ್ತರಪ್ರದೇಶದಲ್ಲಿ ಹೇಳಿರುವ ಬಿಜೆಪಿ ಎಂಪಿ ಸಾಕ್ಷಿ ಮಹಾರಾಜ್‌ಗೆ ಚುನಾವಣಾ ಆಯೋಗ ಛೀಮಾರಿ ಹಾಕಿದೆ

–ಸುದ್ದಿ

ಉತ್ತರಾಖಂಡದ ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿ ಮತ್ತು ಅನೈತಿಕ ಸಂಬಂಧದ ಹಗರಣದಿಂದಾಗಿ ಆಂಧ್ರಪ್ರದೇಶದ ರಾಜ್ಯಪಾಲರ ಹುದ್ದೆ ಬಿಡಬೇಕಾಗಿ ಬಂದವರು ಮತ್ತು ಅವರ ಮಗ ಬಿಜೆಪಿಗೆ ಸೇರಿದ್ದಾರೆ –ಇನ್ನೊಂದು ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ರಾಷ್ಟ್ರೀಕೃತ ಸಾಮಾನ್ಯ ವಿಮಾಕಂಪನಿಗಳ ಶೇರು ಮಾರಾಟ: ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾದ ಹುಂಬ ಅಥವ ಕುಹಕತನದ ಕ್ರಮ

ಐಕ್ಯತೆಯಿಂದ ವಿರೋಧಿಸಲು ಸಿಐಟಿಯು ಮತ್ತು ಸಿಪಿಐ(ಎಂ) ಕರೆ

ಸಾರ್ವಜನಿಕ ವಲಯದ ಐದೂ ಸಾಮಾನ್ಯ ವಿಮಾಕಂಪನಿಗಳ 25% ಶೇರುಗಳನ್ನು ಮಾರಾಟ ಮಾಡಲು ಕೇಂದ್ರ ಸಂಪುಟ ಮಂಜೂರಾತಿ ನೀಡಿದೆ ಎಂದು ವರದಿಯಾಗಿದೆ. ಈ ಕಂಪನಿಗಳು ಮಾರುಕಟ್ಟೆಯಿಂದ ಬಂಡವಾಳ ಎತ್ತಲು ಅನುಕೂಲ ಮಾಡಿಕೊಡಲು ಹಾಗೂ ಅವುಗಳ 'ಪಾರದರ್ಶಕತೆ ಹಾಗೂ ಜವಾಬುದಾರಿಕೆಯನ್ನು ಉತ್ತಮ ಪಡಿಸಲು' ಹೀಗೆ ಮಾಡಲಾಗಿದೆ ಎಂದು ಹಣಕಾಸು ಮಂತ್ರಿಗಳು ಸಮಜಾಯಿಷಿ ಕೊಟ್ಟಿದ್ದಾರೆ. ಆದರೆ ಇದು ಅವರ ಅಜ್ಞಾನವನ್ನು ಅಥವ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳನ್ನು ಖಾಸಗೀಕರಣದತ್ತ ತಳ್ಳುವ ಕುಹಕವನ್ನು ತೋರಿಸುತ್ತದೆ ಎಂದು ಸಿಐಟಿಯು ಈ ನಿರ್ಧಾರವನ್ನು ಬಲವಾಗಿ ಖಂಡಿಸಿದೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಕೂಡ ಒಂದು ಹೇಳಿಕೆ ನೀಡಿ ಈ ನಿರ್ಧಾರವನ್ನು ಬಲವಾಗಿ ಖಂಡಿಸಿದೆ. ಇದು ಜನಗಳ ಮತ್ತು ದೇಶದ ಹಿತದಲ್ಲಿಲ್ಲ, ಇದೊಂದು ಉಪದ್ರವಕಾರಿ ಕ್ರಮವಾಗಿದ್ದು ಎಲ್ಲ ಪ್ರಜಾಪ್ರಭುತ್ವವಾದಿ ಜನವಿಭಾಗಗಳು ಇದನ್ನು ವಿರೋಧಿಸಬೇಕು ಎಂದು ಅದು ಹೇಳಿದೆ.

ಈ ಕ್ರಮದ ಮೂಲಕ ಸರಕಾರ ರಾಷ್ಟ್ರೀಕೃತ ಸಾಮಾನ್ಯ ವಿಮಾ ಕಂಪನಿಗಳನ್ನು ದುರ್ಬಲಗೊಳಿಸುತ್ತಿದೆ. ಇವು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸತತವಾಗಿ ಲಾಭಗಳಿಸುತ್ತಿವೆ, ಸರಕಾರಕ್ಕೆ ಆದಾಯ ತರುತ್ತಿವೆ. ಅಲ್ಲದೆ, ಸರಕಾರದ ವಿಮಾ ಆಧಾರಿತ ಕಲ್ಯಾಣ ಕ್ರಮಗಳನ್ನೆಲ್ಲ ಕಾರ್ಯರೂಪಕ್ಕೆ ತರುತ್ತಿರುವುದು ಈ ಸಾಮಾನ್ಯ ವಿಮಾಕಂಪನಿಗಳು ಮಾತ್ರ ಎಂಬ ಸಂಗತಿಯತ್ತ ಗಮನ ಸೆಳೆದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರ ವಾಸ್ತವವಾಗಿ ಈ ಕ್ರಮವನ್ನು ಕೈಗೊಳ್ಳುತ್ತಿರುವುದು ಹಣಕಾಸು ವಲಯ ಖಾಸಗೀಕರಿಸುವ ಒಟ್ಟು ಯೋಜನೆಯ ಭಾಗವಾಗಿ ಎಂದು ಹೇಳಿದೆ.

ಸಿಐಟಿಯು ಕೂಡ ಇದು ಖಂಡಿತ ರಾಷ್ಟ್ರೀಯ ಆರ್ಥಿಕದ ಹಿತದೃಷ್ಟಿಯಿಂದಲ್ಲ ಎನ್ನುತ್ತ ದುಡಿಯುವ ಜನತೆ ಹಾಗೂ ಕಾರ್ಮಿಕ ಆಂದೋಲನ ಸರಕಾರದ ಈ ಪ್ರತಿಗಾಮಿ ಕ್ರಮವನ್ನು ಐಕ್ಯತೆಯಿಂದ ವಿರೋಧಿಸಬೇಕು ಹಾಗೂ ಪ್ರತಿರೋಧಿಸಬೇಕು ಎಂದು ಕರೆ ನೀಡಿದೆ. ಹಣಕಾಸು ಮಂತ್ರಿಗಳು ಈ ಶೇರು ಮಾರಾಟದ ಮೂಲಕ ದೇಶಿ–ವಿದೇಶಿ ಖಾಸಗಿ ಸಾಮಾನ್ಯ ವಿಮಾಕಂಪನಿಗಳು ಈ ರಾಷ್ಟ್ರೀಕೃತ ಕಂಪನಿಗಳಲ್ಲಿ ಪಾಲು ಹೊಂದಲು ಅವಕಾಶ ಕಲ್ಪಿಸುತ್ತಿದ್ದಾರೆ. 30–40% ದಾವೆಗಳನ್ನು ತಿರಸ್ಕರಿಸುವ, ಅನ್ಯಾಯಯುತ ನಡವಳಿಕೆಗಳಿಗಾಗಿ ಈಗಾಗಲೇ ವಿಮಾ ನಿಯಂತ್ರಣ ಪ್ರಾಧಿಕಾರದಿಂದ ಅನಿಸಿಕೊಂಡಿರುವ ಖಾಸಗಿ ಕಂಪನಿಗಳಿಗೆ 'ಪಾರದರ್ಶಕತೆ ಮತ್ತು ಜವಾಬುದಾರಿಕೆಯ' ಹೆಸರಲ್ಲಿ ಇಂತಹ ಅವಕಾಶ ಕಲ್ಪಿಸಿಕೊಡುವುದಕ್ಕಿಂತ ದೊಡ್ಡ ಹುಚ್ಚುತನ ಅಥವ ವಂಚನೆ ಬೇರೆ ಇರಲಿಕ್ಕಿಲ್ಲ ಎಂದು ಸಿಐಟಿಂಯು ಬಹಳ ಖಾರವಾಗಿ ಈ ಕ್ರಮವನ್ನು ವರ್ಣಿಸಿದೆ.

ಮತ್ತೊಂದು ತುತ್ತೂರಿ-ಅನಾಣ್ಯೀಕರಣದಿಂದ ಹಣದುಬ್ಬರದ ನಿಯಂತ್ರಣ!



ಕೆ.ಎಂ.ನಾಗರಾಜ್

ತಾವೇ ಘೋಷಣೆ ಮಾಡಿದ್ದ ಗಡುವಿನ ಐವತ್ತು ದಿನಗಳು ಮುಗಿದ ನಂತರ, ಹೊಸ ವರ್ಷದ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮೋದಿಯವರು ಮಾಡಿದ ಭಾಷಣದಲ್ಲಿ, ನೋಟು ರದ್ದತಿ ಕ್ರಮ ವಿಫಲವಾದರೆ ತಾವು ನೇಣು ಶಿಕ್ಷೆಗೊಳಗಾಗುವ ಮಾತಿರಲಿ, ಎಳ್ಳನಷ್ಟೂ ಆತ್ಮ-ವಿಮರ್ಶೆ ಇರಲಿಲ್ಲ. ಅದರ ಬದಲಾಗಿ, ಅವರ ಅದೇ ಮಾಮೂಲಿ ಶಬ್ಡಾಡಂಬರ, ಅವರ ಅದೇ ಮಾಮೂಲಿ ಸ್ವಪ್ರತಿಷ್ಠೆ ಮತ್ತು ನೋಟು ರದ್ದತಿ ಕ್ರಮ ತರುವ ಅವರ ಅದೇ ಮಾಮೂಲಿ ಇನ್ನೊಂದು ಹೊಸ ಪ್ರಯೋಜನದ ಆಮಿಷ, ಈ ಪಟ್ಟಿಗೆ ಮೋದಿಯವರು ಸೇರಿಸಿದ ಹೊಚ್ಚ ಹೊಸ ಅಂಶವೆಂದರೆ:ಹಣದುಬ್ಬರ ನಿಯಂತ್ರಣ.

ಇದೊಂದು ವಿಲಕ್ಷಣ ವಾದ-ಯಾವ ದೃಷ್ಟಿಕೋನದಿಂದ ನೋಡಿದರೂ, ನೈಜ ವೇತನಗಳು ಇಳಿಯದಂತೆ ಮತ್ತು ಉದ್ಯೋಗಗಳು ನಾಶವಾಗದಂತೆ ನೋಡಿಕೊಂಡು ನೋಟು ರದ್ದತಿಯ ಮೂಲಕ ಹಣದುಬ್ಬರದ ಸಮಸ್ಯೆಯನ್ನು ನಿಗ್ರಹಿಸುವುದು ಸಾಧ್ಯವಿಲ್ಲದ ಮಾತು ಎನ್ನುತ್ತಾರೆ **ಪ್ರೊ.ಪ್ರಭಾತ್ ಪಟ್ನಾಯಕ್**. 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ Demonetisation and the Question of Inflation ಲೇಖನದ ಭಾವಾನುವಾದ ಇಲ್ಲಿದೆ.

ನೋಟು ರದ್ದತಿಯಿಂದ ಜನರಿಗೆ ಐವತ್ತು ದಿನಗಳವರೆಗೂ ತೊಂದರೆಗಳು ಇರಬಹುದೆಂದೂ ಮತ್ತು ಆನಂತರದ ಅವಧಿಯಲ್ಲಿ ಅದರ ಪರಿಣಾಮಗಳು ಫಲ ಕೊಡುತ್ತವೆ ಎಂಬುದಾಗಿ ನರೇಂದ್ರ ಮೋದಿ ಹೇಳಿದ್ದರು. ತಮ್ಮ ಮಾತು ಸುಳ್ಳಾದರೆ, ಐವತ್ತು ದಿನಗಳ ನಂತರ ನೇಣು ಶಿಕ್ಷೆ ವಿಧಿಸಿದರೂ ತಾವು ಅದನ್ನು ಸ್ವೀಕರಿಸುವುದಾಗಿಯೂ ಹೇಳಿದ್ದರು. ಈಗಾಗಲೇ ಐವತ್ತು ದಿನಗಳು ಕಳೆದಿವೆ. ಆದರೆ ನಗದು ಹಣದ ಕೊರತೆ ಮುಂದುವರಿಯುತ್ತಿದೆ. ಅದರಿಂದಾಗಿ ಜನರು ಸಂಕಷ್ಟಗಳಿಗೆ ಬಲಿಯಾಗುತ್ತಿರುವುದೂ ಮುಂದುವರಿದಿದೆ. ನೋಟು ರದ್ದತಿ ಕ್ರಮದಿಂದ ಎಳ್ಳು ಕಾಳಿನಷ್ಟೂ ಪ್ರಯೋಜನವಾಗಿಲ್ಲ. ಅದರ ಬದಲಾಗಿ, ಅನೇಕ ಮಂದಿ ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದಂತೆ, ನೋಟು ರದ್ದತಿ ಕ್ರಮದಿಂದಾಗಿ, ನಗದು ಹಣದ ಮೂಲಕವೇ ವ್ಯವಹಾರಗಳು ನಡೆಯುತ್ತಿದ್ದ ಅನೌಪಚಾರಿಕ ವಲಯದಲ್ಲಿ ಉಂಟಾಗಿದ್ದ ಆರ್ಥಿಕ ಕುಸಿತವು ಈಗ ದೇಶದ ಇಡೀ ಅರ್ಥವ್ಯವಸ್ಥೆಯನ್ನೇ ವ್ಯಾಪಿಸಿದೆ ಮತ್ತು ಅದನ್ನು ಒಂದು ಗಂಭೀರವಾದ ಹಿಂಜರಿತಕ್ಕೆ ತಳ್ಳಿದೆ.

ನೋಟು ರದ್ದತಿ ಕ್ರಮದಿಂದಾಗಿ ಈ ಐವತ್ತು ದಿನಗಳ ಅವಧಿಯಲ್ಲಿ ಬಡವರು ಮತ್ತು ಕೆಳ-ಮಧ್ಯಮ ವರ್ಗದ ಜನ ಹೇಳತೀರದಷ್ಟು ಸಂಕಟ ಅನುಭವಿಸಿದ್ದಾರೆ. ನೂರಾರು ಮಂದಿಯ ಪ್ರಾಣಹರಣವಾಗಿದೆ. ಇಷ್ಟೆಲ್ಲಾ ಆಗಿಯೂ, ತಾವೇ ಘೋಷಣೆ ಮಾಡಿದ್ದ ಗಡುವಿನ ಐವತ್ತು ದಿನಗಳು ಮುಗಿದ ನಂತರ, ಹೊಸ ವರ್ಷದ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮೋದಿಯವರು ಮಾಡಿದ ಭಾಷಣದಲ್ಲಿ, ನೋಟು ರದ್ದತಿ ಕ್ರಮ ವಿಫಲವಾದರೆ ತಾವು ನೇಣು ಶಿಕ್ಷೆಗೊಳಗಾಗುವ ಮಾತಿರಲಿ, ಧೂಳಿನ ಕಣದಷ್ಟಾದರೂ ಆತ್ಮ-ವಿಮರ್ಶೆಯನ್ನಾಗಲಿ ಅಥವಾ ತಾವು ತೆಗೆದುಕೊಂಡ ನೋಟು ರದ್ದತಿಯ ನಿರ್ಧಾರ ತಪ್ಪಾಗಿರುವುದರ ಬಗ್ಗೆಯಾಗಲಿ ಎಳ್ಳಷ್ಟೂ ಪರಿತಾಪವಿರಲಿಲ್ಲ. ಅದರ ಬದಲಾಗಿ, ಅವರ ಮಾತುಗಳಲ್ಲಿ, ಅವರ ಅದೇ ಮಾಮೂಲಿ ಶಬ್ಡಾಡಂಬರ, ಅವರ ಅದೇ ಮಾಮೂಲಿ ಸ್ವಪ್ರತಿಷ್ಠೆ ಮತ್ತು ನೋಟು ರದ್ದತಿ ಕ್ರಮ ತರುವ ಅವರ ಅದೇ ಮಾಮೂಲಿ ಇನ್ನೊಂದು ಹೊಸ ಪ್ರಯೋಜನದ ಆಮಿಷ, ಇವಿಷ್ಟೇ ಅವರ ಮಾತುಗಳಲ್ಲಿ ಇದ್ದದ್ದು. ನೋಟು ರದ್ದತಿ ಕ್ರಮದಿಂದಾಗಿ ಉಂಟಾಗುವ ಲಾಭಗಳ ಪಟ್ಟಿಗೆ ಮೋದಿಯವರು ಸೇರಿಸಿದ ಹೊಚ್ಚ ಹೊಸ ಅಂಶವೆಂದರೆ:ಹಣದುಬ್ಬರ ನಿಯಂತ್ರಣ.

ನೋಟು ರದ್ದತಿ ಕ್ರಮದಿಂದಾಗಿ ಹಣದುಬ್ಬರ ನಿಯಂತ್ರಣಗೊಳ್ಳುತ್ತದೆ ಎನ್ನುವ ಮೋದಿಯವರ ವಿವರಣೆ ವಿಲಕ್ಷಣವಾಗಿದೆ. ಮೋದಿಯವರು ಹೇಳುತ್ತಾರೆ:ಕಾಳಸಂತೆಕೋರರು ಮತ್ತು ಹೆಚ್ಚಿನ ಲಾಭಕ್ಕಾಗಿ ಸರಕು-ಸಾಮಗ್ರಿಗಳನ್ನು ಶೇಖರಿಸಿಕೊಳ್ಳುವವರೂ ಸೇರಿದಂತೆ ಎಲ್ಲ ರೀತಿಯ ದುಷ್ಕೃತ್ಯಗಳಲ್ಲಿ ತೊಡಗಿರುವವರು 500 ಮತ್ತು 1000 ರೂ ನೋಟುಗಳನ್ನು ಹೆಚ್ಚಾಗಿ ಬಳಸುತ್ತಾರೆ. ಬೆಲೆ ಏರಿಕೆ ಅಥವಾ ಹಣದುಬ್ಬರಕ್ಕೆ ಅವರೇ ಕಾರಣರು. ಈ ನೋಟುಗಳನ್ನು ರದ್ದುಮಾಡಿರುವುದರಿಂದ ಅವರಿಗೆ ಬಲವಾದ ಏಟು ಬಿದ್ದಿದೆ. ಆದ್ದರಿಂದ, ಹಣದುಬ್ಬರ ನಿಯಂತ್ರಣಗೊಳ್ಳುತ್ತದೆ. ಇದು ಅವರ ವಿವರಣೆ.

ತಪ್ಪು ಕಲ್ಪನೆ

ಸಮಾನಾಂತರ ಅರ್ಥವ್ಯವಸ್ಥೆಯಲ್ಲಿ (ಅಂ-ದರೆ, ಕಾಳ ಸಂತೆಯಲ್ಲಿ) 500 ಮತ್ತು 1000 ರೂ ಮುಖ ಬೆಲೆಯ ನೋಟುಗಳು ಹೆಚ್ಚಾಗಿ ಬಳಕೆಯಾಗುತ್ತಿವೆ ಎಂದು ಹೇಳುವ ಮೋದಿಯವರ ಗ್ರಹಿಕೆ ಸಂಪೂರ್ಣವಾಗಿ ತಪ್ಪು. ಕಾಳ ಸಂತೆಯ ವ್ಯವಹಾರಗಳಲ್ಲಿ ಬಳಸುವುದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಈ 500 ಮತ್ತು 1000 ರೂ ಮುಖ ಬೆಲೆಯ ನೋಟುಗಳ/ನಗದು ಹಣದ ಬಳಕೆ ಅನೌಪಚಾರಿಕ ವಲಯದಲ್ಲಿ ಆಗುತ್ತದೆ. ಅತಿ ಹೆಚ್ಚಿನ ಪ್ರಮಾಣದಲ್ಲಿ ನಗದು ಹಣದ ಬಳಕೆಯಾಗುತ್ತಿದೆ ಎಂಬ ಕಾರಣದ ಮೇಲೆ ಶೇ.85 ಮಂದಿ ದುಡಿಯುತ್ತಿರುವ ಅನೌಪಚಾರಿಕ ವಲಯದ ದುಡಿಮೆಗಾರರನ್ನು ಕಪ್ಪು ಹಣದ ಅರ್ಥವ್ಯವಸ್ಥೆಗೆ ಸೇರಿದವರು ಎಂದು ಪರಿಗಣಿಸುವ ಕ್ರಮವು ಇಡೀ ಕೃಷಿ ವಲಯದಲ್ಲಿ ದುಡಿಯುವ ರೈತರಿಗೆ ಮಾಡಿದ ಅಪನಿಂದೆಯಾಗಿದೆ.

ಹಣದುಬ್ಬರವನ್ನು ಏಕೆ ನಿಯಂತ್ರಿಸಬೇಕು ?

ಮೋದಿಯವರು ಹಣದುಬ್ಬರದ ಬಗ್ಗೆ ಹೇಳಿದ್ದ ವಿವರಣೆಯನ್ನು ಒಂದು ಕ್ಷಣ ಪಕ್ಕಕ್ಕೆ ಸರಿಸಿ, ನೋಟು ರದ್ದತಿ ಕ್ರಮದಿಂದ ಹಣದುಬ್ಬರ ನಿಯಂತ್ರಣಗೊಳ್ಳುತ್ತದೆಯೇ? ಎಂಬ ಪ್ರಶ್ನೆಯನ್ನು ನಿರ್ಲಿಪ್ತವಾಗಿ ಪರಿಶೀಲಿಸೋಣ. ಅದಕ್ಕಿಂತ ಮೊದಲು, ಹಣದುಬ್ಬರವನ್ನು ಏಕೆ ನಿಯಂತ್ರಿಸಬೇಕು? ಎಂಬ ಪ್ರಶ್ನೆ ಹೆಚ್ಚು ಪ್ರಸ್ತುತವಾಗುತ್ತದೆ. ಹಣದುಬ್ಬರದ ಪರಿಣಾಮವನ್ನು ಸರಳವಾಗಿ ಹೀಗೆ ಹೇಳಬಹುದು: ಕೂಲಿಯ ಮಟ್ಟ (ಹಿಂದೆ) ಎಷ್ಟಿತ್ತೋ ಈಗಲೂ ಅಷ್ಟೇ ಇರುತ್ತದೆ; ಆದರೆ, ಈ ನಡುವೆ ಕೊಳ್ಳುವ ವಸ್ತುಗಳ ಬೆಲೆಗಳು ಏರಿರುತ್ತವೆ. ಇಂತಹ ಪರಿಸ್ಥಿತಿಯಲ್ಲಿ, ಬಡವರ ಕಷ್ಟ ಕಾರ್ಪಣ್ಯಗಳು ಹೆಚ್ಚುತ್ತವೆ. ಆದ್ದ-ರಿಂದ, ಬಡವರ ಕಷ್ಟ ಕಾರ್ಪಣ್ಯಗಳು ಹೆಚ್ಚುವುದನ್ನು ತಡೆಯುವ ಸಲುವಾಗಿ ಹಣದುಬ್ಬರವನ್ನು ನಿಯಂತ್ರಿಸಬೇಕಾಗುತ್ತದೆ.

ಬೆಲೆ ಏರಿಕೆಯಿಂದಾಗಿ (ಅಥವಾ ಹಣದುಬ್ಬರದಿಂದಾಗಿ) ಜನ ಸಾಮಾನ್ಯರ(ಬಡವರ) ಕಷ್ಟ ಕಾರ್ಪಣ್ಯಗಳು ಹೆಚ್ಚುತ್ತವೆ. ಅಂತಹ ಪರಿಸ್ಥಿತಿಯಲ್ಲಿ, ಹಣದುಬ್ಬರವನ್ನು ತಗ್ಗಿಸಲು ಸರ್ಕಾರ/ರಿಸರ್ವ್ ಬ್ಯಾಂಕ್ ಕೆಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುತ್ತವೆ. ಆದರೆ, ಹಣದುಬ್ಬರವನ್ನು ತಗ್ಗಿಸಲು ಕೈಗೊಳ್ಳುವ ಇಂತಹ ಯಾವುದೇ ನಿರ್ದಿಷ್ಟ ಕ್ರಮಗಳನ್ನು ಅನುಸರಿಸದೆ, ಮೋದಿಯವರು ಈಗ ಹೇಳುತ್ತಿರುವ ರೀತಿಯಲ್ಲಿ, ನೋಟು ರದ್ದತಿಯ ಮೂಲಕವೇ ಹಣದುಬ್ಬರದ ನಿಯಂತ್ರಣ ಸಾಧ್ಯವೇ? ಖಂಡಿತ ಸಾಧ್ಯವಿಲ್ಲ.

ಕೂಲಿಯ ಮಟ್ಟದಲ್ಲಿ ಇಳಿಕೆಯಾದರೆ ಅಥವಾ ಬೆಲೆಗಳು ಏರಿಕೆಯಾದರೆ ಬಡವರ ಕಷ್ಟ ಕಾರ್ಪಣ್ಯಗಳು ಹೆಚ್ಚಾಗುವುದು ಹಣದುಬ್ಬರದಿಂದಾಗಿಯೇ. ಇಂತಹ ಪರಿಸ್ಥಿತಿಯಲ್ಲಿ, ಬಡವರ ನೈಜ ವರಮಾನಗಳು ಇಳಿಕೆಯಾಗಿರುತ್ತವೆ. ಆದ್ದರಿಂದ, ಬಡವರ ನೈಜ ವರಮಾನಗಳಲ್ಲಿ ಇಳಿಕೆಯಾಗದ ರೀತಿಯಲ್ಲಿ ಮತ್ತು ಉದ್ಯೋಗಗಳು ನಾಶಗೊಳ್ಳದ ರೀತಿಯಲ್ಲಿ ಹಣದುಬ್ಬರ ನಿಯಂತ್ರಿಸಲ್ಪಟ್ಟರೆ, ಅನಾಣ್ಯೀಕರಣ(ನೋಟುಗಳ ರದ್ದತಿ) ಕ್ರಮ ಯಶಸ್ವಿಯಾಯಿತು ಎನ್ನಬಹುದು. ಆದರೆ, ಅರ್ಥವ್ಯವಸ್ಥೆ ಬಳಸುತ್ತಿದ್ದ ನಗದು ಹಣದ ಪೂರೈಕೆಯಲ್ಲಿ ಕಡಿತಮಾಡಿ, ಹಣದುಬ್ಬರ ನಿಗ್ರಹಿಸುವ ಉದ್ದೇಶ ಈಡೇರುವುದೆ?

ನಗದು ಹಣದ ಪೂರೈಕೆಯಲ್ಲಿ ಕಡಿತ

ನಗದು ಹಣದ ಪೂರೈಕೆಯಲ್ಲಿ ಕಡಿತ ಮಾಡುವ ಪ್ರಶ್ನೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಏಕೆ-ಂದರೆ, ನೋಟುಗಳನ್ನು ರದ್ದು ಮಾಡುವ ಮುನ್ನ ಚಲಾವಣೆಯಲ್ಲಿದ್ದಷ್ಟೇ ಮೌಲ್ಯದ ನೋಟುಗಳು ಪುನಹ ಚಲಾವಣೆಗೆ ಬರುತ್ತವೆಂದಾದರೆ, ಮೊದಲಿದ್ದ ಪರಿಸ್ಥಿತಿಗೆ ಹಿಂದಿರುಗಿದಂತಾಗುತ್ತದೆ ಮತ್ತು ಹಣದುಬ್ಬರ ನಿಯಂತ್ರಣ ಮಾಡುವ ಪ್ರಶ್ನೆಯೂ ಆಗ ಏಳುವುದಿಲ್ಲ.

ನಗದು ಹಣದ ಪೂರೈಕೆಯಲ್ಲಿ ಕಡಿತಮಾಡುವ ಅಂಶವನ್ನು ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿಯವರು ಸುಪ್ರೀಂ ಕೋರ್ಟಿಗೆ ಈಗಾಗಲೇ ತಿಳಿಸಿದ್ದಾರೆ. ಜೇಟ್ಲಿಯವರೂ ಇದೇ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಈಗ ಇದೇ ವಿಷಯವನ್ನು ಬೇರೊಂದು ರೀತಿಯಲ್ಲಿ ಮೋದಿಯವರು ಪ್ರಸ್ತಾಪಿಸಿರುವುದರಿಂದ ನಗದು ಹಣ ಪೂರೈಕೆಯಲ್ಲಿ ಕಡಿತವಾಗುವ ಅಂಶವು ಅಧಿಕೃತ ಮೂಲದಿಂದಲೇ ಬಂದಂತಾಗಿದೆ.

ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ಸಲುವಾಗಿ, ಹಣದುಬ್ಬರ ನಿಯಂತ್ರಣ ಮಾಡುವ ಉದ್ದೇಶದಿಂದ, ನೋಟು ರದ್ದು ಮಾಡುವ ಮುನ್ನ ಚಲಾವಣೆಯಲ್ಲಿದ್ದ ನಗದು ಹಣದ (ನೋಟುಗಳ) ಪೂರೈಕೆಯಲ್ಲಿ ಶೇ.10ರಷ್ಟು ಕಡಿಮೆ ಮಾಡಲಾಗುತ್ತದೆ ಎಂದಿಟ್ಟುಕೊಳ್ಳೋಣ. ಆಗ, ಸರಕು ಸಾಮಗ್ರಿಗಳ ಬೆಲೆಗಳು ಇಳಿಕೆಯಾಗಿ ಅದರೊಟ್ಟಿಗೆ ಉದ್ಯೋಗಗಳು ನಾಶವಾಗದೆ ಹಾಗೂ ನೈಜ ವರಮಾನಗಳು ಇಳಿಯದೇ ಇದ್ದರೆ, ನೋಟು ರದ್ದತಿಯ ಮೂಲಕ ಹಣದುಬ್ಬರ ನಿಯಂತ್ರಿಸುವ ಗುರಿ ಸಾಧಿಸಿದಂತಾಗುತ್ತದೆ. ಆದರೆ, ಇದು ವಾಸ್ತವವಾಗಿ ಸಾಧ್ಯವಾಗುವುದಿಲ್ಲ. ಅದಕ್ಕೆ ಕಾರಣಗಳಿವೆ.

ಅನೌಪಚಾರಿಕ ವಲಯದಲ್ಲಿ ದುಡಿಯುವ ಮಂದಿಯೂ ಔಪಚಾರಿಕ (ಕೈಗಾರಿಕಾ) ವಲಯದಲ್ಲಿ ತಯಾರಾದ ಕೆಲವು ಉತ್ಪನ್ನಗಳನ್ನು ಬಳಸುತ್ತಾರೆ. ನಗದು ಹಣದ ಪೂರೈಕೆಯಲ್ಲಿ ಶೇ.10ರಷ್ಟು ಕಡಿಮೆಯಾದ ಸಂದರ್ಭದಲ್ಲಿ, ಕೈಗಾರಿಕಾ ವಲಯದ ಉತ್ಪನ್ನಗಳ ಬೆಲೆಗಳು ಶೇ.10ರಷ್ಟು ಇಳಿಯಬೇಕಾಗುತ್ತದೆ. ಏಕೆ-ಂದರೆ, ಕೈಗಾರಿಕಾ ವಲಯವು ಕಚ್ಚಾ ಸಾಮಗ್ರಿಯಾಗಿ ಬಳಸುವ ಅನೌಪಚಾರಿಕ ವಲಯದ ಉತ್ಪನ್ನಗಳ ಬೆಲೆ ಆಗಲೇ ಶೇ.10ರಷ್ಟು ಇಳಿದಿರುತ್ತದೆ. ಆದರೂ, ಕೆಲವೇ ಮಂದಿಯ ಹಿಡಿತದಲ್ಲಿರುವ ಕೈಗಾರಿಕಾ ವಲಯವು ತನ್ನ ಉತ್ಪಾದನೆಗಳ ಬೆಲೆಗಳು ಇಳಿಯಲು ಬಿಡುವುದಿಲ್ಲ. ಯಾವಾಗಲೂ ಬೆಲೆಗಳನ್ನು ನಿರ್ಧರಿಸುವವರು ಈ ಮಂದಿಯೇ. ಅಂತಹ ಪರಿಸ್ಥಿತಿಯಲ್ಲಿ, ಅನೌಪಚಾರಿಕ ವಲಯದಲ್ಲಿ ಉತ್ಪನ್ನಗಳ ಬೆಲೆಗಳು ಶೇ.10ರಷ್ಟು ಇಳಿಕೆಯಾದ ಪರಿಣಾಮವಾಗಿ ಅಲ್ಲಿ ದುಡಿಯುವವರ ನೈಜ ವೇತನಗಳು ಶೇ.10ರಷ್ಟು ಇಳಿಯಲು ನೋಟು ರದ್ದತಿಯು ಕಾರಣವಾಗಿರುತ್ತದೆ. ಅನೌಪಚಾರಿಕ ವಲಯದ ಕಿರು ಉದ್ದಿಮೆದಾರರು ಉತ್ಪಾದಿಸಿದ ವಸ್ತುಗಳ ಬೆಲೆಗಳು ಶೇ.10ರಷ್ಟು ಇಳಿಕೆಯಾದ ಪರಿಣಾಮವಾಗಿ ಉಂಟಾದ ನಷ್ಟವನ್ನು ತಾಳಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಕಿರು ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಮುಚ್ಚುತ್ತಾರೆ. ಅದರಿಂದಾಗಿ ಅನೌಪಚಾರಿಕ ವಲಯದಲ್ಲಿ ಹಿಂಜರಿತವಾಗುತ್ತದೆ. ಅದು ನಿರುದ್ಯೋಗಕ್ಕೆ ಕಾರಣವಾಗುತ್ತದೆ.

ಹಣದುಬ್ಬರ ನಿಗ್ರಹಿಸಲು ಸಾಧ್ಯವಿಲ್ಲ

ಯಾವ ದೃಷ್ಟಿಕೋನದಿಂದ ನೋಡಿದರೂ, ನೈಜ ವೇತನಗಳು ಇಳಿಯದಂತೆ ಮತ್ತು ಉದ್ಯೋಗಗಳು ನಾಶವಾಗದಂತೆ ನೋಡಿಕೊಂಡು ನೋಟು ರದ್ದತಿಯ ಮೂಲಕ ಹಣದುಬ್ಬರದ ಸಮಸ್ಯೆಯನ್ನು ನಿಗ್ರಹಿಸುವುದು ಸಾಧ್ಯವಿಲ್ಲದ ಮಾತು. ನೋಟು ರದ್ದತಿಯು ಕಾರಣದಿಂದಾಗಿ ಹಣದುಬ್ಬರದ ವೇಗ ತಗ್ಗಬಹುದು. ಆಗ, ಹಣದುಬ್ಬರದ ವೇಗ ತಗ್ಗುವುದರೊಟ್ಟಿಗೆ ಅನೌಪಚಾರಿಕ ವಲಯದಲ್ಲಿ ದುಡಿಯುವವರ ನೈಜ ವೇತನಗಳೂ ಗತ್ಯಂತರವಿಲ್ಲದೆ ಇಳಿದಿರುತ್ತವೆ. ಅಂತಹ ಪರಿಸ್ಥಿತಿಯನ್ನು ಹಣದುಬ್ಬರದ ನಿಗ್ರಹ ಎಂದು ಹೇಳಲಾಗದು.

ವಿಷಮ ಪರಿಸ್ಥಿತಿ

ನೋಟು ರದ್ದತಿಯು ಉಂಟುಮಾಡಿರುವ ಹಾನಿಕಾರಕ ಪರಿಣಾಮಗಳಿಂದ ಬಿಜೆಪಿ ನಾಯಕರು ಈಗ ಹತಾಶರಾಗಿದ್ದಾರೆ. ಅವರು ಎಷ್ಟು ಹತಾಶರಾಗಿದ್ದಾರೆ ಎಂದರೆ ನೋಟು ರದ್ದತಿಯು ಯಶಸ್ವಿಯಾಗುತ್ತದೆ ಎಂದು ಬಿಂಬಿಸಲು ಅವರು ಯಾವ ಹುಚ್ಚು ಸಾಹಸಕ್ಕೂ ಹೇಸುವುದಿಲ್ಲ. ಏಕೆಂದರೆ, ನೋಟು ರದ್ದತಿಯಿಂದ ಏನೆಲ್ಲಾ ಪ್ರಯೋಜನಗಳಾಗುತ್ತವೆ ಎಂದು ಹೇಳಿದ್ದರೋ ಅವೆಲ್ಲಾ ಠುಸ್ಸಾಗಿವೆ. ಮುಳುಗುತ್ತಿರುವವನು ಹುಲ್ಲು ಕಡ್ಡಿಯನ್ನೂ ಹಿಡಿಯುತ್ತಾನೆ ಎಂಬಂತಾಗಿದೆ ಅವರ ಈಗಿನ ಪರಿಸ್ಥಿತಿ. ಮೊದಲಿಗೆ ಅವರು ಹೇಳಿದ್ದು: ಇದೊಂದು "ಕಪ್ಪು ಹಣದ ವಿರುದ್ಧದ ಸರ್ಜಿಕಲ್ ದಾಳಿ". ಅವರ ಈ ಸಮರ್ಥನೆ ಪೊಳ್ಳು ಎಂದು ಬಯಲಾದಾಗ, ರಾಗ ಬದಲಾಯಿಸಿದರು. ರದ್ದಾದ 500 ಮತ್ತು 1000 ರೂ ಮುಖ ಬೆಲೆಯ ನೋಟುಗಳ ಪೈಕಿ ಬ್ಯಾಂಕಿನಲ್ಲಿ ಡಿಪಾಸಿಟ್ ಆಗದೆ ಮತ್ತು/ಅಥವಾ ಬೇರೆ ನೋಟುಗಳೊಂದಿಗೆ ಬದಲಾಯಿಸಿಕೊಳ್ಳದೆ ಉಳಿದ 500 ಮತ್ತು 1000 ರೂ ಮುಖ ಬೆಲೆಯ ಕರೆನ್ಸಿ ನೋಟುಗಳು ರಿಸರ್ವ್ ಬ್ಯಾಂಕಿನ ಲಾಭವೆಂದು ಪರಿಗಣಿಸಲಾಗುತ್ತದೆ. ಲಕ್ಷ ಲಕ್ಷ ಕೋಟಿ ರೂಪಾಯಿಗಳ ಮೊತ್ತದ ಈ ಲಾಭವನ್ನು ಸರ್ಕಾರವು ಬಡವರ ಉದ್ಧಾರಕ್ಕಾಗಿ ಬಳಸುತ್ತದೆ ಎಂದು ಬಿಜೆಪಿ ಮಂದಿ ಟಾಂ ಟಾಂ ಹೊಡೆದರು. ಹೆಚ್ಚು ಕಡಿಮೆ ಎಲ್ಲಾ ನೋಟುಗಳೂ ವಾಪಸಾಗಿರುವುದರಿಂದ, ಒಂದು ಜುಜುಬಿ ಮೊತ್ತದ ಲಾಭ ಆಗಬಹುದು ಎನ್ನುತ್ತವೆ ಇತ್ತೀಚಿನ ಅಂದಾಜುಗಳು. ತದನಂತರ, ನೋಟು ರದ್ದತಿಯಿಂದಾಗಿ ಬ್ಯಾಂಕ್‌ಗಳಲ್ಲಿ ಬೆಟ್ಟದಷ್ಟು ಹಣ ಠೇವಣಿಯಾಗಿದೆ. ಬ್ಯಾಂಕ್‌ಗಳು ಆ ಹಣವನ್ನು ಸಾಲ ಕೊಡಲು ಬಳಸುತ್ತವೆ. ಆಗ, ಸಾಲದ ಮೇಲಿನ ಬಡ್ಡಿ ದರ ಇಳಿಯುತ್ತದೆ. ಅದರಿಂದ ಜನ ಸಾಮಾನ್ಯರಿಗೆ ಅನುಕೂಲವಾಗುತ್ತದೆ ಎಂದು ಸುಳ್ಳು ಪ್ರಚಾರ ಹಬ್ಬಿಸಿದರು.

ಅನಾಣ್ಯೀಕರಣದಿಂದಾಗಿ ಬ್ಯಾಂಕ್‌ಗಳ ಬಳಿ ಅಪಾರ ಹಣ ಸಂಗ್ರಹವಾಗಿದೆ. ನಿಜ. ಆದರೆ, ಈ ಹಣವನ್ನು ಬ್ಯಾಂಕ್‌ಗಳು ತಮ್ಮ ವಾಣಿಜ್ಯ ಉದ್ದೇಶಗಳಿಗೆ (ಅಂ-ದರೆ, ಸಾಲ ಕೊಡಲು) ಬಳಸದಂತೆ ರಿಸರ್ವ್ ಬ್ಯಾಂಕ್ ಆದೇಶಿಸಿದೆ. ಇದು ಬಿಜೆಪಿ ಮಂದಿ ಹೇಳುವ ಕತೆಗಳಿಗೆ ಸಮರ್ಪಕ ಉತ್ತರವಾಗಿದೆ. ಮೇಲಾಗಿ, ಬಡ್ಡಿ ದರಗಳ ಏರಿಕೆ ಅಥವಾ ಇಳಿಕೆಗಳು ರಿಸರ್ವ್ ಬ್ಯಾಂಕ್‌ನ ಹಣ ಕಾಸು ನೀತಿಗಳಿಗೆ ಸಂಬಂಧಿಸುತ್ತವೆ. ಸುಲಭ ಬಡ್ಡಿ ದರದಲ್ಲಿ ಸಾಲ ದೊರಕಿಸುವ ಏಕ ಮಾತ್ರ ಉದ್ದೇಶದಿಂದ ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಇಳಿಸಬಹುದು. ಅದು ಬೇರೆ ವಿಷಯ. ಬ್ಯಾಂಕ್‌ಗಳ ಬಳಿ ಶೇಖರಣೆಯಾಗಿರುವ ಅಪಾರ ಹಣಕ್ಕೂ ಮತ್ತು ಬಡ್ಡಿ ದರಗಳಿಗೂ ಸಂಬಂಧವಿಲ್ಲ. ಮತ್ತೆ, ಈಗ, ನೋಟು ರದ್ದತಿಯ ಕ್ರಮದಿಂದಾಗಿ ಹಣದುಬ್ಬರದ ನಿಯಂತ್ರಣವಾಗುತ್ತದೆ ಎಂಬ ವಾದವನ್ನು ಬಿಜೆಪಿ ಮಂದಿ ಮಂಡಿಸುತ್ತಿರುವ ಸಮಯದಲ್ಲಿ, ಅವರು ಈ ಪರಿಯ ಹಣದುಬ್ಬರ ನಿಯಂತ್ರಣವು ಬಡವರನ್ನು ಹಿಂಡಿ ಹಿಪ್ಪೆ ಮಾಡುತ್ತದೆ ಎಂಬ ಅಂಶವನ್ನು ಮರೆಮಾಚುತ್ತಿದ್ದಾರೆ.

ಇನ್ನು ಕೆಲವೇ ದಿನಗಳಲ್ಲಿ ನೋಟು ರದ್ದತಿಯ ಕ್ರಮದಿಂದಾಗಿ ಹಣದುಬ್ಬರ ನಿಯಂತ್ರಣವಾಯಿತು ಎಂದು ತುತ್ತೂರಿ ಊದುತ್ತಾರೆ. ಮೌಢ್ಯವೇ ಮೈವೆತ್ತಂತಿರುವ ಸರ್ಕಾರದ ಬಳಿ ಗಂಟಲು ಹರಿಯುವಷ್ಟು ಕೂಗುವುದನ್ನು ಬಿಟ್ಟು ಬೇರೇನೂ ಉಳಿದಿಲ್ಲ. ■

ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದತ್ತ: ಕೇರಳದಲ್ಲಿ ಎಲ್‌ಡಿಎಫ್ ಸರಕಾರದ 200ದಿನಗಳು

ಕೇರಳದಲ್ಲಿ ಎಲ್‌ಡಿಎಫ್ ಸರಕಾರ ಅಧಿಕಾರಕ್ಕೆ ಬಂದು 200 ದಿನಗಳು ಪೂರ್ತಿಗೊಂಡಿದೆ. ಇಷ್ಟು ಅಲ್ಪಾವಧಿಯಲ್ಲಿ ತೆಗೆದುಕೊಂಡ ನಿರ್ಧಾರಗಳು ಕೇವಲ ವಿನೂತನ ಮಾತ್ರವಲ್ಲದೇ ದೂರದೃಷ್ಟಿಯದಾಗಿದೆ.

ಸರಕಾರ ತೆಗೆದುಕೊಂಡ ನಿರ್ಧಾರಗಳು ಸಮಾಜದ ಎಲ್ಲ ವಲಯಗಳನ್ನೂ ತಲುಪಿವೆ, ಅದರಲ್ಲೂ ಮುಖ್ಯವಾಗಿ ಕಡುಬಡವರನ್ನು. ಅಲ್ಪಾವಧಿಯಲ್ಲಾದರೂ ಸರಕಾರ ತೆಗೆದುಕೊಂಡ ಕ್ರಮಗಳು ಅತೀ ಬಡವ ಮತ್ತು ಅವಶ್ಯಕ ಇರುವ ಸಮುದಾಯ ಸಂಬಂದಿತ ಸಮಸ್ಯೆಗಳನ್ನು ಪರಿಹರಿಸಲು ಒತ್ತು ಕೊಡಲಾಗಿದೆ. ಭವಿಷ್ಯದಲ್ಲಿ ಜನರಿಗೆ ಆರ್ಥಿಕ ಕ್ಷಮತೆ ಮತ್ತು ಸಾಮಾಜಿಕವಾಗಿ ಸಮಾನತೆಯನ್ನು ಕಲ್ಪಿಸುವ ಮಹತ್ತರ ಉದ್ದೇಶವನ್ನು ಈ ಸರಕಾರ ಹೊಂದಿದೆ.

ಶಿಕ್ಷಣ: ಶಿಕ್ಷಣ ವಲಯ ಅತಿಹೆಚ್ಚಿನ ಉತ್ತೇಜನವನ್ನು ಪಡೆದಿದೆ. ಮೂಲಭೂತ ಸೌಕರ್ಯವನ್ನು ಒದಗಿಸಿ ಆಧುನಿಕ ಶಿಕ್ಷಣ ಪರಿಕಲ್ಪನೆಗೆ ಪುರುಜ್ಜೀವನ ನೀಡಲು ಸುಮಾರು 1000ಕೋಟಿ ರೂ. ಮೀಸಲಿಡಲಾಗಿದೆ. ಅಂತರಾಷ್ಟ್ರೀಯ ಗುಣಮಟ್ಟವನ್ನು ತಲುಪಲು 1000 ಸಾರ್ವಜನಿಕ ಶಾಲೆಗಳ ಆಯ್ಕೆಯಾಗಿದೆ; 2016–17ನೇ ಶೈಕ್ಷಣಿಕ ವರ್ಷದಲ್ಲಿ ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣಕ್ಕೆ ಸರಕಾರದ ಅನುದಾನ 20% ಏರಿಕೆ ಮಾಡಲಾಗಿದೆ; ಸರಕಾರೀ ಶಾಲೆಯಲ್ಲಿ ಓದುವ ಎಲ್ಲ ವಿದ್ಯಾರ್ಥಿಗಳಿಗೆ 8ನೇ ತರಗತಿಯವರೆಗೆ ಉಚಿತ ಸಮವಸ್ತ್ರ ಮತ್ತು 35 ಲಕ್ಷ ಅವಘಡ ವಿಮೆ ಒದಗಿಸಲಾಗಿದೆ.

ಸಾರ್ವಜನಿಕ ಆರೋಗ್ಯ ವ್ಯವಸ್ಥೆ: ಜನಸಾಮಾನ್ಯರ ಹಿತಾಸಕ್ತಿಯನ್ನು ಕಾಪಾಡಲು ಕೇರಳ ಸರಕಾರ ವಿನೂತನ ನೀತಿಗಳನ್ನು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಅನುಸರಿಸಿತು. ಉಪಶಮನಕಾರಕ ಆರೈಕೆಯನ್ನು ಆರಂಭಿಸಿದ ರಾಜ್ಯಗಳಲ್ಲಿ ಕೇರಳ ದೇಶದಲ್ಲೇ ಮೊದಲನೇ ಸ್ಥಾನದಲ್ಲಿದೆ. ದೇಶದ ಸರಾಸರಿ ಅಂಕಿ ಅಂಶಗಳನ್ನು ಗಮನಿಸಿದಾಗ ಶಿಶು ಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ, ಒಟ್ಟಾರೆ ಜನನ ಮತ್ತು ಮರಣ ಪ್ರಮಾಣ ಕೇರಳದಲ್ಲಿ ಅತ್ಯಂತ ಕಡಿಮೆ.'ಜನ ಔಷಧಿ' ಮಳಿಗೆಗಳ ಸ್ಥಾಪನೆಯನ್ನು ಭಾರತೀಯ ಸಾರ್ವಜನಿಕ ಔಷಧಿ ಉದ್ಯಮಗಳ ಬ್ಯೂರೋ (ಬಿಪಿಪಿಐ) ಮೂಲಕ ತೆರೆದು ಆರ್ಥಿಕವಾಗಿ ಹಿಂದುಳಿದ ಜನತೆಗೆ ಜೆನರಿಕ್ ಔಷಧಿಗಳು ಕಡಿಮೆ ದರದಲ್ಲಿ ಸಿಗುವಂತ ಯೋಜನೆಯನ್ನು ಕಾರ್ಯಗತಗೊಳಿಸಲು ನಿರ್ಧರಿಸಿದೆ. ಜನ ಔಷಧಿ ಮಳಿಗೆಗಳನ್ನು ಕುಟುಂಬಶ್ರೀ ಸಂಘಕ್ಕೆ ಅನುದಾನ ನೀಡುವದರ ಮೂಲಕ ಆರಂಭಿಸಲಾಗುವದು.

ಗೋಡಂಬಿ ಕಾರ್ಖಾನೆಯ ಪುನರಾರಂಭ: ಕೇರಳ ರಾಜ್ಯದ ಗೊಡಂಬಿ ಅಭಿವೃದ್ಧಿ ನಿಗಮದ ಅಡಿಯಲ್ಲಿ ಕಾರ್ಖಾನೆಗಳ ಪುನರಾರಂಭವಾಗಿದೆ. ಇದರಿಂದ 18000 ಕಾರ್ಮಿಕರಿಗೆ ಪ್ರಯೋಜನವಾಗಿದೆ.

ರಬ್ಬರ್ ಉದ್ದಿಮೆಯಲ್ಲಿ ರೈತರಿಗೆ 500ಕೋಟಿ ಮೀಸಲಿಡಲಾಗಿದೆ. ಮೇ 2017ರ ವರೆಗೆ ಕೃಷಿ ಸಾಲ ಅವಧಿ ವಿಸ್ತರಣೆ ಮಾಡಲಾಗಿದೆ. ನಿವೃತ್ತ ಅಂಗನವಾಡೀ ಶಿಕ್ಷಕೀಯರು ಮತ್ತು ಸಹಾಯಕಿಯರಿಗೆ 1000 ರೂ ಆರ್ಥಿಕ ಸಹಾಯ. ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ 595800 ರೇಶನ್ ಕಾರ್ಡಬಳಕೆದಾರರಿಗೆ ಉಚಿತವಾಗಿ 35 ಕೆಜಿ ಅಕ್ಕಿ.

ವಿಮುಕ್ತಿ: ಮದ್ಯ ಮತ್ತು ಮಾದಕ ವಸ್ತು ವ್ಯಸನದ ವಿರುದ್ಧ ಪ್ರಮುಖ ಪ್ರಚಾರಾಂದೋಲನ ಆರಂಭವಾಗಿದೆ.

ದಕ್ಷಿಣ ಭಾರತದಲ್ಲೇ ಕೆರಳವನ್ನು ಮೊದಲ ಬಯಲು ಮಲವಿಸರ್ಜನೆ ಮುಕ್ತ ರಾಜ್ಯ ಎಂದು ಘೋಷಿಸಲಾಗಿದೆ.

ಕೇರಳ ಮೂಲಭೂತ ಸೌಕರ್ಯ ಬಂಡವಾಳ ನಿಧಿ ಕಾಯ್ದೆಗೆ ತಿದ್ದುಪಡಿ ತಂದು, ಆಮೂಲಕ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ 50,000 ಕೋಟಿ ರೂ.ನ್ನು ಬಜೆಟ್‌ನ ವ್ಯಾಪ್ತಿಯ ಹೊರಗೆ ಸಂಗ್ರಹಿಸಲು ಸಾಧ್ಯವಾಗುವಂತೆ ಮಾಡಲಾಗಿದೆ.

ಕಾನೂನು ಸುವ್ಯವಸ್ಥೆಯನ್ನು ಬಲಪಡಿಸಲು ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳಲಾಗಿದೆ. ಅಪರಾಧಗಳನ್ನು ಸಾಬೀತುಪಡಿಸಲು ಪೋಲೀಸರು ಸಾಮಾನ್ಯವಾಗಿ ಬಳಸುವ ಥರ್ಡ್‌ಡಿಗ್ರಿ ಕ್ರಮಗಳ ಬದಲಾಗಿ ಹೆಚ್ಚು ವೈಜ್ಞಾನಿಕ ಕ್ರಮಗಳನ್ನು ಅನುಸರಿಸಿ ತನಿಖೆನಡೆಸಲು ನಿರ್ದೇಶಿಸಲಾಗಿದೆ.

* 1–1–1997 ಕ್ಕಿಂತ ಮೊದಲು ಅರಣ್ಯ ಭೂಮಿಯನ್ನು ಹೊಂದಿದ್ದವರಿಗೆ ಮತ್ತು ಕೇಂದ್ರ ಸರಕಾರದಿಂದ ಅನುಮತಿ ಇರುವ ಹಾಗೂ ಅರಣ್ಯ ಇಲಾಖೆ ಹಾಗೂ ಕಂದಾಯ ಮೌಲ್ಯಮಾಪನ ಮುಗಿದಿರುವವರಿಗೆ ಭೂಮಿಯನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ. 881 ಹಳ್ಳಿಗಳಲ್ಲಿ 508 ಹಳ್ಳಿಗಳ ಪುನರ್‌ಭೂಸಮೀಕ್ಷೆ ಮುಕ್ತಾಯವಾಗಿದೆ, ಮತ್ತದನ್ನು ಜಾಲತಾಣದಲ್ಲಿ ಅಪಲೋಡ್ ಮಾಡಲಾಗಿದೆ. 50,000ಕ್ಕೂ ಹೆಚ್ಚು ಜನ ಇದರ ಪ್ರಯೋಜನ ಪಡೆದಿದ್ದಾರೆ.
* ರಾಜ್ಯವನ್ನು ಸಂಪೂರ್ಣ ವಿದ್ಯುದೀಕರಣ ಗೊಳಿಸಲು ಪ್ರಾಥಮಿಕ ಕೆಲಸಗಳನ್ನು ಆರಂಭಿಸಲಾಗಿದೆ.
* 14 ಜಿಲ್ಲಾ ಸಹಕಾರಿ ಬ್ಯಾಂಕುಗಳು ಮತ್ತು ಕೇರಳ ಸಹಕಾರೀ ಬ್ಯಾಂಕ್ ಸಹಭಾಗಿತ್ವದಲ್ಲಿ ಕೇರಳ ಬ್ಯಾಂಕ್ ಒಂದನ್ನು ತೆರೆಯಲು ಪ್ರಸ್ತಾಪಿಸಿದ್ದು, ತಜ್ಞರ ಸಮಿತಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ.

ರಾಜ್ಯಗಳ ಸುತ್ತ

ಭಾರತಿ ಗಾಂವ್ಕರ್

ಅರುಣಾಚಲ್ ಪೀಪಲ್ಸ್‌ಪಾರ್ಟಿ ಆಪಾದನೆ: 32 ಶಾಸಕರನ್ನು 'ಅಪಹರಿಸಿ' ಬಿಜೆಪಿ ಸರಕಾರ ಪ್ರತಿಷ್ಠಾಪನೆ

ಅರುಣಾಚಲ ಪ್ರದೇಶದಲ್ಲಿ ತನ್ನ 32 ಶಾಸಕರನ್ನು ಅಪಹರಿಸಿ ಬಿಜೆಪಿ ತನ್ನ ಸರಕಾರ ಸ್ಥಾಪಿಸಿದೆ ಎಂದು ಪೀಪಲ್ಸ್ ಪಾರ್ಟಿ ಆಫ್ ಅರುಣಾಚಲ(ಪಿಪಿಎ) ಆಪಾದಿಸಿದೆ. ಈಗ ಬಿಜೆಪಿ ಸರಕಾರದ ಮುಖ್ಯಮಂತ್ರಿಯಾಗಿರುವ ಪೇಮ ಖಂಡು ಸೇರಿದಂತೆ 32 ಶಾಸಕರು ಪಿಪಿಎ ಸದಸ್ಯರಾಗಿದ್ದವರು. ಅವರು ಬಿಜೆಪಿಗೆ ಪಕ್ಷಾಂತರ ಮಾಡಿದ್ದರಿಂದ ಈಗ ಅಲ್ಲಿ ಮೊದಲ ಬಾರಿಗೆ ಬಿಜೆಪಿ ಸರಕಾರ ಸ್ಥಾಪಿತವಾಗಿದೆ.

ಅಸ್ಸಾಂನಲ್ಲಿ ತನ್ನ ಚುನಾವಣಾ ಯಶಸ್ಸಿನ ನಂತರ ಬಿಜೆಪಿ ಈಶಾನ್ಯ ಭಾರತದಲ್ಲಿ ತನ್ನ ಪ್ರಭಾವ ವಿಸ್ತರಿಸಲು ಆ ಪ್ರದೇಶದ ಕೆಲವು ಪ್ರಾದೇಶಿಕ ಪಕ್ಷಗಳನ್ನು ಸೇರಿಸಿಕೊಂಡು ಅಖಿಲ ಭಾರತ ಮಟ್ಟದ ಎನ್‌ಡಿಎ ಮಾದರಿಯಲ್ಲಿ ಎನ್‌ಇಡಿಎ ರಚಿಸಿತು. ಅರುಣಾಚಲ ಪ್ರದೇಶದ ಪ್ರಾದೇಶಿಕ ಪಕ್ಷವಾದ ಪಿಪಿಎ ಕೂಡ ಈ ಮೈತ್ರಿಕೂಟ ಸೇರಿತು. ಆದರೆ ಈಗ ತನ್ನ ಸರಕಾರ ಸ್ಥಾಪಿಸಲು ಬಿಜೆಪಿ ತನ್ನದೇ ಮಿತ್ರಪಕ್ಷದ ಸರಕಾರವನ್ನು ಉರುಳಿಸಿರುವುದರ ಬಗ್ಗೆ ಈ ಮಿತ್ರಪಕ್ಷ ಆಕ್ರೋಶ ವ್ಯಕ್ತಪಡಿಸಿದೆ.

ಇದು ಬಿಜೆಪಿಯ ಪಿತೂರಿ ಎಂದು ಖಂಡಿಸಿರುವ ಪಿಪಿಎ ಅಧ್ಯಕ್ಷ ಕಾಪ್ಪ ಬೆಂಗಿಯ ಎನ್‌ಇಡಿಎ ಮೈತ್ರಿಕೂಟದ ಸಂಚಾಲಕ ಹಿಮಂತ ಶರ್ಮ ಈ ಪಿತೂರಿಯ ಮೂಕಪ್ರೇಕ್ಷಕರಾಗಿ ಉಳಿದರು ಎಂದು ಖೇದ ವ್ಯಕ್ತ ಪಡಿಸಿದ್ದಾರೆ. ಪಿಪಿಎಯನ್ನು ಒಂದು ಏಣಿಯಾಗಿ ಬಳಸಿಕೊಳ್ಳಲಾಗಿದ್ದು ಈ ನಡೆಯನ್ನು ಇನ್ನು ಸಹಿಸಿಕೊಳ್ಳಲಾಗದು, 2019 ಚನಾವಣೆಯ ವೇಳೆಗೆ ನಾವು ಒಂದು ಪ್ರಬಲ ಪ್ರಾದೇಶಿಕ ಪಕ್ಷವಾಗಲಿದ್ದೇವೆ ಎಂದು ಅವರು ಹೇಳಿದ್ದಾರೆ.

ಎನ್‌ಇಡಿಎ ಮೈತ್ರಿಕೂಟದ ಬಗ್ಗೆ ಕೂಟದ ಇತರ ಸದಸ್ಯಪಕ್ಷಗಳೊಂದಿಗೆ ಚರ್ಚಿಸುವುದಾಗಿ ಹೇಳಿದ ಅವರು ಮುಂದುವರೆದು ಬಹುತೇಕ ಮುಖಂಡರು ರಾಜ್ಯಕ್ಕೆ ಮುಖಂಡತ್ವ ಕೊಡಲಿಕ್ಕಲ್ಲ, ಲೂಟಿಮಾಡಲು ಅಧಿಕಾರ ಹಿಡಿದಿದ್ದಾರೆ, ಬಿಜೆಪಿ ಮತ್ತು ಪಿಪಿಎ ಯೊಂದಿಗೆ ಒಂದೇ ರೀತಿಯ ಸಂಬಂಧ ಹೊಂದಿರುವವರಿಗೆ ಪಾಟ ಕಲಿಸಲು ಬಹಳಷ್ಟು ಅಂಶಗಳು ತಮ್ಮ ಪಕ್ಷದ ಕೈಯಲ್ಲಿದೆ ಎಂದೂ ಹೇಳಿದ್ದಾರೆ.

ಪಶ್ಚಿಮ ಬಂಗಾಲ: ಬಲವಂತದ ಭೂಸ್ವಾಧೀನವನ್ನು ಪ್ರತಿಭಟಿಸಿದವರ ಮೇಲೆ ಗೋಲೀಬಾರ್

ಪಶ್ಚಿಮ ಬಂಗಾಲದ ದಕ್ಷಿಣ 24 ಪರಗಣ ಜಿಲ್ಲೆಯ ಭಂಗರ್ ಎಂಬಲ್ಲಿ ಜನವರಿ 17 ರಂದು ಬಲವಂತದ ಭೂಸ್ವಾಧೀನವನ್ನು ವಿರೋಧಿಸುತ್ತಿದ್ದ ಜನರ ಮೇಲೆ ಪೋಲೀಸ್ ಗೋಲೀಬಾರಿನಲ್ಲಿ ಇಬ್ಬರು ಮೃತರಾಗಿದ್ದಾರೆ. ಭಂಗರ್ ವಿಧಾನಸಭಾ ಕ್ಷೇತ್ರದ ಖಮರೈತ್, ಮಾಚ್ಚಿ ಭಂಗಾ, ಟೋನ, ಘಾಜೀಪುರ್ ಮುಮತಾದ ಹಳ್ಳಿಗಳ ಜನರು ವಿದ್ಯುತ್‌ಗ್ರಿಡ್ ಮತ್ತು ಹೈವೋಲ್ಟೇಜ್ ವಿದ್ಯುತ್ ಪ್ರಸರಣಕ್ಕಾಗಿ ಟಿಎಂಸಿ ಸರಕಾರ ಬಲವಂತದಿಂದ ಭೂಸ್ವಾಧೀನವನ್ನು ವಿರೋಧಿಸುತ್ತಿದ್ದಾರೆ. ಈ ಬಗ್ಗೆ ಮಾತುಕತೆ ನಡೆಸಬೇಕು ಎಂದು ಈ ಜನರು ಮತ್ತೆ–ಮತ್ತೆ ಕೇಳಿಕೊಂಡರೂ ಅದನ್ನು ಟಿಎಂಸಿ ಸರಕಾರ ಉಪೇಕ್ಷಿಸುತ್ತ ಬಂದಿದೆ. ಅದನ್ನು ಪ್ರತಿಭಟಿಸಿದಾಗ ಪೋಲೀಸ್ ದಮನಚಕ್ರ ನಡೆಸಿದ್ದರಿಂದ ಇಬ್ಬರು ರೈತರು ಬಲಿಯಾಗಿದ್ದಾರೆ.

ಇದನ್ನು ಬಲವಾಗಿ ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೂಡಲೇ ಜನರೊಡನೆ ಮಾತುಕತೆ ನಡೆಸಿ ಈ ಪ್ರಶ್ನೆಯನ್ನು ಇತ್ಯರ್ಥಗೊಳಿಸಬೇಕು ಎಂದು ಟಿಎಂಸಿ ಸರಕಾರವನ್ನು ಆಗ್ರಹಿಸಿದೆ, ಪೋಲೀಸ್ ಗೋಲೀಬಾರಿಗೆ ಬಲಿಯಾದವರ ಕುಟುಂಬಗಳಿಗೆ ತಲಾ 10ಲಕ್ಷ ರೂ. ಪರಿಹಾರ ನೀಡಬೇಕು ಎಂದು ಆಗ್ರಹಿಸಿದೆ.

ಈ ಭೂಸ್ವಾಧೀನದಲ್ಲಿ 2013ರ ಭೂಸ್ವಾಧೀನ ಕಾಯ್ದೆಯ ಮಾರ್ಗದರ್ಶಕ ಸೂತ್ರಗಳನ್ನು ಪಾಲಿಸಿಲ್ಲ, ಅಥವ ಭಾರತ ಸರಕಾರದ ವಿದ್ಯುತ್ ಮಂತ್ರಾಲಯದ ವಿದ್ಯುತ್ ಪ್ರಸರಣಕ್ಕೆ ದಾರಿಯ ಹಕ್ಕು ಕುರಿತಂತೆ ಉಂಟಾಗಿರುವ ನಷ್ಟಗಳಿಗೆ ಪರಿಹಾರ ಪಾವತಿಯ ಮಾರ್ಗದರ್ಶಕ ಸೂತ್ರಗಳನ್ನೂ ಪಾಲಿಸಿಲ್ಲ. ಸಾಮಾಜಿಕ ಪರಿಣಾಮಗಳ ಅಥವ ಪರಿಸರದ ಮೇಲೆ ಪರಿಣಾಮಗಳ ವಿಶ್ಲೇಷಣೆಯನ್ನೂ ನಡೆಸಿಲ್ಲ, ಸಂಬಂಧಪಟ್ಟವರ ಒಪ್ಪಿಗೆಯನ್ನು ಪಡೆಯಬೇಕೆನ್ನುವ ಕ್ರಮವನ್ನೂ ಅನುಸರಿಸಿಲ್ಲ.

ಅಷ್ಟೇ ಅಲ್ಲ, ಆ ಭೂಮಿ ಬಹುಬೆಳೆಯ ಫಲವತ್ತಾದ ಭೂಮಿಯಾದ್ದರಿಂದ ಆಹಾರ ಭದ್ರತೆಯನ್ನು ಕುರಿತ ನಿಯಮವನ್ನೂ ಉಲ್ಲಂಘಿಸಲಾಗಿದೆ. ಈ ಹಳ್ಳಿಗಳ ಜನಗಳು ಈ ಗ್ರಿಡ್ ಮತ್ತು ಹೈವೋಲ್ಟೇಜ್ ಟ್ರಾನ್ಸ್‌ಮಿಶನ್ ಜನಗಳ ಆರೋಗ್ಯದ ಮೇಲೂ 'ದುಷ್ಪರಿಣಾಮ ಬೀರಬಹದು ಎಂಬ ಆತಂಕದಲ್ಲಿದ್ದರು. ಈ ಎಲ್ಲ ಆತಂಕಗಳನ್ನು ಪರಿಹರಿಸಲು ಸರಕಾರ ಪ್ರಯತ್ನಗಳನ್ನು ನಡೆಸಬೇಕು, ಭೂಮಿಯನ್ನು ಬಲವಂತದಿಂದ ಸ್ವಾಧೀನ ಪಡಿಸಿಕೊಳ್ಳಲು ದಮನಕಾರೀ ಕ್ರಮಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.



ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಪಶ್ಚಿಮ ಬಂಗಾಲದ ದಕ್ಷಿಣ 24 ಪರಗಣ ಜಿಲ್ಲೆಯ ಭಂಗರ್‌ನಲ್ಲಿ ಇಬ್ಬರ ಸಾವಿಗೆ ಕಾರಣವಾದ ಪೋಲೀಸ್ ಗೋಲೀಬಾರನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ.

ಟಿಎಂಸಿ ಸರಕಾರ ವಿದ್ಯುತ್ ಗ್ರಿಡ್‌ಗೆ ಭೂಸ್ವಾಧೀನವನ್ನು ಪ್ರತಿಭಟಿಸುತ್ತಿರುವವರ ವಿರುದ್ಧ ಬಲಪ್ರಯೋಗವನ್ನು ನಿಲ್ಲಿಸಬೇಕು, ಅವರೊಡನೆ ಮಾತುಕತೆ ಆರಂಭಿಸಿ ಸಮಸ್ಯೆಯನ್ನು ಇತ್ಯರ್ಥಗೊಳಿಸಬೇಕು ಎಂದಿರುವ ಪೊಲಿಟ್‌ಬ್ಯುರೊ ಬಲವಂತದ ಭೂಸ್ವಾಧೀನ ಸಲ್ಲದು ಎಂದು ಹೇಳಿದೆ.ಸ

ಅನಾಣ್ಯೀಕರಣ, ಚಿಟ್‌ಫಂಡ್ ಗೋಲ್‌ಮಾಲ್ ಮತ್ತು ಪಶ್ಚಿಮ ಬಂಗಾಲದಲ್ಲಿಯೂ ಹರಡುತ್ತಿರುವ ಕೋಮುವಾದದ ವಿರುದ್ಧ ಉತ್ತರ 24 ಪರಗಣಾ ಜಿಲ್ಲೆಯ ಬಿಧಾನ್‌ನಗರದಲ್ಲಿ ಜನವರಿ 18ರಂದು ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ ಬೃಹತ್ ಸಾರ್ವಜನಿಕ ರ್‍ಯಾಲಿ ನಡೆಯಿತು. ಇದನ್ನು ಉದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ, ಹಿರಿಯ ಮುಖಂಡರಾದ ಬಿಮನ್ ಬಸು ಮತ್ತು ಗೌತಮ್ ದೇಬ್ ಹಾಗೂ ಜಮ್ಮು–ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿ ಮಾತನಾಡಿದರು.



ಮಾಣಿಕ್ ಸರ್ಕಾರ್ ಪ್ರವಾಸ - ಕೆಲವು ನೆನಪುಗಳು

– ಎಚ್.ಆರ್. ನವೀನ್ ಕುಮಾರ್

ತ್ರಿಪುರದ ಮುಖ್ಯ ಮಂತ್ರಿ ಮತ್ತು ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಸಂಗಾತಿ ಮಾಣಿಕ್ ಸರ್ಕಾರ್ ರವರು ಜನವರಿ 15 ರಿಂದ 17 ರವರೆಗೆ ರಾಜ್ಯದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕರ್ನಾಟಕದ ಎಡ ಮತ್ತು ಪ್ರಗತಿಪರ ಚಳುವಳಿಗೆ ಮತ್ತು ಕಾರ್ಯಕರ್ತರಿಗೆ ಒಂದು ರೀತಿಯ ಸ್ಫೂರ್ತಿ ಚೈತನ್ಯವನ್ನು ನೀಡಿದ್ದಾರೆ. ಅವರ ಸರಳತೆ, ಜನಪರವಾದ ಆಡಳಿತ, ಮತ್ತು ಮಾನವ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಒಂದು ರಾಜ್ಯವನ್ನು ಮುನ್ನಡೆಸುತ್ತಿರುವ ಕಣ್ಣೋಟಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ಅಲ್ಲಿ ಇಲ್ಲಿ ಕೆಲವು ಪತ್ರಿಕೆಗಳಲ್ಲಿ ಓದಿದ್ದಷ್ಟೆ ಆದರೆ ಅವೆಲ್ಲವನ್ನು ನೇರವಾಗಿ ಸಾಕ್ಷೀಕರಿಸುವ ಒಂದು ಸಂದರ್ಭ ರಾಜ್ಯದ ಜನತೆಗೆ ಒದಗಿ ಬಂದಿತ್ತು. ನಾನು ಸತತವಾಗಿ ಮೂರು ದಿನಗಳ ಕಾಲ ಅವರ ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳನ್ನು ಸಾಮಾಜಿಕ ಜಾಲತಾಣದಲ್ಲಿ ನೇರ ಪ್ರಸಾರಮಾಡುವ ಉದ್ದೇಶದಿಂದ ಅವರೊಂದಿಗೆ ತೊಡಗಿಸಿಕೊಳ್ಳುವ ಅವಕಾಶ ಸಿಕ್ಕಿತ್ತು. ಈ ಸಂದರ್ಭಗಳಲ್ಲಿ ನಡೆದ ಕೆಲವು ಘಟನೆಗಳನ್ನು ಮಾತ್ರ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಅಂದು ಜನವರಿ 16 ಹಿಂದಿನ ದಿನ ಕೂಡಲ ಸಂಗಮದಲ್ಲಿ ರಾಷ್ಟ್ರೀಯ ಬಸವ ಕೃಷಿ ಪ್ರಶಸ್ತಿಯನ್ನು ಸ್ವೀಕರಿಸಿ ಬಾಗಲಕೋಟೆಯಿಂದ ಹೊಸಪೇಟೆಗೆ ಕಾರಿನಲ್ಲಿ ಬಂದು ಸರ್ಕಾರಿ ವಸತಿ ಗೃಹದಲ್ಲಿ ಉಳಿದುಕೊಂಡಿದ್ದರು. ಬೆಳಿಗ್ಗೆ 11 ಕ್ಕೆ ಸರಿಯಾಗಿ ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದವರು ಏರ್ಪಡಿಸಿದ್ದ "ಪೊಲಿಟಿಕಲ್ ಎಕಾನಮಿ ಆಫ್ ತ್ರಿಪುರ" ಎಂಬ ವಿಷಯದ ಮೇಲಿನ ವಿಶೇಷ ಉಪನ್ಯಾಸ ನಂತರ, ಚಹ ಕುಡಿಯಲೆಂದು ವಿ.ಸಿ ಯವರ ಚೇಂಬರ್‌ಗೆ ಹೋದರು. ಅವರ ಮುಂದಿನ ಕಾರ್ಯಕ್ರಮವಿದ್ದದ್ದು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಸಿಪಿಐ(ಎಂ) ಏರ್ಪಡಿಸಿದ್ದ ಎಡ ಪರ್ಯಾಯ ದೋರಣೆಗಳಿಗಾಗಿನ ಬಹಿರಂಗ ಸಭೆಯನ್ನು ಉಧ್ಘಾಟಿಸುವುದು.

ಯಾವುದೇ ಒಂದು ರಾಜ್ಯದ ಮುಖ್ಯ ಮಂತ್ರಿಗಳು ಇನ್ನೊಂದು ರಾಜ್ಯಕ್ಕೆ ಬಂದಾಗ ಕೈಗೊಳ್ಳಬೇಕಾದ ಎಲ್ಲ ರೀತಿಯ ಭದ್ರತಾ ಕ್ರಮಗಳನ್ನು ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಯ ಆಡಳಿತ ವರ್ಗ ಕೈಗೊಂಡಿತ್ತು. ಅದರ ಪ್ರಕಾರ ಹಂಪಿ ವಿಶ್ವವಿದ್ಯಾಲಯದಿಂದ ಗಂಗಾವತಿಗೆ ಕಾರಿನ ಮೂಲಕ ತೆರಳಲು ಪೋಲೀಸ್ ಇಲಾಖೆ ಒಂದು ಮಾರ್ಗವನ್ನು ನಿಗದಿಪಡಿಸಿತ್ತು. ಆದರೆ ಮತ್ತೊಂದು ಮಾರ್ಗದ ಕಂಪ್ಲಿ ಪ್ರದೇಶದಲ್ಲಿ ಸಾವಿರಾರು ಜನ ಕಾರ್ಮಿಕರು, ರೈತರು ಮಾಣಿಕ್ ಸರ್ಕಾರ್‌ರವರನ್ನು ಸ್ವಾಗತಿಸಲು ಸಜ್ಜಾಗಿದ್ದರು. ಇದ–ಕ್ಕೆ ಪೋಲೀಸಿನವರು ಅನುಮತಿ ನೀಡಿರಲಿಲ್ಲ. ಈ ವಿಷಯವನ್ನು ಸಂಗಾತಿ ಮಾಣಿಕ್ ಸರ್ಕಾರ್‌ರವರಿಗೆ ಸ್ಥಳಿಯ ಮುಖಂಡರು ತಿಳಿಸಿದ ಕೂಡಲೆ ಭದ್ರತೆಯ ಜವಾಬ್ದಾರಿ ಹೊತ್ತಿದ್ದ ಎಎಸ್‌ಪಿ ಯವರಿಗೆ ಕಂಪ್ಲಿ ಮಾರ್ಗವಾಗಿಯೇ ಹೋಗಲು ಸೂಚನೆ ನೀಡಿ ನಮ್ಮ ಜನರು ನಮಗಾಗಿ ಕಾಯುತ್ತಿದ್ದಾರೆ. ನಾವು ಅದೇ ಮಾರ್ಗವಾಗಿಯೇ ಹೋಗೋಣ ಎಂದರು. ಅಂದರೆ ಒಬ್ಬ ನಿಜವಾದ ಜನನಾಯಕರಿಗೆ ಭದ್ರತಾ ಪ್ರಶ್ನೆಗಿಂತ ತನ್ನ ಜನರಿಗೆ ನಾನು ಸ್ಪಂದಿಸಬೇಕು ಎನ್ನುವುದನ್ನು ತೋರಿಸಿಕೊಟ್ಟರು. ಇವರಿಗಾಗಿಯೇ ಬೆಳಗಿನಿಂದ ಕಾಯ್ದಿದ್ದ ಜನ ಇವರ ಆಗಮನ ಕಂಡು ಹರ್ಷೋಧ್ಘಾರಗೊಂಡು ಭವ್ಯ ಸ್ವಾಗತ ನೀಡಿದರು. ಅಲ್ಲಿಂದ ನೂರಾರು ದ್ವಿಚಕ್ರ ವಾಹನಗಳಲ್ಲಿ ಕೆಂಬಾವುಟಗಳನ್ನಿಡಿದ್ದಿದ್ದ ಪಕ್ಷದ ಕಾರ್ಯಕರ್ತರು ಮುಖ್ಯಮಂತ್ರಿಗಳನ್ನು ಹಿಂಬಾಲಿಸಿದರು.

ಮಾಣಿಕ್ ಸರ್ಕಾರ್ ರವರು ಗಂಗಾವತಿ ಪ್ರವೇಶಿಸುವುದರೊಳಗಾಗಿ ಇಸ್ಲಾಮ್‌ಪುರ ವೃತ್ತದಿಂದ ಸುಮಾರು 10 ಸಾವಿರಕ್ಕೂ ಹೆಚ್ಚು ಜನ ನಗರದ ಎಲ್ಲಾ ಪ್ರಮುಖ ಬೀದಿಗಳಲ್ಲೂ ಮೆರವಣಿಗೆ ನಡೆಸಿ ಬಹಿರಂಗ ಸಭೆ ಆಯೋಜಿಸಿದ್ದ ಜೂನಿಯರ್ ಕಾಲೇಜು ಮೈದಾನಕ್ಕೆ ಬಂದು ತಲುಪಿದ್ದರು. ಅವರನ್ನು ಸ್ವಾಗತಿಸಲೆಂದೇ ನೂರಾರು ಕೆಂಪು ಸಮವಸ್ತ್ರದಾರಿ ಸ್ವಯಂಸೇವಕರು ರಸ್ತೆಯ ಎರಡೂ ಬದಿಯಲ್ಲಿ ಕೆಂಬಾವುಟಗಳನ್ನಿಡಿದು ನಿಂತಿದ್ದರು. ನೆರದಿದ್ದವರಿಗೆಲ್ಲ ಮಾಣಿಕ್ ಸರ್ಕಾರ್‌ರವರನ್ನು ನೋಡಬೇಕು ಮತ್ತು ಅವರ ಮಾತುಗಳನ್ನು ಕೇಳಬೇಕು. ಜೊತೆಗೆ ತ್ರಿಪುರದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿರುವ ಎಡರಂಗ ಸರ್ಕಾರ ಮಾಡಿರುವ ಸಾಧನೆಗಳನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಎದ್ದು ಕಾಣುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಪಕ್ಷದ ಕೊಪ್ಪಳ ಜಿಲ್ಲಾಸಮಿತಿ ವಿಶೇಶವಾಗಿ ಗಂಗಾವತಿ ತಾಲ್ಲೂಕು ಸಮಿತಿ ನಡೆಸಿದ ವ್ಯವಸ್ಥಿತ ಪ್ರಚಾರ. ನಮ್ಮ ಚಳುವಳಿ ಮತ್ತು ಸಂಪರ್ಕವಿರುವ ಹಳ್ಳಿಗಳಲ್ಲದೆ ತಾಲ್ಲೂಕಿನ ಬಹುತೇಕ ಹಳ್ಳಿಗಳಿಗೆ ಮಾಣಿಕ್ ಸರ್ಕಾರ್‌ರವರ ವಿಚಾರಗಳನ್ನು ತಿಳಿಸಿ ಸಭೆಗಳನ್ನು ನಡೆಸಿ ಕರಪತ್ರಗಳನ್ನು ಹಂಚಿದ್ದರು. ಮಾತ್ರವಲ್ಲ ತ್ರಿಪುರದ ಸಾಧನೆಗಳನ್ನೊಳಗೊಂಡ ಬ್ಯಾನರ್‌ಗಳು, ಕಟೌಟ್‌ಗಳು, ಕೆಂಬಾವುಟಗಳು ಎಲ್ಲರನ್ನು ಕೈಬೀಸಿ ಕರೆಯುತ್ತಿದ್ದವು.

ಇದೇ ಸಂದರ್ಭದಲ್ಲಿ ಇನ್ನೊಂದು ಘಟನೆಯನ್ನು ನೆನಪಿಸಿಕೊಳ್ಳಬೇಕು. ಹಂಪಿ ವಿಶ್ವವಿದ್ಯಾಲಯದ ಕಾರ್ಯಕ್ರಮವನ್ನು ಮುಗಿಸಿ ಗಂಗಾವತಿಗೆ ಬರುವುದರೊಳಗಾಗಿ ಗಂಟೆ ಮಧ್ಯಾಹ್ನ ಸುಮಾರು 1.30 ಆಗಿತ್ತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಜೊತೆ ಪ್ರಯಾಣಿಸುತ್ತಿದ್ದ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಊಟ ಮುಗಿಸಿ ಆನಂತರ ಬಹಿರಂಗ ಸಭೆಯಲ್ಲಿ ಮಾತನಾಡುತ್ತೀರ ಎಂದು ಕೇಳಿದ್ದಕ್ಕೆ, ಅವರು ಇಲ್ಲ ಜನ ಕಾಯುತ್ತಿದ್ದಾರೆ, ಮೊದಲು ಬಹಿರಂಗ ಸಭೆ ನಂತರ ಊಟ ಎಂದು ಹೇಳಿ ನೇರವಾಗಿ ಬಹಿರಂಗ ಸಭೆ ವೇದಿಕೆಯೇರಿದರು. ನಂತರ ಬಹಿರಂಗ ಸಭೆಯಲ್ಲಿ ಮಾತನಾಡಿ ವಾಪಸ್ ಹೊಸಪೇಟೆಗೆ ಬಂದು ಸೇರುವಾಗ ಸಮಯ ಸುಮಾರು 4 ಗಂಟೆಯಾಗಿತ್ತು ಆಗ ಅವರು ಊಟ ಮಾಡಿದರು. ಅಂದರೆ ವೈಯಕ್ತಿಕ ಹಿತಾಸಕ್ತಿಗಳಿಗಿಂತ ಜನತೆಯ ಹಿತಾಸಕ್ತಿಯನ್ನು ಮುಖ್ಯವಾಗಿಸಿಕೊಂಡ ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು, ಮುಖಂಡರು, ಮುಖ್ಯಮಂತ್ರಿಗಳು ಮಾತ್ರ ಈ ರೀತಿ ಯೋಚಿಸಲು ಮತ್ತು ನಡೆದುಕೊಳ್ಳಲು ಸಾದ್ಯ ಎಂಬುದನ್ನು ಅಕ್ಷರಶಃ ತೋರಿಸಿಕೊಟ್ಟರು. ●

ಹಂಪಿ ವಿ.ವಿ........

ಪುಟ 16 ರಿಂದ

ನೀರಾವರಿ ವ್ಯವಸ್ಥೆ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯಲ್ಲಿ ಖರೀದಿ ಮುಂತಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಭೂಸುಧಾರಣೆ, ಕೃಷಿ ಉತ್ಪಾದನೆ–ಉತ್ಪಾದಕತೆಗಳ ಹೆಚ್ಚಳದಿಂದ ಗ್ರಾಮೀಣ ಬಡವರ ಜೀವನ ಮಟ್ಟ ಉತ್ತಮಗೊಳ್ಳಲಾರಂಭಿಸಿತು. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಜತೆ ಶಿಕ್ಷಣ ಆರೋಗ್ಯ ಸೇವೆ ಸಾರ್ವತ್ರಿಕಗೊಳಿಸಲು ಹೆಚ್ಚಿನ ಆದ್ಯತೆ ಕೊಡಲಾಯಿತು. ಶಿಕ್ಷಣ ಮತ್ತು ಆರೋಗ್ಯ ಅಭಿವೃದ್ಧಿಯ ಎರಡು ಕಾಲುಗಳು ಇದ್ದಂತೆ. ಇದನ್ನು ಸರಕಾರವೇ ನಿರ್ವಹಿಸಬೇಕು ಎಂಬ ನೀತಿ ಅನುಸರಿಸಿದೆವು ಎಂದು ಕಾ. ಸರ್ಕಾರ್ ಎಡರಂಗದ ಅಭಿವೃದ್ಧಿ ಕಣ್ಣೋಟವನ್ನು ವಿವರಿಸಿದರು.

ಇದರ ಫಲವಾಗಿ ಶಿಕ್ಷಣ ಮತ್ತು ಆರೋಗ್ಯದಲ್ಲಿ ಮತ್ತು ಆ ಮೂಲಕ ಮಾನವ ಅಭಿವೃದ್ಧಿ ಸೂಚಕಗಳಲ್ಲಿ ಅಪಾರ ಪ್ರಗತಿ ಸಾಧಿಸಿದ್ದೇವೆ. (ವಿವರಗಳು ಪುಟ 9 ರಲ್ಲಿವೆ–ಸಂ.)ಈಗ ದೇಶದಲ್ಲೇ ಒಟ್ಟು ಸಾಕ್ಷರತೆಯಲ್ಲಿ ಮತ್ತು ಸಾಕ್ಷರತೆಯಲ್ಲಿ ಅತ್ಯಂತ ಕಡಿಮೆ ಲಿಂಗತಾರತಮ್ಯ ಇರುವ ರಾಜ್ಯಗಳಲ್ಲಿ ಮೊದಲನೆಯದು ಆಗಿದೆ. ಯಾವುದೇ ಕೃಷಿ–ಸಂಬಂಧಿತ ರೈತ ಆತ್ಮಹತ್ಯೆಗಳಿಲ್ಲದ ರಾಜ್ಯವಾಗಿದೆ. ಇದರ ಜತೆಗೆ ನಾವು ಕೈಗಾರಿಕೀಕರಣದತ್ತ ಗಮನ ಹರಿಸಿದ್ದೇವೆ. ಕೃಷಿ/ಆಹಾರ ಸಂಸ್ಕರಣ, ಗ್ಯಾಸ್ ಅನ್ವೇಷಣೆ, ರಬ್ಬರ್ ಉತ್ಪನ್ನಗಳು, ಬಿದಿರು ಉತ್ಪನ್ನಗಳ ಕ್ಷೇತ್ರಗಳಲ್ಲಿ ಕೈಗಾರಿಕೆಗಳನ್ನು ಬೆಳೆಸುವ ಕೆಲಸದಲ್ಲಿ ತೊಡಗಿದ್ದೇವೆ ಎಂದು ಕಾ. ಸರ್ಕಾರ್ ವಿವರಿಸಿದರು.

ನಿಮಗೆ ಉನ್ನತ ಶಿಕ್ಷಣ ಪಡೆಯುವ ಅವಕಾಶ ಸಿಗಲಿಲ್ಲ ಎಂದಿರಿ. ಬಹುಶಃ ನೀವು ಉನ್ನತ ಶಿಕ್ಷಣ ಪಡೆದರೆ ಎಲ್ಲೋ ಅಧ್ಯಾಪಕರಾಗಿರುತ್ತಿದ್ದೀರಿ. ನಿಮಗೆ ಅದು ವೈಯಕ್ತಿಕವಾಗಿ ನಷ್ಟವಾದರೂ, ತ್ರಿಪುರಾ ಮತ್ತು ದೇಶಕ್ಕೆ ಒಬ್ಬ ಸರಳ ಪ್ರಾಮಾಣಿಕ ಮಾದರಿ ಆದರ್ಶ ರಾಜಕಾರಣಿಯನ್ನು, ಒಂದು ಪರ್ಯಾಯ ಅಭಿವೃದ್ಧಿ ಮಾದರಿಯನ್ನು ಕೊಟ್ಟಿತು ಎಂದು ನೆನೆಸಿಕೊಂಡರೆ ಆಗಿದ್ದು ಒಳ್ಳೆಯದೇ ಆಯಿತು ಎಂದು ನನಗನಿಸುತ್ತದೆ ಎಂದು ಕುಲಪತಿ ಡಾ. ಮಲ್ಲಿಕಾ ಘಂಟಿ ಎಂದು ಹಾಸ್ಯಮಯವಾಗಿ ಕಾ. ಸರ್ಕಾರ್ ಅವರನ್ನು ಉದ್ದೇಶಿಸಿ ಮಾತನಾಡಿ ಶ್ಲಾಘಿಸಿದರು. ●



ಕೃಷಿ ಕೂಲಿಕಾರರಿಂದ 'ಅಖಿಲ ಭಾರತ ದಲಿತರ ಹಕ್ಕುಗಳ ದಿನ'

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (ಎಐಎಡಬ್ಲ್ಯೂಯು) ಕೇಂದ್ರ ಸಮಿತಿಯು ಜನವರಿ 17 ಅಖಿಲ ಭಾರತ ದಲಿತರ ಹಕ್ಕುಗಳ ದಿನವಾಗಿ ಆಚರಿಸಲು ಕರೆ ನೀಡಿತ್ತು. ಜನವರಿ 17, 2016ರಂದು ಹೈದರಾಬಾದ್ ವಿಶ್ವವಿದ್ಯಾಲಯದ ದಲಿತ ಪ್ರತಿಭಾನ್ವಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲ ಜಾತಿ ತಾರತಮ್ಯ ಮತ್ತು ದೌರ್ಜನ್ಯಕ್ಕೆ ಒಳಗಾಗಿ, ತೀವ್ರವಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಈ ಘಟನೆಯಿಂದ ದೇಶದ ವಿದ್ಯಾರ್ಥಿ ಸಮೂಹ ಆಘಾತಕ್ಕೆ ಒಳಗಾಗಿತ್ತು. ದೇಶಾದ್ಯಂತ ವ್ಯಾಪಕ ಪ್ರತಿಭಟನೆಗಳು ನಡೆದಿದ್ದವು. ಆದರೆ, ತೆಲಂಗಾಣ ರಾಜ್ಯ ಸರ್ಕಾರವೇ ಆಗಲೀ, ಕೇಂದ್ರದ ಬಿಜೆಪಿ ಸರ್ಕಾರವೇ ಆಗಲಿ ಸ್ಪಂದಿಸಲಿಲ್ಲ. ರೋಹಿತ್ ವೇಮುಲರವರ ಸಾವಿಗೆ ಕಾರಣರಾದವರನ್ನು ಇದುವರೆಗೂ ಬಂಧಿಸಲಿಲ್ಲ. ಎಫ್‌ಐಆರ್‌ನಲ್ಲಿ ಹೆಸರಿಸಲಾದವರು ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಮುಖ್ಯ ಆರೋಪಿ ವಿಶ್ವವಿದ್ಯಾಲಯದ ಉಪಕುಲಪತಿ ವಿರುದ್ಧ ಯಾವುದೇ ಕಾನೂನಾತ್ಮಕ, ಆಡಳಿತಾತ್ಮಕ ಕ್ರಮವನ್ನು ಜರುಗಿಸಲಿಲ್ಲ. ದೇಶ ಮತ್ತು ರಾಜ್ಯದಲ್ಲಿ ಇಂದು ದಲಿತರು ಅನುಭವಿಸುತ್ತಿರುವ ಅವಮಾನ, ದಮನ, ದೌರ್ಜನ್ಯಗಳಿಗೆ ವೇಮುಲ ಸಾವು ಒಂದು ಸಂಕೇತ ಹಾಗೂ ಸಾಕ್ಷಿಯಾಗಿದ್ದಾರೆ.

ಸ್ಥಳೀಯ ಬೇಡಿಕೆಗಳನ್ನು ಒಳಗೊಂಡು ಪ್ರಮುಖ 17 ಬೇಡಿಕೆಗಳನ್ನೊನ್ನು ಮುಂದಿಟ್ಟು 'ಅಖಿಲ ಭಾರತ ದಲಿತರ ಹಕ್ಕುಗಳ ದಿನ' ಎಂದು ಆಚರಿಸಿದ್ದು, ವಿವಿಧ ದಲಿತ ಹಾಗೂ ಕೂಲಿಕಾರ ಸಂಘಟನೆಗಳು ರಾಜ್ಯದಲ್ಲಿ ವಿವಿಧೆಡೆ ಆಚರಣೆ ಮಾಡಿದ್ದಾರೆ.

ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿ, ಮಳವಳ್ಳಿ, ಮದ್ದೂರು, ಉಡುಪಿ ಜಿಲ್ಲೆಯ ಕುಂದಾಪುರ, ಯಾದಗಿರಿ, ಕಲಬುರಗಿ ಜಿಲ್ಲಾಧಿಕಾರಿ ಕಛೇರಿ, ಶಹಪುರ, ಕೊಪ್ಪಳ, ಗದಗ ಜಿಲ್ಲೆಯ ರೋಣ, ತುಮಕೂರಿನ ಪಾವಗಡ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಬೀದರ್ ಜಿಲ್ಲೆಯ ಹುಮ್ನಾಬಾದ್, ಬಳ್ಳಾರಿ ಜಿಲ್ಲೆಯ ಸಿರಗುಪ್ಪ, ರಾಯಚೂರು, ಲಿಂಗಸಗೂರು, ಮತ್ತಿತರ ಕಡೆಗಳಲ್ಲಿ ತಾಲ್ಲೂಕು ಹಾಗೂ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಬೆಳಿಗ್ಗಿನಿಂದ ಸಂಜೆಯವರೆಗೆ ಧರಣಿ ನಡೆಸುವ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ವರದಿ : ಕೆ. ಹನುಮೇಗೌಡ ●

ಗ್ರಾಮ ಪಂಚಾಯಿತಿ ನೌಕರರ ಧರಣಿ ಸತ್ಯಾಗ್ರಹ ಮುಕ್ತಾಯ



ಜನವರಿ 16ನೇ ತಾರೀಖಿನಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಗ್ರಾಪಂ ನೌಕರರ 3ನೇ ದಿನದ ಅಹೋರಾತ್ರಿ ಅನಿರ್ಧಿಷ್ಟ ಧರಣಿ ಸತ್ಯಾಗ್ರಹವು ಜನವರಿ 18ರಂದು ಅಂತ್ಯಗೊಂಡಿದೆ.

ಕನಿಷ್ಠ ವೇತನ 18 ಸಾವಿರಕ್ಕಾಗಿ, ಪಂಚಾಯಿತಿ ನೌಕರರ ಖಾಯಮಾತಿಗಾಗಿ, ಕಾರ್ಯದರ್ಶಿ ಹುದ್ದೆ ಗ್ರೇಡ್–2 ಹುದ್ದೆ ಶೇ.70ರಿಂದ ಶೇ.100ಕ್ಕೆ ಹಾಗೂ ಲೆಕ್ಕ ಸಹಾಯಕರ ಹುದ್ದೆ ಶೇ.30ರಿಂದ ಶೇ.50ಕ್ಕೆ ಏರಿಸಬೇಕೆಂದು ಎಲ್ಲಾ ನೌಕರರಿಗೂ ಭವಿಷ್ಯ ನಿಧಿ, ಜನಶ್ರೀ ಭೀಮಾ ಯೋಜನೆ, ಸೇವಾ ಪುಸ್ತಕ, ರಜೆ ಸೌಲಭ್ಯ ಮಂಜೂರಾತಿಗಾಗಿ ಕರವಸೂಲಿಗಾರರ ಜೇಷ್ಠಾತಾ ಪಟ್ಟಿ ಅಂತಿಮಗೊಳಿಸಿ ಗ್ರೇಡ್–2 ಕಾರ್ಯದರ್ಶಿ ಹಾಗೂ ಲೆಕ್ಕ ಸಹಾಯಕ ಹುದ್ದೆಗೆ ಬಡ್ತಿ ನೀಡಬೇಕೆಂದು ಪ್ರತಿಭಟನೆ ಮೂಲಕ ಆಗ್ರಹಿಸಿದರು.

ವಿಜಯಪುರ ಜಿಲ್ಲೆಯಲ್ಲಿ ನಡೆದ ಪ್ರತಿಭಟನೆ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಕೆ.ಬಿ.ಶಿವುಕುಮಾರ ಅವರ ಆಶ್ವಾಸನೆಯೊಂದಿಗೆ ಹಾಗೂ ಉಪಕಾರ್ಯದರ್ಶಿಗಳಾದ ಟಿ.ಎ. ಶಶಿಧರ ಅವರ ಲಿಖಿತ ಭರವಸೆಯೊಂದಿಗೆ ಹೋರಾಟವನ್ನು ಮುಕ್ತಾಯ ಗೊಳಿಸಲಾಯಿತು. ಫೆಬ್ರವರಿ ಮೊದಲ ವಾರದಲ್ಲಿ ಸಭೆ ಹಮ್ಮಿಕೊಂಡು ಸದರಿ ವಿಷಯದ ಕುರಿತು ಚರ್ಚಿಸಿ ಸಮಸ್ಯೆಗಳನ್ನು ಸರಿಪಡಿಸುವುದಾಗಿ ಹೇಳಿದರು.

ಇದಕ್ಕೂ ಪೂರ್ವದಲ್ಲಿ ಜಿಲ್ಲಾ ಪಂಚಾಯಿತಿ ಜಿಲ್ಲಾಧಕ್ಷೆ ನೀಲಮ್ಮ ಮೇಟಿ ಮಾತನಾಡಿ, ಸಮಾನ್ಯ ಸಭೆಯಲ್ಲಿ ಬೇಡಿಕೆಗಳ ಬಗ್ಗೆ ಚರ್ಚಿಸಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ ಕ್ರಮಗೊಳ್ಳಲು ಸೂಚಿಸುತ್ತೇನೆಂದು ಹೇಳಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹಾಗೂ ಕಾರ್ಯದರ್ಶಿ ಜಿಲ್ಲಾಧ್ಯಕ್ಷರಾದ ಎಸ್.ಐ.ಗದಗಿನ ಮಠ ಹಾಗೂ ಜಿಲ್ಲಾ ಮುಖಂಡರಾದ ಅಶೋಕ ಗಲಗಲಿಯವರು ಈ ಸಂದರ್ಭದಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾದ್ಯಕ್ಷರಾದ ಅಣ್ಣರಾಯ ಈಳಗೇರ ಗ್ರಾ.ಪಂ ರಾಜ್ಯ ಉಪಾಧ್ಯಕ್ಷರು ಭೀಮಶಿ ಕಲಾದಗಿ, ಎಮ್.ಕೆ. ಗುಡಿಮನಿ, ಎಸ್.ಎಸ್. ನಾಲ್ಕಮಾನ, ರಂಗಪ್ಪ ದಳವಾಯಿ, ರಾಜು ಜಾಧವ, ರಫೀಕ ವಾಲಿಕಾರ, ಇಸಾಕ್ ಜಮಾದಾರ, ಎಸ್. ಎಚ್.ಜಮಾದಾರ, ಎಮ್.ಕೆ. ಚಳ್ಳಗಿ, ಕುಮಾರ ರಾಠೋಡ, ಸೋಮಲಿಂಗ ತೋಂಟಾಪೂರ, ರಾಮು ಮಾದರ, ಶರಣಪ್ಪ ಹರಿಜನ, ಮಾನಯ್ಯ ಶರಣಯ್ಯಮಠ ಮುಂತಾದ ಮುಖಂಡರುಗಳು ಉಪಸ್ಥಿತರಿದ್ದರು.

ಅಲ್ಲದೇ ಬೆಂಗಳೂರು, ಕಲಬುರಗಿ, ಹುಬ್ಬಳ್ಳಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ. ●

JANASHAKTHI KANNADA VARA PATRIKE JAN 23-29, 2017 Price : Rs. 10/- Date of Publication : 20 January 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಗಂಗಾವತಿಯಲ್ಲಿ ಯಶಸ್ವಿ 'ಎಡ ಪರ್ಯಾಯ' ಸಮಾವೇಶ
"ಬಿಜೆಪಿ-ಕಾಂಗ್ರೆಸ್ ಗಳು ಒಂದೇ ನಾಣ್ಯದ ಎರಡು ಮುಖಗಳು"

ಅಲ್ಲಿಂದ ಕಾ. ಸರ್ಕಾರ್ ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಸಿಪಿಐ(ಎಂ) ಏರ್ಪಡಿಸಿದ್ದ 'ಎಡ ಪರ್ಯಾಯ' ಸಮಾವೇಶ ಉದ್ಘಾಟನೆ ಮಾಡಲು ತೆರಳಿದರು. ಹಾದಿಯುದ್ದಕ್ಕೂ ಕೆಂಬಾವುಟಗಳು, ಕೆಂಪು ಬಂಟಿಂಗ್ ಗಳು ಮತ್ತು ಕೆಂಬಾವುಟ ಹಿಡಿದ ಅಭಿಮಾನಿಗಳು ಅವರನ್ನು ಸ್ವಾಗತಿಸಿದರು. ಕಂಪ್ಲಿಯಲ್ಲಿ ಸಾವಿರಕ್ಕೂ ಹೆಚ್ಚು ಜನ ಅವರನ್ನು ಸ್ವಾಗತಿಸಲು ಕಾದಿದ್ದು, ಅಲ್ಲಿ ವಾಹನದಿಂದ ಇಳಿದು ಜನರ ಪ್ರೀತಿ ಆದರಗಳನ್ನು ಸ್ವೀಕರಿಸಿದರು. ಅಷ್ಟು ಹೊತ್ತಿಗೆ ಗಂಗಾವತಿಯಲ್ಲಿ ಭಾರಿ ಮೆರವಣಿಗೆಗಳಲ್ಲಿ ಬಂದು ಹತ್ತು ಸಾವಿರಕ್ಕೂ ಹೆಚ್ಚು ಜನ ನೆರೆದಿದ್ದರು. ಇದು ಗಂಗಾವತಿಯಲ್ಲಿ

ಕಾ. ಸರ್ಕಾರ್ ಸಮಾವೇಶವನ್ನು ನಗಾರಿ ಬಾರಿಸುವುದರೊಂದಿಗೆ ಉದ್ಘಾಟಿಸಿದರು. 2014 ಲೋಕಸಭಾ ಚುನಾವಣೆ ಪ್ರಚಾರದಲ್ಲಿ ಮೋದಿ ಅವರು ಮಾಡಿದ ಆಶ್ವಾಸನೆಗಳಲ್ಲಿ ಯಾವುದನ್ನೂ ಈಡೇರಿಸಿಲ್ಲ. ಬೆಲೆಏರಿಕೆ ತಡೆಯುವುದು, ಸ್ವಿಸ್ ಬ್ಯಾಂಕಿನಲ್ಲಿರುವ ಕಪ್ಪು ಹಣ ವಾಪಸು ತಂದು ಪ್ರತಿ ಒಬ್ಬರ ಅಕೌಂಟಿನಲ್ಲಿ 15 ಲಕ್ಷ ರೂ. ಹಾಕುವುದು, ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿ, ರೈತರ ಬೆಳೆಗಳಿಗೆ ಉತ್ಪಾದನಾ ವೆಚ್ಚದ ಒಂದುವರೆ ಪಟ್ಟು ಬೆಂಬಲ ಬೆಲೆ ಕೊಡುವುದು – ಮುಂತಾದವುಗಳನ್ನು ಈಡೇರಿಸುವ ಬದಲು ನೋಟು ನಿಷೇಧದಂತಹ ಕ್ರಮಗಳ ಮೂಲಕ ಇನ್ನಷ್ಟು ಸಂಕಷ್ಟಗಳನ್ನು ಜನತೆಯ ಮೇಲೆ ಹೇರುತ್ತಿದ್ದಾರೆ. ಕಾಂಗ್ರೆಸ್ ಆರು ದಶಕಗಳಷ್ಟು ಕಾಲ ಆಡಳಿತ ನಡೆಸಿ ಎಲ್ಲಾ ರಂಗಗಳಲ್ಲಿ ವಿಫಲರಾಗಿದ್ದಾರೆ ಎಂದು ಜನರ ಆಕ್ರೋಶ ಬಳಸಿ ಅಧಿಕಾರಕ್ಕೆ ಬಂದ ಬಿಜೆಪಿಗೂ, ಕಾಂಗ್ರೆಸಿಗೂ ನೀತಿ-ಧೋರಣೆಗಳಲ್ಲಿ ಏನೇನೂ ವ್ಯತ್ಯಾಸವಿಲ್ಲ. ಅವರ ಆಶ್ವಾಸನೆಗಳನ್ನು ಈಡೇರಿಸುವ ಶಕ್ತಿನೂ ಇಲ್ಲ ಮನಸ್ಸೂ ಇಲ್ಲ. ಆದ್ದರಿಂದ ಬಿಜೆಪಿ ಧರ್ಮ-ಜಾತಿಗಳ ಆಧಾರದ ಮೇಲೆ ಜನರನ್ನು ಒಡೆದು ಆಳುವ ಹುನ್ನಾರ ನಡೆಸುತ್ತಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಎಡ ಪಕ್ಷಗಳೇ ನಿಜವಾದ ಬದಲಿ. ತ್ರಿಪುರಾ ಸೇರಿದಂತೆ ಎಡರಂಗ ಮತ್ತು ಎಡ-ಪ್ರಜಾಸತ್ತಾತ್ಮಕ ರಂಗದ ಸರ್ಕಾರಗಳು ರೂಪಿಸಿರುವ ಪರ್ಯಾಯ ನೀತಿಗಳನ್ನು ದೇಶವ್ಯಾಪಿಯಾಗಿ ತೆಗೆದುಕೊಂಡು ಹೋಗಿ ಎಡ-ಪರ್ಯಾಯ ಕಟ್ಟಬೇಕಾಗಿದೆ ಎಂದು ಕಾ. ಸರ್ಕಾರ್ ಕರೆ ನೀಡಿದರು.

ರಾಜ್ಯ ಕಾರ್ಯದರ್ಶಿ ಕಾ. ಶ್ರೀರಾಮರೆಡ್ಡಿ ಅವರು ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರಕಾರಗಳನ್ನು ಹಿಂದೆ ಮತ್ತು ಇಂದು ನಡೆಸಿದ ಬಿಜೆಪಿ ಮತ್ತು ಕಾಂಗ್ರೆಸಿನ ನೀತಿಗಳ ನಡುವೆ ಯಾವುದೇ ವ್ಯತ್ಯಾಸ ಇಲ್ಲ. ಈ ಎರಡೂ ಪಕ್ಷಗಳು ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಮತ್ತು ಜನರ ಗಮನ ಬೇರೆಡೆಗೆ ತಿರುಗಿಸಲು ಕೋಮುದ್ವೇಷವನ್ನು ದಂಗೆಗಳನ್ನು ಹುಟ್ಟಿಸಲಾಗುತ್ತಿದೆ. ಇದಕ್ಕೆ ಇತ್ತೀಚೆಗೆ ಇದೇ ಗಂಗಾವತಿಯಲ್ಲೂ ಹೊಸಪೇಟೆಯಲ್ಲೂ ಎರಡೂ ಪಕ್ಷಗಳ ಕುಮ್ಮಕ್ಕಿನಿಂದ ನಡೆದ ಕೋಮುಗಲಭೆಗಳೇ ಸಾಕ್ಷಿ. ಆದ್ದರಿಂದ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರ ಇದಕ್ಕೆ ಪರ್ಯಾಯವಾಗಲು ಸಾಧ್ಯ. ತ್ರಿಪುರಾ, ಕೇರಳಗಳಲ್ಲಿ ಜಾರಿ ಮಾಡಲಾಗಿರುವ ಮತ್ತು ಕೇಂದ್ರದಲ್ಲಿ ಜಾರಿ ಮಾಡಬೇಕಾದ ಎಡ ಪರ್ಯಾಯ ನೀತಿಗಳನ್ನು ವಿವರಿಸಿ, ಕರ್ನಾಟಕದಲ್ಲೂ ಇದಕ್ಕಾಗಿ ಸಿಪಿಐ(ಎಂ) ಮತ್ತು ಎಡಪಕ್ಷಗಳನ್ನು ಬಲಪಡಿಸಬೇಕೆಂದು ಕಾ. ರೆಡ್ಡಿಯವರು ಕರೆಯಿತ್ತರು. ಸಮಾವೇಶವನ್ನು ಉದ್ದೇಶಿಸಿ ಕಾ. ನಿತ್ಯಾನಂದಸ್ವಾಮಿ, ಕಾ. ಕೆ. ನಾಗರಾಜ್ ಮುಂತಾದವರು ಮಾತನಾಡಿದರು. ●





ಹಂಪಿ ವಿ.ವಿ.ಯಲ್ಲಿ ಉಪನ್ಯಾಸ
'ತ್ರಿಪುರಾದಲ್ಲಿ ರೈತ ಆತ್ಮಹತ್ಯೆಗಳಿಲ್ಲ'


ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಕಾ. ಮಾಣಿಕ್ ಸರ್ಕಾರ್ ಅವರನ್ನು 'ತ್ರಿಪುರಾದ ರಾಜಕೀಯ ಆರ್ಥಿಕ' ಎಂಬ ವಿಷಯದ ಮೇಲೆ ಉಪನ್ಯಾಸ ಮಾಡಲು ಆಹ್ವಾನಿಸಲಾಗಿತ್ತು. ಅವರನ್ನು ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ. ಚಂದ್ರ ಪೂಜಾರಿ ನೆರೆದ ವಿ.ವಿ.ಯ ಅಧ್ಯಾಪಕರು, ಸಂಶೋಧಕರು, ವಿದ್ಯಾರ್ಥಿಗಳು ಮತ್ತು ಇತರ ಆಸಕ್ತರಿಗೆ ಪರಿಚಯ ಮಾಡಿಸಿದರು. ಚುನಾವಣಾ ಅಭ್ಯರ್ಥಿಗಳ ಆಸ್ತಿ ಬಗ್ಗೆ ಅಧ್ಯಯನ ವರದಿಯೊಂದರಲ್ಲಿ ತ್ರಿಪುರಾದ ಎಲ್ಲಾ ಸಿಪಿಐ(ಎಂ) ವಿಧಾನಸಭೆ/ಲೋಕಸಭೆ ಅಭ್ಯರ್ಥಿಗಳ ಆಸ್ತಿ ದೇಶದಲ್ಲೇ ಅತಿ ಕಡಿಮೆ ಎಂಬ ವಿಚಾರ ಗೊತ್ತಾಯಿತು. ಅದೇ ರೀತಿ ಮಾಣಿಕ್ ಸರ್ಕಾರ ಅವರು ದೇಶದಲ್ಲೇ ಆಸ್ತಿಯೇ ಇಲ್ಲದಿರುವ ಮುಖ್ಯಮಂತ್ರಿ ಎಂದು ತಿಳಿದು ಆಶ್ಚರ್ಯವಾಗಿತ್ತು. ಮಾತ್ರವಲ್ಲ, ಜಿಡಿಪಿ ಕಡಿಮೆ ಇದ್ದರೂ ಕೃಷಿ ಶಿಕ್ಷಣ ಆರೋಗ್ಯ ಗಳಿಗೆ ಅತ್ಯಂತ ಹೆಚ್ಚಿನ ಆದ್ಯತೆ ಕೊಟ್ಟು ಮಾನವ ಅಭಿವೃದ್ಧಿಯಲ್ಲಿ ಆಶ್ಚರ್ಯಕರ ಪ್ರಗತಿ ಸಾಧಿಸಿರುವ ರಾಜ್ಯ ಇದು. ಇಂತಹ ರಾಜ್ಯದ ರಾಜಕೀಯ ಆರ್ಥಿಕದ ಬಗ್ಗೆ ಮುಖ್ಯಮಂತ್ರಿಗಳಿಂದಲೇ ಕೇಳುವುದು ಅಪೂರ್ವ ಅವಕಾಶ ಎಂದು ಅವರು ಕಾ. ಸರ್ಕಾರ್ ಅವರ ಪರಿಚಯ ಮಾಡುತ್ತಾ ಹೇಳಿದರು. ನವ-ಉದಾರವಾದಿ ಅವಧಿಯಲ್ಲಿ ಆರಂಭವಾದರೂ ಜನತೆಯ ನಡುವೆ ಇರುವ ಜ್ಞಾನದ ಅನ್ವೇಷಣೆ, ಅಂತರ್-ಶಿಸ್ತೀಯ ಅಧ್ಯಯನಗಳು ಮತ್ತು ಕನ್ನಡದಲ್ಲಿಯೇ ಸಂಶೋಧನೆ/ಜ್ಞಾನದ ಉತ್ಪಾದನೆ ಹಂಪಿ ಕನ್ನಡ ವಿ.ವಿ.ಯ ವಿಶಿಷ್ಟತೆಗಳು ಎನ್ನುತ್ತಾ, ವಿ.ವಿ.ಯ ಸಂರಚನೆ ಮತ್ತು ಅಕಾಡೆಮಿಕ್ ಚಟುವಟಿಕೆಗಳ ಬಗ್ಗೆ ಕಾ. ಸರ್ಕಾರ್ ಅವರಿಗೆ ಇಂಗ್ಲೀಷಿನಲ್ಲಿ ಪರಿಚಯ ಮಾಡಿಸಿದರು.

ಎಡರಂಗ 1978ರಲ್ಲಿ ಅಧಿಕಾರ ವಹಿಸಿಕೊಂಡಾಗ ದಶಕಗಳ ಕಾಂಗ್ರೆಸ್ ಆಡಳಿತದ ನಂತರ ಇದ್ದ ಗಂಭೀರ ಪರಿಸ್ಥಿತಿಯಿಂದ ಕಾ. ಸರ್ಕಾರ್ ಅವರು ಆರಂಭಿಸಿ, ಎಡರಂಗದ ಅಭಿವೃದ್ಧಿ ಕಣ್ನೋಟ ಮತ್ತು ಸಾಧಿಸಿರುವ ಪ್ರಗತಿಯನ್ನು ವಿವರವಾಗಿ ತಿಳಿಸಿದರು. ಹಸಿವು ಸಾವುಗಳು, ಕಡು ಬಡತನದಿಂದ ಮಕ್ಕಳ ಮಾರಾಟ, ವ್ಯಾಪಕ ನಿರಕ್ಷರತೆಯಿಂದ ನರಳುತ್ತಿದ್ದ ಜನತೆಯ ಬದುಕು ಉತ್ತಮ ಪಡಿಸುವುದು ತನ್ನ ಪ್ರಮುಖ ಆದ್ಯತೆ ಎಂಬ ನೀತಿಯನ್ನು ಎಡರಂಗ ಅಂಗೀಕರಿಸಿತು. ಗ್ರಾಮೀಣ ಬಡವರ ಬದುಕು ಉತ್ತಮಗೊಳ್ಳಬೇಕಾದರೆ ಕೃಷಿಗೆ ಉತ್ತೇಜನ ಮತ್ತು ಭೂಸುಧಾರಣೆ ಅಗತ್ಯ. ವ್ಯಾಪಕ ಭೂಸುದಾರಣೆಗಳನ್ನು ಮಾಡಲಾಯಿತು. ಕೃಷಿಗೆ ಉತ್ತೇಜನ ಕೊಡಲು ಭೂಸುಧಾರಣೆ ಅಲ್ಲದೆ ರೈತರಿಗೆ ಉಚಿತವಾಗಿ ಕೃಷಿ ನೀರು ಒದಗಿಸುವ ವ್ಯಾಪಕ

ಪುಟ 15 ಕ್ಕೆ



ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**